"ಅಗ್ರಗಾಮಿ" ಪ್ರಾವೀಣ್ಯತಾ ಪದಕ

(ಅಗ್ರಗಾಮಿ ಪ್ರಾವೀಣ್ಯತಾ ಪದಕಕ್ಕೆ ಕೈಪಿಡಿ)



ಲೇಖಕರು

ಕೆ.ಎಸ್. ಪ್ರತಿಮ್‌ಕುಮಾರ್, ಎಲ್.ಟಿ. (ಸ್ಕೌಟ್ಸ್)

ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ

vivo V23 Pro



"ಅಗ್ರಗಾಮಿ" ಪ್ರಾವೀಣ್ಯತಾ ಪದಕ

(ಅಗ್ರಗಾಮಿ ಪ್ರಾವೀಣ್ಯತಾ ಪದಕಕ್ಕೆ ಕೈಪಿಡಿ)

ಲೇಖಕರು

ಕೆ.ಎಸ್. ಪ್ರತಿಮ್‌ಕುಮಾರ್, ಎಲ್.ಟಿ. (ಸ್ಕೌಟ್ಸ್)

ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

#39, ಶಾಂತಿ ಗೃಹ, ಅರಮನೆ ರಸ್ತೆ, ಬೆಂಗಳೂರು-560 001

ದೂರವಾಣಿ: 080-22260017, 22267490

ಇ-ಮೇಲ್: info@bsgkarnataka.org

"ಅಗ್ರಗಾಮಿ" ಪ್ರಾವೀಣ್ಯತಾ ಪದಕ

(ಅಗ್ರಗಾಮಿ ಪ್ರವೀಣತಾ ಪದಕಕ್ಕೆ ಕೈಪಿಡಿ)

ಲೇಖಕರು

ಕೆ.ಎಸ್. ಪ್ರತಿಮ್‌ಕುಮಾರ್, ಎಲ್.ಟಿ. (ಸ್ಕೌಟ್)

ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ

ಪ್ರಕಾಶಕರು

ಭಾರತ್ ಸೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ

ಬೆಂಗಳೂರು–560 001.

ಮೊದಲ ಮುದ್ರಣ : **2014**

ಎರಡನೇ ಮುದ್ರಣ : **2024**

ಹಕ್ಕುಗಳು : **ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ**

ಪುಟಗಳು :

ದರ : 40/–

ಮುದ್ರಕರು:

ಮುನ್ನುಡಿ

ಶತಮಾನಕ್ಕಿಂತಲೂ ಹೆಚ್ಚಿನ ಇತಿಹಾಸ ಹೊಂದಿರುವ ಸ್ಕೌಟ್ಸ್ ಗೈಡ್ಸ್ ಚಳುವಳಿಯ ಮೂಲಭೂತ ತತ್ವಗಳು ಮತ್ತು ಅದರ ಅಗತ್ಯತೆ ಪ್ರಸಕ್ತ ಸನ್ನಿವೇಶಕ್ಕೆ ಹೆಚ್ಚು ಪ್ರಸ್ತುತವೆನಿಸಿವೆ.

ಈ ಚಳುವಳಿಯ ಒಂದು ವಿಶಿಷ್ಟ ಹಾಗೂ ಗೌರವ ತಂದುಕೊಡುವ ವಿಧಾನಗಳಲ್ಲಿ ಒಂದಾಗಿರುವ "ಪದಕ ಪದ್ಧತಿ" ಅರ್ಥಪೂರ್ಣ ಮತ್ತು ಅಮೋಘವಾಗಿದೆ. ಆರು ಹಂತಗಳಲ್ಲಿ ಪ್ರಗತಿಪರ ಪದಕಗಳೂ, ಅಭಿರುಚಿಗೆ ತಕ್ಕಂತೆ ಆಯ್ದುಕೊಂಡು ಪರಿಣಿತರಾಗಲು 96 ಪ್ರವೀಣತಾ ಪದಕಗಳೂ ಇವೆ. ಈ ಪದಕಗಳು ಮಕ್ಕಳನ್ನು ಸ್ವಾವಲಂಬಿಗಳನ್ನಾಗಿ, ನಿಸ್ವಾರ್ಥರನ್ನಾಗಿ ಹಾಗೂ ಪರಹಿತ ಸೇವಾ ಮನೋಭಾವ ಉಳ್ಳವರನ್ನಾಗಿ ಪರಿವರ್ತಿಸುವುದರಲ್ಲಿ ಸಂದೇಹವಿಲ್ಲ.

ಪ್ರವೀಣತಾ ಪದಕಗಳ ಬಗ್ಗೆ ಕನ್ನಡ ಭಾಷೆಯಲ್ಲಿ ಸಾಹಿತ್ಯಗಳ ಕೊರತೆ ಇದ್ದ ಸಂದರ್ಭದಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯ ತರಬೇತುದಾರರಲ್ಲೊಬ್ಬರಾದ ಶ್ರೀ ಕೆ.ಎಸ್.ಪ್ರತೀಮ್ ಕುಮಾರ್ ಅವರು 2014ರಲ್ಲಿ ಸಿದ್ದಪಡಿಸಿಕೊಟ್ಟಿದ್ದ "ಅಗ್ರಗಾಮಿ" ಪ್ರವೀಣತಾ ಪದಕದ ಕೈಪಿಡಿ ತರಬೇತುದಾರರಿಗೆ ಮತ್ತು ಮಕ್ಕಳಿಗೆ ಅತ್ಯಂತ ಉಪಯುಕ್ತವಾಗುತ್ತಿದೆ. ಶ್ರೀ ಪ್ರತೀಮ್ ಕುಮಾರ್ ಅವರಿಗೆ ನನ್ನ ಶುಭಾಶಯಗಳು. ಈಗ ಈ ಕೈಪಿಡಿ ಮರುಮುದ್ರಣ ಗೊಳ್ಳುತ್ತಿರುವುದು ಸಂತೋಷದ ವಿಚಾರ.

ಈ ಕೈಪಿಡಿಯನ್ನು ಮರುಮುದ್ರಣಗೊಳ್ಳಲು ಮತ್ತಷ್ಟು ಸಲಹೆ, ಸೂಚನೆಗಳೊಂದಿಗೆ, ಪ್ರಕಟಣೆಗೆ ಸಿದ್ದಗೊಳ್ಳುವ ನಿಟ್ಟಿನಲ್ಲಿ ಸಹಾಯ

ಮಾಡಿರುವ ರಾಜ್ಯಸಂಸ್ಥೆಯ ಪ್ರಕಟಣೆಗಳ ಸಮಿತಿಯ ಅಧ್ಯಕ್ಷರಾದ ಶ್ರೀ ಗೊ. ರು.ಚನ್ನಬಸಪ್ಪ ಅವರಿಗೆ ಮತ್ತು ಸಮಿತಿಯ ಎಲ್ಲಾ ಸದಸ್ಯರುಗಳಿಗೆ ಹೃತ್ಪೂರ್ವಕ ಅಭಿನಂದನೆಗಳು.

ಈ ಕೈಪಿಡಿಯು ಹೆಚ್ಚು ಪರಿಣಾಮಕಾರಿಯಾಗಿ, ಜನಪ್ರಿಯತೆಗಳಿಸುತ್ತದೆ ಎಂದು ಆಶಿಸುತ್ತೇನೆ.

ಪಿ.ಜಿ.ಆರ್.ಸಿಂಧ್ಯ

ನನ್ನ ಮಾತು

ಸ್ಕೌಟಿಂಗ್ ಶತಮಾನೋತ್ಸವ ಆಚರಣೆಯ ಸಂದರ್ಭಕ್ಕೆ ಸರಿಯಾಗಿ, ನನ್ನ ಎಲ್.ಟಿ. ತರಬೇತಿಯ ಅಂಗವಾಗಿ ಅಧ್ಯಯನ ಪ್ರಬಂಧವನ್ನು ಬರೆಯುವ ಕಾರ್ಯ ಕೂಡಿಬಂದದ್ದು ನನ್ನ ಸುಯೋಗವೆಂದು ಭಾವಿಸುತ್ತೇನೆ. ಅಧ್ಯಯನ ಪ್ರಬಂಧಕ್ಕೆ ನಾನು ಆರಿಸಿಕೊಂಡ ವಿಷಯ "ಅಗ್ರಗಾಮಿ ಪ್ರವೀಣ್ಯತಾ ಪದಕ". ನನಗೆ ಎಲ್.ಟಿ. ಪ್ರಮಾಣ ಪತ್ರ ಬಂದಿತು. ಈ ನನ್ನ ಕಾರ್ಯವನ್ನು ಗುರುತಿಸಿ ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ ಮಂಗಳೂರು ಜಿಲ್ಲೆಯ ಸ್ಕೌಟ್-ಗೈಡ್‌ಗಳ ಉಪಯೋಗಕ್ಕಾಗಿ ಈ ಪುಸ್ತಕವನ್ನು 2009ರಲ್ಲಿ ಪ್ರಕಟಿಸಿದರು. ಜಿಲ್ಲಾ ಸಂಸ್ಥೆಗೆ ನನ್ನ ಕೃತಜ್ಞತೆಗಳು.

ಆದರೆ ಇದೀಗ ರಾಜ್ಯ ಸಂಸ್ಥೆಯವರು ನನ್ನ ಕೃತಿಯಾದ "ಅಗ್ರಗಾಮಿ" ಪ್ರವೀಣ್ಯತಾ ಪದಕದ ಕೈಪಿಡಿಯನ್ನು ರಾಜ್ಯ ಸಂಸ್ಥೆಯಿಂದ, ವಿಸ್ತೃತ ಮಟ್ಟದಲ್ಲಿ ಪ್ರಕಟಿಸುತ್ತಿರುವುದು, ನನ್ನನ್ನು ಪುಳಕಿತನನ್ನಾಗಿಸಿದೆ. ರಾಜ್ಯ ಸಂಸ್ಥೆಯ ಈ ಔದಾರ್ಯಕ್ಕೆ ನಾನು ಚಿರಋಣಿ.

ಈ ಪುಸ್ತಕವನ್ನು ಪ್ರಕಟನೆಗಾಗಿ ಆಯ್ಕೆಮಾಡಿ ಪ್ರೋತ್ಸಾಹ ನೀಡಿರುವ ಪ್ರಕಟನಾ ಸಮಿತಿಯ ಅಧ್ಯಕ್ಷರಾದ ಮಾನ್ಯ ಶ್ರೀ ಗೊ.ರು. ಚನ್ನಬಸಪ್ಪನವರನ್ನೂ, ಸಮಿತಿಯ ಸದಸ್ಯರುಗಳಾದ ಶ್ರೀ ಟಿ.ಎಸ್. ಲೂಕಾಸ್, ಎಲ್.ಟಿ. (ಸ್ಕೌಟ್ಸ್), ಶ್ರೀ ಎನ್. ಶ್ರೀನಿವಾಸನ್, ಎಲ್.ಟಿ. (ಸ್ಕೌಟ್ಸ್), ಶ್ರೀ ಚಿನ್ನಸ್ವಾಮಿರೆಡ್ಡಿ, ಎಲ್.ಟಿ. (ಸ್ಕೌಟ್ಸ್), ರಾಜ್ಯ ತರಬೇತಿ ಆಯುಕ್ತರು (ಸ್ಕೌಟ್ಸ್), ರಾಜ್ಯ ಸಂಘಟನಾ ಆಯುಕ್ತರು (ಸ್ಕೌಟ್ಸ್) ಹಾಗೂ, ಪ್ರಬಂಧರೂಪದ ನನ್ನ ಪುಸ್ತಕವನ್ನು ರಾಜ್ಯಸಂಸ್ಥೆಯ ಪ್ರಕಟನೆಗೆ ಸಿದ್ಧಪಡಿಸಿರುವ ಶ್ರೀ ರಾ. ಚಂದ್ರಶೇಖರನ್ ಇವರುಗಳಿಗೆ ನನ್ನ ಹೃತ್ಪೂರ್ವಕ ವಂದನೆಗಳು,

ನಾನು ಬರೆದ ಕೃತಿಯು ಬೃಹದಾಕಾರ ತಾಳಿ ರಾಜ್ಯದ ಬಹಳಷ್ಟು ಸ್ಕೌಟ್ಸ್ – ಗೈಡ್ಸ್‌ಗಳ ಹಾಗೂ ಸ್ಕೌಟರ್ ಗೈಡರ್‌ಗಳ ಕೈಸೇರಿ ಉಪಯೋಗವಾಗಲಿದೆ ಎಂಬ ಅಂಶವು ನನಗೆ ಸಂತೋಷವುಂಟು ಮಾಡಿದೆ.

ನನ್ನ ಪ್ರಬಂಧಕ್ಕೆ ಆಶೀರ್ವದಿಸಿ ಮುನ್ನುಡಿ ಬರೆದು ಕೊಟ್ಟಿರುವ ಕರ್ನಾಟಕ ರಾಜ್ಯ ಪ್ರಧಾನ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ ಅವರಿಗೆ ನನ್ನ ನಮನಗಳು.

ಕೆ.ಎಸ್. ಪ್ರತಿಮ್‌ಕುಮಾರ್

ಬೆಂಗಳೂರು–02 ಎಲ್.ಟಿ. (ಸ್ಕೌಟ್ಸ್)

ಎರಡನೇ ಮುದ್ರಣಕ್ಕೆ ನನ್ನ ಮಾತು

ಆತ್ಮೀಯರೇ,

ನನ್ನ ಈ "ಅಗ್ರಗಾಮಿ" ಪುಸ್ತಕ 2014ರಲ್ಲಿ ಸ್ಕೌಟಿಂಗ್, ಗ್ರೇಡಿಂಗ್‌ಗಾಗಿ ರಾಜ್ಯ ಸಂಸ್ಥೆ ಪ್ರಕಟಣೆ ಮಾಡಿ ಎಲ್ಲರಲ್ಲಿ ಕೌಶಲ್ಯಗಳು ಬೆಳೆಯುವಲ್ಲಿ ಸಹಕಾರಿಯಾಗಿದೆ.

ಅದರಂತೆ 2024ರಲ್ಲಿ ಪುನಃ ಶ್ರೀ ಎನ್. ಶ್ರೀನಿವಾಸನ್, ಎಲ್.ಟಿ. (ಸ್ಕೌಟ್ಸ್) ರವರ ಮಾರ್ಗದರ್ಶನದಲ್ಲಿ ಸ್ವಲ್ಪ ಬದಲಾವಣೆ ಮಾಡಿ ಇನ್ನು ಹೆಚ್ಚು ಸಂತೋಷಪಡುವಂತೆ ಸಾಹಸಮಯ ಚಟುವಟಿಕೆ ಸಂಬಂಧಿಸಿದ ಕೌಶಲ್ಯಗಳನ್ನು ಸೇರಿಸಲಾಗಿದೆ. ಇದಕ್ಕೆ ಸಹಕರಿಸುತ್ತಿರುವ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ. ಪಿ.ಜಿ.ಆರ್. ಸಿಂಧ್ಯಾರವರಿಗೆ ಗೌರವ ಸಲ್ಲಿಸುತ್ತೇನೆ ಹಾಗೂ ರಾಜ್ಯ ಆಯುಕ್ತರಾದ ಶ್ರೀ ಎಂ.ಎ. ಖಾಲಿದ್, ರಾಜ್ಯ ಸಂಘಟನಾ ಆಯುಕ್ತರಾದ ಎಂ. ಪ್ರಭಾಕರ್ ಭಟ್ ಎಲ್.ಟಿ. (ಸ್ಕೌಟ್ಸ್), ರಾಜ್ಯ ತರಬೇತಿ ಆಯುಕ್ತರಾದ ಶ್ರೀ ನಾಗೇಶ್ ಆರ್. ಶಿವಪುರ ಎಲ್.ಟಿ. (ಸ್ಕೌಟ್ಸ್) ಇವರಿಗೆ ನನ್ನ ವಂದನೆಗಳು.

ಕೆ.ಎಸ್. ಪ್ರತಿಮ್‌ಕುಮಾರ್

ಬೆಂಗಳೂರು–02 ಎಲ್.ಟಿ. (ಸ್ಕೌಟ್ಸ್)

1. 'ಅಗ್ರಗಾಮಿ' ಪ್ರಾವೀಣ್ಯತಾ ಪದಕದ ಪರೀಕ್ಷಾಂಶಗಳು

1. 22.5 ಸೆಂ.ಮೀ. (9 ಅಂ) ಸುತ್ತಳತೆಯ ಮರವನ್ನು ಅಥವಾ 12.5 ಸೆಂ.ಮೀ. (5 ಅಂ)ಗೆ ಕಡಿಮೆ ಇಲ್ಲದ ಸುತ್ತಳತೆಯ ಅಟ್ಟಣಿಗೆ ಕಂಬವನ್ನು ಕತ್ತರಿಸುವುದರಲ್ಲಿ ನಿಪುಣತೆಯನ್ನು ಪ್ರದರ್ಶಿಸಬೇಕು.

2. ವಿವಿಧ ಬಗೆಯ ಹಗ್ಗಗಳು, ಅವುಗಳ ಹೊಸೆಯುವಿಕೆ, ಗಾತ್ರ, ಅವುಗಳನ್ನು ಸಂಗ್ರಹಿಸಿಡುವುದು, ರಕ್ಷಣೆಯ ಬಗ್ಗೆ ಪ್ರಾಥಮಿಕ ಅರಿವು ಇರಬೇಕು.

3. ಪ್ರಥಮ ಸೋಪಾನ್ [ಸಮಗಂಟು, ಮೂಲೆಗಂಟು, ಕೊಟ್ಟಿಗೆಗಂಟು, ಬೆಸ್ತರಗಂಟು, ಕಣಕಾಲುಗಂಟು, ಸುತ್ತೊಂದೆರಡರೆ ಮಲಕುಗಂಟು] ಮತ್ತು ದ್ವಿತೀಯ ಸೋಪಾನ್ [ದಿಮ್ಮಿಗಂಟು, ಉರುಳುಗಂಟು, ಏಣಿಗಂಟು, ಸನ್ನೆಗಂಟು, 8 ಆಕಾರಗಂಟು, ಸರಳಕಟ್ಟು (ಕತ್ತರಿಕಟ್ಟು) µ ಆಕಾರಕಟ್ಟು (ಚೌಕಕಟ್ಟು) ಮೂಲೆಕಟ್ಟು (ಕರ್ಣಕಟ್ಟು) ಇವುಗಳನ್ನು ಹಾಕಿ ತೋರಿಸುವುದು ಮತ್ತು ಉಪಯೋಗ, ನಾಲ್ಕು ಶಿಬಿರ ಸಾಧನಗಳ ಉಪಯೋಗ, ಪ್ರದರ್ಶನ ಹಾಗೂ ಸುತ್ತಿನಲ್ಲಿ (ಕುಣಿಯಲ್ಲಿ) ಕುಣಿಕೆಗಂಟು, ಬೆಕ್ಕಿನ ಪಂಜುಗಂಟು, ಇಮ್ಮೂಲೆಗಂಟು, ಏಣಿಗಂಟು, ಸನ್ನೆಗಂಟು, ಜಾಡುಮಲುಕು, ಬೆಸ್ತರಮಲಕು ಗಂಟುಗಳನ್ನು ಹಾಕಬೇಕು.

4. ಎಂಟರ ಕಟ್ಟನ್ನು ಬಳಸಿ, ಒಂದು ದಂಡಕ್ಕೆ ಬಡಗಿಯನ್ನು ಕಟ್ಟಬೇಕು ಮತ್ತು ಬೇರೆ ಬೇರೆ ವಿಧದ ಎರಡು ಬಗೆಯ ಬಿಗಿಹಿಡಿತಗಳನ್ನು ಭೂಮಿಯನ್ನು 'ಅನುಸರಿಸಿ ಕಟ್ಟಬೇಕು.

5. ಒಂದು ಮಾದರಿ ಸೇತುವೆ ಅಥವಾ ಎತ್ತು ಯಂತ್ರ ಮತ್ತು ಏಣಿ ಕಟ್ಟಬೇಕು.

6. ಶಿಬಿರ ಪಾಕಶಾಲೆ ನಿರ್ಮಿಸಬೇಕು ಅಥವಾ ತನ್ನನ್ನು ತಾನು ಸಾಗಿಸಬಲ್ಲ ತೇಲು ದೋಣಿ ತಯಾರಿಸಬೇಕು.

7. ಮೂವರಿಗೆ ಅವಕಾಶವುಳ್ಳ ಶಿಬಿರ ಡೇರೆ ಅಥವಾ ಗುಡಿಸಲು ನಿರ್ಮಿಸಬೇಕು.

8. ಪ್ರಥಮ ಸೋಪಾನ್ ಮತ್ತು ದ್ವಿತೀಯ ಸೋಪಾನ್‌ಗಳ ಅಗ್ರಗಾಮಿ ಪರೀಕ್ಷೆಗಳಲ್ಲಿ ಪುನರುತ್ತೀರ್ಣನಾಗಬೇಕು.

9. ಒಂಟಿ ರಾಟೆ, ಜೋಡಿ ರಾಟೆಗಳನ್ನು ಬಳಸಿ ಬ್ಲಾಕ್ ಅಂಡ್ ಟ್ಯಾಕಲ್ ತಯಾರಿಸಲು ತಿಳಿದಿರಬೇಕು.

ಪ್ರಥಮ ಸೋಪಾನ್, ದ್ವಿತೀಯ ಸೋಪಾನ್, ತೃತೀಯ ಸೋಪಾನ್‌ಗಳ ಅಗ್ರಗಾಮಿ ಪರೀಕ್ಷಾಂಶಗಳು

1. ಗಂಟುಗಳು

2. ಹುರಿ ಸುತ್ತುವುದು.

3. ಬೆಂಕಿ ಜೋಡಣೆ, ಬೆಂಕಿ ಮಾಡುವುದು, ಸೀಮೆ ಎಣ್ಣೆ ಅಥವಾ ಅನಿಲ ಒಲೆಯನ್ನು ಸ್ವಚ್ಛಗೊಳಿಸಿ ಉರಿಸುವುದು.

   ಅ) ಬೆಂಕಿ ಸಂಬಂಧ ಸುರಕ್ಷತೆ.

   ಆ) ಬಕೆಟ್ ಸರಣಿ ವಿಧಾನದಲ್ಲಿ ಬೆಂಕಿ ನಂದಿಸುವುದು.

   ಇ) ಒಣಹುಲ್ಲು ಬೆಂಕಿ ನಿಭಾವಣೆ.

   ಈ) ಅನಿಲ ಸೋರಿಕೆ ಬಗ್ಗೆ ಮುನ್ನೆಚ್ಚರಿಕೆ.

4. ಮನೆಯಲ್ಲಿ ಉಪಯೋಗವಾಗುವ ಸುಧಾರಿತ ಉಪಕರಣ.

5. ಚಾಕು, ಕೊಡಲಿಗಳ ಬಳಕೆ ಮತ್ತು ಸುರಕ್ಷತಾ ಕ್ರಮಗಳ ಪ್ರದರ್ಶನ.

6. ಪಟಾಲಂನ ಎರಡು ಅಗ್ರಗಾಮಿ ಯೋಜನೆಗಳು, ತಯಾರಿ ಮತ್ತು ಉಪಯೋಗ.

[ಸೋಪಾನ್ ಪದಕಗಳ, ಅಗ್ರಗಾಮೀ ಪರೀಕ್ಷಾಂಶಗಳಲ್ಲಿ ಕೆಲವು ಅಂಶಗಳು, ಈ ಕಿರುಹೊತ್ತಿಗೆಯಲ್ಲಿ ಕಾಣದಿರಬಹುದು. ಉದಾ: ಬೆಂಕಿ ಸಂಬಂಧ ಸುರಕ್ಷತೆ, ಬಕೆಟ್ ಸರಣಿ ವಿಧಾನದಲ್ಲಿ ಬೆಂಕಿ ನಂದಿಸುವ ಕ್ರಮ; ಒಣಹುಲ್ಲು ಬೆಂಕಿ ನಿಭಾವಣೆ ಮತ್ತು ಅನಿಲ ಸೋರಿಕೆ ಬಗ್ಗೆ ಎಚ್ಚರಿಕೆ.

(ಈ ಅಂಶಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಟಿಪ್ಪಣಿ ಮಾಡಿಕೊಳ್ಳುವುದು ಸಂದರ್ಭಾನುಸಾರ ಸಹಾಯ ಮಾಡುವುದು ಸ್ಕೌಟ್-ಗೈಡ್‌ಗಳ ಕೆಲಸ. ಶ್ರೀ ಕೊಗ್ಗಗಾಣಿಗ ಅವರ "ನಾಗರಿಕ ಸಂರಕ್ಷಣೆ" ಪ್ರಾವೀಣ್ಯತಾ ಪದಕದ ಪುಸ್ತಕವು ಸಹಾಯಕವಾಗುತ್ತದೆ.)]

2. ಪ್ರಸ್ತಾವನೆ

ಕಾಡುಮೇಡುಗಳಲ್ಲಿ ಮುಂದಾಗಿ ಹೋಗಿ, ತಾವಾದ ಮೇಲೆ ಬರಬಹುದಾದ ಇತರರ ಅನುಕೂಲಕ್ಕಾಗಿ ದಾರಿ ಮಾಡಿಕೊಡುವವರು ಮಾರ್ಗಕಲ್ಪಕರು (ಅಗ್ರಗಾಮಿಗಳು–Pioneer) ಮಾರ್ಗ ಕಲ್ಪಕರ ಕೆಲಸವೇ ಮಾರ್ಗ ಕಲ್ಪನೆ/ ಅಗ್ರಗಾಮಿತ್ವ ಎಂದರೆ ಹಿಂಬಾಲಿಸಿ ಬರುವವರಿಗೆ ಅಥವಾ ಅದೇ ರೀತಿ ದಾರಿ ಹುಡುಕಿ ಬರುವವರಿಗೆ ಸುಗಮವಾದ ಮಾರ್ಗವನ್ನು ಕಲ್ಪಿಸುವುದು. ಕಲ್ಲುಮುಳ್ಳುಗಳನ್ನು ತೆಗೆದು ಸ್ವಚ್ಛಗೊಳಿಸುವುದು; ಕಂಟಕಗಳನ್ನು ನಿವಾರಿಸುವುದು; ಎಗ್ಗು ತಗ್ಗುಗಳನ್ನು ಸಮ ಮಾಡುವುದು; ಹಳ್ಳಕೊಳ್ಳಗಳು ಇದ್ದಲ್ಲಿ ತಾತ್ಕಾಲಿಕವಾಗಿ ಸೇತುವೆ ಕಟ್ಟುವುದು; ಸಾಗಣೆಗೆ ವ್ಯವಸ್ಥೆ ಮಾಡುವುದು; ಹೀಗೆ ಒಂದೇ, ಎರಡೇ! ಸ್ಥಳೀಕವಾಗಿ ದೊರಕುವ ಸಂಪನ್ಮೂಲಗಳಿಂದ ಮಾಡಿದ ವ್ಯವಸ್ಥೆಯು ತಾತ್ಕಾಲಿಕವಾದರೂ, ತಾಂತ್ರಿಕವಾಗಿರಬೇಕು, ಗಟ್ಟಿತನವಿರಬೇಕು. ಬದಲೀ ವ್ಯವಸ್ಥೆಯನ್ನು ಮಾಡಿದಾಗ, ಇದೆಲ್ಲವನ್ನೂ ಸುಲಭವಾಗಿ ಬಿಚ್ಚಿ, ಮೂಲವಸ್ತುಗಳನ್ನು ಬೇರೆಯ ಕೆಲಸಕ್ಕೆ ಉಪಯೋಗ ಮಾಡುವಂತಿರಬೇಕು.

ಈ ರೀತಿಯಲ್ಲಿ ವ್ಯವಸ್ಥೆ ಮಾಡಲು, ಅಲ್ಪಸ್ವಲ್ಪವಾದರೂ ತಾಂತ್ರಿಕಜ್ಞಾನವಿರಬೇಕು. ಮೂಲವಸ್ತುಗಳಾದ ಹಗ್ಗಗಳು; ಚಕ್ರ ರಾಟೆಗಳು; ಕೊಡಲಿ, ಗುದ್ದಲಿ, ಸನಿಕೆ; ಮಚ್ಚು; ಚೂರಿ; ಬಾಂಡ್ಲಿ ಮುಂತಾದ ಸಲಕರಣೆಗಳು; ಹಗ್ಗಗಳಿಂದ ಹಾಕಬೇಕಾದ ಸಂದರ್ಭಕ್ಕೆ ತಕ್ಕ ಗಂಟುಗಳು; ಇವೆಲ್ಲವುಗಳ ಉಪಯೋಗ, ತೂಕ, ಅಳತೆ, ದೂರ, ಉದ್ದ, ಅಗಲ, ಎತ್ತರಗಳ ಅಂದಾಜು; ದಿಕ್ಕುಗಳನ್ನು ಕಂಡುಕೊಳ್ಳುವುದು, ಸುಖಕರ ಶಿಬಿರ ಸಂಬಂಧ ವಿಷಯಗಳು, ತುರ್ತು ಸಂದರ್ಭಗಳಲ್ಲಿ ಸಂಕೇತಗಳ ಮೂಲಕ ವಾರ್ತಾ ವಿನಿಮಯ ಹೀಗೆ ಹತ್ತು ಹಲವಾರು ವಿಷಯಗಳ ತಿಳುವಳಿಕೆ ಇರಬೇಕಾಗುತ್ತದೆ.

ಈ ಕಿರು ಪುಸ್ತಿಕೆಯಲ್ಲಿ ದಿಕ್ಕುಗಳು, ಸಂಕೇತ ಕ್ರಮ ಇವುಗಳನ್ನು ಬಿಟ್ಟು ಉಳಿದ ಎಲ್ಲಾ ವಿಷಯಗಳನ್ನೂ ಸಂಗ್ರಹಿಸಿ, ಸ್ಥೂಲವಾಗಿ ನಿರೂಪಿಸಲಾಗಿದೆ.

ಹೆಚ್ಚು ವಿವರಗಳಿಗೆ 'ಬಾಲಕರಿಗಾಗಿ ಸ್ಕೌಟಿಂಗ್' ಪುಸ್ತಕದ 7, 8, 9 ಮತ್ತು 10 ಶಿಬಿರಾಗ್ನಿ ಉದಂತಗಳನ್ನು ಪರಾಮರ್ಶಿಸಿ, ಅವಶ್ಯಕತೆಯನ್ನನುಸರಿಸಿ, ಸೂಚಿಸಿರುವ ಪುಸ್ತಕಗಳ, ನುರಿತ ಹಿರಿಯ ತರಬೇತುದಾರರ ಸಹಾಯ ಪಡೆದು, ಚರ್ಚಿಸಿ ತಿಳಿದುಕೊಳ್ಳಿ.

ಇದೀಗ ಒಂದೊಂದಾಗಿ ವಿಷಯಗಳಿಗೆ ಬರೋಣ.

ವಿಷಯ ಸೂಚಿಕೆ

1.	ಅಗ್ರಗಾಮಿ ಪ್ರಾವೀಣ್ಯತಾ ಪದಕದ ಪರೀಕ್ಷಾಂಶಗಳು	.....	viii
2.	ಪ್ರಸ್ತಾವನೆ	.....	x
3.	ಹಗ್ಗಗಳು ಮತ್ತು ಅವುಗಳ ಉಪಯೋಗ	.....	1
4.	ಹೆಣಿಗೆಗಳು	.....	8
5.	ಮಾರ್ಗಕಲ್ಪನೆ–1 (ಅಗ್ರಗಾಮಿತ್ವ)	.....	11
6.	ಹುರಿ ಸುತ್ತುವುದು	.....	23
7.	ಶಿಬಿರ ಸಲಕರಣೆಗಳು	.....	25
8.	ರಾಟೆಗೆ ಸಂಬಂಧಿಸಿದ ಕಟ್ಟುಗಳು	.....	32
9.	ಸುಧಾರಿತ ಗುಡಾರಗಳು	.....	34
10.	ಶಿಬಿರದ ಒಲೆಗಳು ಮತ್ತು ಅಡುಗೆ ಉಪಕರಣಗಳು	.....	36
11.	ತೆಪ್ಪ	.....	45
12.	ಮಾರ್ಗಕಲ್ಪನೆ–II (ಅಗ್ರಗಾಮಿತ್ವ)	.....	47
13.	ಬಿಗಿಹಿಡಿತ (ಸುಭದ್ರ ಆಧಾರ) (ಹೋಲ್ಡ್ ಫಾಸ್ಟ್)	.....	49
14.	ಅಂದಾಜು ಮಾಡುವುದು	.....	51
15.	ಮಾದರಿ ಸೇತುವೆ, ಯಾಂತ್ರೀಕೃತ ಚಾಲನಾವಾಹಕ (ಡೆರಿಕ್) ಹಗ್ಗದ ಏಣಿ	.....	54
16.	ಶಿಬಿರೋಪಕರಣಗಳು	.....	57
17.	ಬ್ಲಾಕ್ & ಟ್ಯಾಕಲ್	.....	58
18.	ಗೋಪುರ, ಗೇಟು, ಸೇತುವೆ ಇತ್ಯಾದಿಗಳ ರೇಖಾಚಿತ್ರಗಳು	.....	59
19.	ಸಮಾನಾಂತರ ಶಬ್ದಕೋಶ	.....	85
20.	ಆಧಾರ ಗ್ರಂಥಗಳು	.....	89

3. ಹಗ್ಗಗಳು ಮತ್ತು ಅವುಗಳ ಉಪಯೋಗ

ಸ್ಕೌಟ್/ಗೈಡ್ ಚಟುವಟಿಕೆಗಳಿಗೆ ಹಗ್ಗವು ಒಂದು ಉಪಯುಕ್ತ ವಸ್ತುವಾಗಿದೆ. ಹಗ್ಗಗಳು ಮುಖ್ಯವಾಗಿ ಮೂರು ಮೂಲವಸ್ತುಗಳಿಂದ ತಯಾರಾಗುತ್ತವೆ. (1) ಗಿಡ ಅಥವಾ ಮರದ ಕಾಯಿ ಅಥವಾ ನಾರಿನಿಂದ ತಯಾರಿಸಿದವು. (2) ಲೋಹದಿಂದ ತಯಾರಿಸಿದವು. (3) ಕೃತಕ ನೂಲಿನಿಂದ ತಯಾರಿಸಿದವು. (ನೈಲಾನ್), ಒಂದು ಹಗ್ಗದ ಬಲವು ಅದನ್ನು ತಯಾರಿಸಿದ (ಹತ್ತಿ, ತೆಂಗಿನ ನಾರು, ಸೆಣಬು, ಮರಬಾಳೆಯ ನಾರು, ತಂತಿ, ನೈಲಾನ್ ಇತ್ಯಾದಿ) ವಸ್ತುವನ್ನು



ಹೊಂದಿಕೊಂಡಿರುತ್ತದೆ. ಹತ್ತಿಯ ಹಗ್ಗಕ್ಕಿಂತ ಮನಿಲ ಹಗ್ಗ (ಫಿಲಿಫೈನ್ಸ್ ರಾಷ್ಟದ ರಾಜಧಾನಿಯಾದ "ಮನಿಲ"ದಲ್ಲಿ ತಯಾರಿಸುವ ಮರಬಾಳೆ (Wild Banana)ಯ ನಾರಿನ ಹಗ್ಗ ಹೆಚ್ಚು ಗಟ್ಟಿಯಾಗಿರುತ್ತದೆ. ಸೆಣಬು, ಸಿಸಲ್ ಸೆಣಬು (ಯುಕಟಾನ್ ಪ್ರದೇಶದ ತಯಾರಿ) ಹಗ್ಗಗಳು ಮನಿಲ ಹಗ್ಗಕ್ಕಿಂತಲೂ ಹೆಚ್ಚು ಬಲವುಳ್ಳವುಗಳಾಗಿವೆ. ಹಗ್ಗದ ಸುತ್ತಳತೆ (Circumference)ಗೆ ಹೊಂದಿಕೊಂಡು ಅದರ ಗಾತ್ರ (ತೋರ)ವನ್ನು ಹೇಳಲಾಗುತ್ತದೆ.

ಉದಾ: 1 ಇಂಚಿನ ಹಗ್ಗ 2 ಇಂಚಿನ ಹಗ್ಗ ಇತ್ಯಾದಿ.

ಹಗ್ಗವನ್ನೇ ಸುತ್ತಿ ಕಟ್ಟಲು ಉಪಯೋಗಿಸುವ ಸಪೂರವಾದ ಕಟ್ಟು ಹಗ್ಗಗಳನ್ನು ಲ್ಯಾಷಿಂಗ್ (Lashing) ಹಗ್ಗ ಎಂದು ಕರೆಯುತ್ತೇವೆ. ಅವುಗಳನ್ನು ಉಪಯೋಗಿಸುವ ಆಧಾರದಲ್ಲಿ ಅವುಗಳನ್ನು ಬಾವಿಯ ಹಗ್ಗ, ಪಿರಿ ಹಗ್ಗ, ಹುರಿ ಹಗ್ಗ, ನೂಲು ಇತ್ಯಾದಿ ಹೆಸರಿನಿಂದ ಕರೆಯುತ್ತೇವೆ.

ಹಗ್ಗದ ಭಾಗಗಳು

ಒಂದು ಹಗ್ಗಕ್ಕೆ ಎರಡು ಭಾಗಗಳಿವೆ. ಕಟ್ಟಲು ಉಪಯೋಗಿಸುವ ತುದಿಯನ್ನು ಧಾವಕ ಕೊನೆ (Running end) ಇನ್ನೊಂದು ತುದಿಯನ್ನು ಸ್ಥಾನಿಕಕೊನೆ (Standing end) ಎಂದೂ ಹೇಳುತ್ತೇವೆ.



ಕೆಲವು ತಾಂತ್ರಿಕ ಹೆಸರುಗಳು

1. ಮೇಲು ಕೈ ಮಲಕು (ಓವರ್ ಹ್ಯಾಂಡ್ ಲೂಪ್)
2. ಕೆಳಕ್ಕೆ ಮಲಕು (ಅಂಡರ್ ಹ್ಯಾಂಡ್ ಲೂಪ್)
3. ಅರೆ ಮಲಕು (ಹಾಫ್ ಹಿಚ್)
4. ಮಲಕು (ಹಿಚ್ - Hitch): ಒಂದು ವಸ್ತುವಿಗೆ ಸುತ್ತಲೂ ಕಟ್ಟುವುದು. ಎಂದರೆ ಒಮ್ಮೆ ಸುತ್ತಿ ನಂತರ ಹಗ್ಗದ ಎಡೆಯಲ್ಲಿ ಸಿಲುಕಿಸಿ ಇಡುವುದು.



5. ಒಳಕುಳಿ (ಬೈಟ್–Bight)
6. ಬಾಗು (ಬೆಂಡ್–Bend) ಬಟ್ಟೆ ಅಥವಾ ಹಗ್ಗವನ್ನು ಬಗ್ಗಿಸಿ ಇಟ್ಟು ಕಟ್ಟುವುದು.
7. ಬಿಗಿತದ ಸುತ್ತು (ಫ್ರಾಪಿಂಗ್–Frapping) ದಂಡಗಳನ್ನು ಸೇರಿಸಿ ಕಟ್ಟುವುದು.
8. ಹಾಲ್ (Haul) ಒಂದು ಹಗ್ಗವನ್ನು ಒಂದು ಬದಿಗೆ ಎಳೆದು ಇರಿಸುವುದು.

9. ಲಂಗರು ಹಾಕುವುದು (Anchorage). ಪಯನಿಯರಿಂಗ್ ಕೆಲಸದಲ್ಲಿ (ಉದಾ: ಸೇತುವೆ, ಗೋಪುರ (Tower) ಇತ್ಯಾದಿ) ಮರ, ಗೂಟ, ಕಂಬ ಪಿಕೆಟ್ (Picket) ಮೊದಲಾದ ವಸ್ತುಗಳಿಗೆ ಹಗ್ಗವನ್ನು ಎಳೆದು ಕಟ್ಟುವುದು.

10. ರೀವ್ (Reeve): ಸೇತುವೆ ನಿರ್ಮಿಸುವಾಗ ಅಥವಾ ಜೀವರಕ್ಷಾ ಚಟುವಟಿಕೆಗಳ ಸಂದರ್ಭದಲ್ಲಿ ಹಗ್ಗವನ್ನು ರಾಟೆಯ ಮೂಲಕ ಸಿಲುಕಿಸಿ ಇಡುವುದು.

11. ಟ್ಯಾಕಲ್ (Tackle) ರೀವ್ ಮಾಡಿರುವ ರಾಟೆಗಳನ್ನು ಮತ್ತು ಹಗ್ಗವನ್ನು ಒಟ್ಟಾಗಿ ಟ್ಯಾಕಲ್ ಅಥವಾ ನಿಭಾವಣೆ ಎನ್ನುತ್ತೇವೆ.

ವಿವಿಧ ರೀತಿಯ ಹಗ್ಗಗಳು

ತಯಾರಿಸಲು ಉಪಯೋಗಿಸುವ ವಸ್ತುವಿಗೆ ಹೊಂದಿಕೊಂಡು ಅದನ್ನು ತಯಾರಿಸಿದ ಸ್ಥಳಕ್ಕೆ ಸಂಬಂಧಿಸಿ ಹಗ್ಗಕ್ಕೆ ಹೆಸರಿಡುತ್ತಾರೆ. ಉದಾ: ತೆಂಗಿನನಾರು ಹಗ್ಗ (Coir rope), ಸೆಣಬಿನ ಹಗ್ಗ (Hemp rope), ಮನಿಲ ಹಗ್ಗ (Manila), ಹತ್ತಿಯ ಹಗ್ಗ (Cotton rope), ಸಿಸಲ್ (Sisal), ಫ್ಲಾಕ್ಸ್ (Flax), ನೈಲಾನ್ ಹಗ್ಗ (Nylon rope), ತಂತಿ (Wire) ಇತ್ಯಾದಿ.

ಹಗ್ಗದ ಎಳೆ (The lay of the Rope)

ಹಗ್ಗದ ಎಳೆಗಳನ್ನು ಹೊಸೆದು ಸೇರಿಸುವಾಗ ಎಡಕ್ಕೂ, ಬಲಕ್ಕೂ ಹೊಸೆಯುವುದಿದೆ. ಅವುಗಳನ್ನು ಬಲಹುರಿ ಹಗ್ಗ, ಎಡಹುರಿ ಹಗ್ಗ ಎಂದು ಕರೆಯುತ್ತೇವೆ. ಒಂದು ಹಗ್ಗವನ್ನು ಲಂಬವಾಗಿ ಹಿಡಿದು ನೋಡಿದಾಗ ಅದನ್ನು ತಿಳಿಯಲು ಸಾಧ್ಯವಿದೆ. ನೂಲನ್ನು ಹೊಸೆದು ಸೇರಿಸಿ ಎಳೆಗಳನ್ನು ತಯಾ-ರಿಸುತ್ತಾರೆ. ಎಳೆಗಳನ್ನು ಪುನಃ ಹೊಸೆದು ಹಗ್ಗವನ್ನು ತಯಾರಿಸುತ್ತಾರೆ. ಮೂರು ಎಳೆಗಳನ್ನು ಒಟ್ಟಾಗಿ ಹೊಸೆದು, ಸೇರಿಸುವುದಕ್ಕೆ ಹಾಸರ್ ಲೈಡ್ (Hawser laid) ಎನ್ನುತ್ತಾರೆ. ನಾಲ್ಕು ಎಳೆಗಳನ್ನು ಹೊಸೆದು ಸೇರಿಸುವುದಕ್ಕೆ ಶ್ರೌಡ್ ಲೈಡ್ (Shroud laid) ಎನ್ನುತ್ತಾರೆ.

ಕೆಲವೊಮ್ಮೆ ಒಂದು ಎಳೆಗೆ ಸುತ್ತಲೂ ಹೊಸೆದು ಸೇರಿಸುವುದಿದೆ. ಮೂರು ಹಾಸಿರ್ ಲೈಡ್ ಹಗ್ಗಗಳನ್ನು ಹೊಸೆದು ಸೇರಿಸಿದಾಗ ಅದನ್ನು ಕೇಬಲ್ ಲೈಡ್ ರೋಪ್ (Cable laid rope) ಎಂದು ಕರೆಯುತ್ತಾರೆ. ಹಾಸರ್ ಲೈಡ್ ಹಗ್ಗಕ್ಕೆ ಅತಿ ಹೆಚ್ಚು ಬಲವಿರುತ್ತದೆ. ಇತರ ಎರಡು ವಿಧದ ಹಗ್ಗಗಳಿಗೆ ಹಾಸರ್ ಲೈಡ್ ಹಗ್ಗಕ್ಕಿಂತ ಐದನೇ ಒಂದು ಅಂಶ ಬಲ ಕಡಿಮೆಯೆಂದು ಹೇಳಲಾಗುತ್ತದೆ.

ಹಗ್ಗವನ್ನು ಉಪಯೋಗಿಸುವುದು

ಒಂದು ಕಟ್ಟನ್ನು ರಚಿಸುವುದು ಬದಲಾಗಿ ಕಟ್ಟುವುದಲ್ಲ. ಒಂದು ಹಗ್ಗವನ್ನು ಒಂದು ವಸ್ತುವಿಗೆ ಸುತ್ತಿ, ಸಿಲುಕಿಸಿ, ಇಡುವಾಗ ಮಲಕು (ಹಿಚ್) ರೂಪುಗೊಳ್ಳುತ್ತದೆ. ಆದರೆ ಅದು ಸ್ವತಃ ಪೂರ್ಣಗೊಳ್ಳುವುದಿಲ್ಲ. ಎರಡು ಹಗ್ಗಗಳೊಳಗೆ ಅಥವಾ ಒಂದು ಬಟ್ಟೆ ಮತ್ತು ಒಂದು ಹಗ್ಗದೊಳಗೆ ಜೋಡಿಸುವಾಗ ಬಾಗು (ಬೆಂಡ್) ಸಿದ್ಧವಾಗುತ್ತದೆ.

ಗಂಟು (ನಾಟ್–Knot), ಬಾಗು (ಬೆಂಡ್–Bend), ಮಲಕು (ಹಿಚ್–Hitch)ಗಳ ಉಪಯೋಗಗಳು

1. ಎರಡು ತುದಿಗಳನ್ನು ಸೇರಿಸಿ ಜೋಡಿಸಿಡುವುದಕ್ಕೆ ಸಮಗಂಟು, ಮೂಲೆಗಂಟು, ಬೆಸ್ತರಗಂಟು, (ರೀಪ್ ನಾಟ್, ಶೀಟ್ ಬೆಂಡ್, ಫಿಷರ್ ಮ್ಯಾನ್ಸ್ ನಾಟ್)
2. ಒಂದು ಹಗ್ಗವನ್ನು ಒಂದು ವಸ್ತುವಿನೊಂದಿಗೆ ಜೋಡಿಸಿ ಇಡುವುದಕ್ಕೆ ಕೊಟ್ಟಿಗೆ ಗಂಟು, ಸುತ್ತೊಂದೆರಡು ಮಲಕು ಗಂಟು, ಸುರುಳಿಗಂಟು, ಬೆಸ್ತರಬಾಗು ಮಲಕು (ಕ್ಲಾವ್‌ಹಿಚ್, ರೌಂಡ್ ಟರ್ನ್ ಆ್ಯಂಡ್ ಟು ಹಾಫ್ ಹಿಚಸ್, ರೋಲಿಂಗ್ ಹಿಚ್, ಫಿಷರ್‌ಮ್ಯಾನ್ಸ್ ಬೆಂಡ್)
3. ಜೋಡಿಸಲು ಮತ್ತು ಬೇಗನೆ ಬಿಡಿಸುವುದಕ್ಕೆ– ಎಳೆತದ ಮಲಕು ಗಂಟು (ಡ್ರಾ ಹಿಚ್)
4. ಬಲವನ್ನೊದಗಿಸುವುದಕ್ಕೆ ಕಣಕಾಲುಗಂಟು (ಷೀಪ್ ಬ್ಯಾಂಕ್)
5. ಸಿಲುಕಿಸುವುದಕ್ಕೆ ಬೆಕ್ಕುಪಂಜು (ಕ್ಯಾಟ್ಸ್ ಪಾ)
6. ಉದ್ದ ಕಡಿಮೆ ಮಾಡುವುದಕ್ಕೆ ಕಣಕಾಲು ಗಂಟು (ಷೀಪ್ ಬ್ಯಾಂಕ್)
7. ಜಾರದಂತೆ ಬಲವಾಗಿರಲು ಇಕ್ಕುಣಿಕೆಗಂಟು (ರನ್ನಿಂಗ್ ಬೋ ಲೈನ್)
8. ಜಾರದಂತೆ ಹಿಡಿದು ನಿಲ್ಲಲು ಎಂಟರಾಕಾರಗಂಟು, ಎಳೆತದ ಮಲಕು ಗಂಟು (ಫಿಗರ್ ಆಫ್ ಎಯಿಟ್ ನಾಟ್, ಗೈ ಲೈನ್ ಹಿಚ್)
9. ಒಂದು ಶೀವ್ (Sheave) ಆಗಿ ಕಾರ್ಯವೆಸಗುವುದಕ್ಕೆ (ಹಾರ್ವೆಸ್ಟರ್ ಹಿಚ್)
10. ಒಂದು ತಡೆ (Stopper) ಆಗಿ ಕಾರ್ಯವೆಸಗುವುದಕ್ಕೆ (ಹಗ್ಗದ ತುದಿ ಬಿಟ್ಟು ಹೋಗದಿರಲು ಮೇಲುಗೈ ಮಲಕು ಗಂಟು, ಎಂಟರಾಕಾರ ಗಂಟು, ತಂಬ್ ನಾಟ್, ಫಿಗರ್ ಆಫ್ ಎಯಿಟ್ ನಾಟ್) ಉಪಯೋಗಕ್ಕೆ ಬರುತ್ತದೆ.

11. ಒಂದು ಬಂಧಕ (ಬ್ರೇಕ್) ಆಗಿ ಉಪಯೋಗಿಸುವುದಕ್ಕೆ ಟಾರ್ಬಕ್ (Tarbuck) ಎನ್ನುತ್ತಾರೆ. ಪರ್ವತಾರೋಹಿಗಳು ನೈಲಾನ್ ಹಗ್ಗದಲ್ಲಿ ಅದನ್ನು ರಚಿಸಿಕೊಳ್ಳುತ್ತಾರೆ.

ಕೆಲವು ಕಟ್ಟುಗಳನ್ನು ತಕ್ಷಣ ಬಿಡಿಸಿ, ತೆಗೆಯುವುದಕ್ಕಾಗಿ ಒಂದು ಮಲಕನ್ನು ರಚಿಸಿ ಗಟ್ಟಿಮಾಡುವುದೂ ಇದೆ. (ಸ್ಲಿಪ್ ರೀಫ್ ನಾಟ್, ಡಬಲ್ ಸ್ಲಿಪ್ ರೀಪ್ ನಾಟ್)

ಕಟ್ಟುಗಳನ್ನು ಕಲಿಯುವ ವಿಧಾನ

ಕಟ್ಟುಗಳನ್ನು ಕಲಿಯುವಾಗ ಕಲಿಯುವವರು ಕಲಿಸುವವರ ಬದಿಯಲ್ಲಿ ಅಥವಾ ಹಿಂದೆ ನಿಂತಿರಬೇಕು. ಆದಷ್ಟು ನಿಂತೇ ಕಲಿಸುವುದು ಉತ್ತಮ. ಅಲ್ಲದಿದ್ದರೆ ತಿರುಗಿ ನಿಂತು ಕೈ ತಲೆಯ ಮೇಲಿರುವಂತೆ ಕಲಿಸಬೇಕು (Overhead demonstration). ಎದುರಿನಿಂದ ತೋರಿಸುವ ಬದಲು ಎದುರು ಭಾಗಕ್ಕೆ ಕಟ್ಟನ್ನು ರಚಿಸುವುದನ್ನು (Onward Position) ನೋಡಿದಾಗ ಬೇಗನೆ ಕಲಿಯಲು ಸಾಧ್ಯವಿದೆ. ಹಲವಾರು ಸ್ಥಾನಿಕ ಕಟ್ಟುಗಳಿಗೆ ಕೊನೆಯ ಅಗತ್ಯವಿರುವುದಿಲ್ಲ. ಆಗ ಆ ಭಾಗವನ್ನು ಯಾವುದಾದರೂ ವಸ್ತುವಿಗೆ ಕಟ್ಟಿ ಇಡುವುದರ ಮೂಲಕ ಗೊಂದಲವನ್ನು (Confusion) ನಿವಾರಿಸಬಹುದು. ಮಾತ್ರವಲ್ಲ ಕಡಿಮೆ ಸಮಯದಲ್ಲಿ ಸುಲಭವಾಗಿ ಕಟ್ಟನ್ನು ಕಲಿತುಕೊಳ್ಳಲು ಸಾಧ್ಯವಿದೆ.

ಹಗ್ಗದ ಅಳತ

ಹಗ್ಗದ ಉದ್ದವನ್ನು ಅಡಿ (Feet), ಮೀಟರ್ ಅಥವಾ ಮಟ್ಟು (Fathom)ಗಳಲ್ಲಿ ಹೇಳುತ್ತಾರೆ. ಒಂದು ಮಟ್ಟು ಎಂದರೆ ಸಾಮಾನ್ಯವಾಗಿ 180 ಸೆಂ.ಮೀ. ಅಥವಾ 6 ಅಡಿ.

ಲ್ಯಾಷಿಂಗ್ಸ್ (Lashings)

ಎರಡು ದಂಡಗಳನ್ನು ಜೋಡಿಸಲು ಹಗ್ಗವನ್ನು ಸುತ್ತಿ ಕಟ್ಟುವುದಕ್ಕೆ ಲ್ಯಾಷಿಂಗ್ ಎನ್ನುತ್ತಾರೆ.

ಕಟ್ಟಲು ಉಪಯೋಗಿಸುವ ಹಗ್ಗವು ಎಷ್ಟು ಉದ್ದವಿರಬೇಕೆಂದು ನಿರ್ಧರಿಸಲು ಒಂದು ವಿಧಾನವಿದೆ. ದಂಡಗಳಲ್ಲಿ ಹೆಚ್ಚು ಗಾತ್ರದ ದಂಡದ ವ್ಯಾಸ ಎಷ್ಟು ಇಂಚು ಇರುವುದೋ ಅಷ್ಟು ಮೀಟರ್ ಲ್ಯಾಷಿಂಗ್ ಹಗ್ಗದ ಉದ್ದವಿರಬೇಕು. ಆದರೆ ಎಂಟರಾಕಾರದ ಕಟ್ಟಿಗೆ ಈ ಅಳತೆಗಿಂತ ಹೆಚ್ಚು ಉದ್ದದ ಹಗ್ಗ ಬೇಕಾಗುತ್ತದೆ. ಲ್ಯಾಷಿಂಗ್ ಮಾಡುವಾಗ ದಂಡದ ವ್ಯಾಸ ಎಷ್ಟು ಅಡಿ ಇರುವುದೋ ಅಷ್ಟು ಇಂಚು

ಸುತ್ತಳತೆ ಇರುವ ಹಗ್ಗವನ್ನು ಲ್ಯಾಷಿಂಗ್ ಮಾಡಲು ಉಪಯೋಗಿಸಬೇಕೆಂಬುದು ನಿಯಮ.

ದಂಡಗಳನ್ನು ಒಟ್ಟಾಗಿ ಇರಿಸಿ ಸುತ್ತುವುದಕ್ಕೆ ರ್‍ಯಾಪಿಂಗ್ (Wrapping) ಎಂದೂ ದಂಡಗಳ ಎಡೆಯಲ್ಲಿ ಸುತ್ತಿ ಮೊದಲು ಸುತ್ತಿದ ಭಾಗವನ್ನು ಗಟ್ಟಿ ಮಾಡುವುದಕ್ಕೆ ಫ್ರಾಪಿಂಗ್ (Frapping) ಎಂದೂ ಹೆಸರು. ಸಾಮಾನ್ಯವಾಗಿ ಮೂರು ಬಾರಿ ರ್‍ಯಾಪಿಂಗ್ ಮತ್ತು ಎರಡು ಬಾರಿ ಫ್ರಾಪಿಂಗ್ ಮಾಡಲಾಗುತ್ತದೆ. ಅಗತ್ಯವೆಂದು ತೋರುವುದಿದ್ದರೆ ಹೆಚ್ಚು ಬಾರಿ ಮಾಡಬಹುದು.

ಸುರಕ್ಷಿತ ಕ್ರಿಯಾ ಭಾರ (Safe Working Load)

ಹಗ್ಗದ ಸುತ್ತಳತೆಯ ವರ್ಗವನ್ನು ಇಮ್ಮಡಿ ಮಾಡಬೇಕು. ಅದನ್ನು ಹಂಡ್ರೆಡ್ ವೈಟ್ (Hundred Weight) ಎಂದು ಕರೆಯುತ್ತಾರೆ. ಅಂ-ದರೆ ಒಂದು ಮೂರು ಇಂಚು ಹಗ್ಗದಲ್ಲಿ 18 ಛಿತಿಣ. ಭಾರ ಇರಬಹುದು. (2×32=18 cwts.).

ಹಗ್ಗದ ಸಂರಕ್ಷಣೆ

1. ಹಗ್ಗದ ತುದಿಯಲ್ಲಿ ಹುರಿಸುತ್ತಿ (ವಿಪ್ಪಿಂಗ್) ಅಥವಾ ಸ್ಲೇಸಿಂಗ್ (ಹೆಣಿಗೆ) ಮಾಡಿ ಕಟ್ಟು ಹಾಕದೆ ತುದಿಯನ್ನು ಸಂರಕ್ಷಿಸಬೇಕು.
2. ಹಗ್ಗವನ್ನು ವೃತ್ತಾಕಾರವಾಗಿ ಸುತ್ತಿ (Coil) ಅಥವಾ ಮಡಚಿ (Hank) ಇರಿಸಬೇಕು. ಹಗ್ಗದ ಪಿರಿಯ (ಎಳೆಗಳನ್ನು ಒಟ್ಟು ಮಾಡಿ ಸುತ್ತಿರುವುದು) ಬದಿಗೆ ಅನುಕೂಲಕರವಾಗಿ ಸುತ್ತಿ ಇಡಬೇಕು ಎಂದರೆ ಬಲಬದಿಗೆ ಪಿರಿಯಿರುವ ಹಗ್ಗ (Hasar laid)ವನ್ನು ಬಲಬದಿಗೆ ಸುತ್ತಬೇಕು.
3. ಉಷ್ಣತೆ ಹೆಚ್ಚು ಕಡಿಮೆಯಾಗದ ಸ್ಥಳದಲ್ಲಿ ಹಗ್ಗವನ್ನು ತೆಗೆದಿರಿಸಬೇಕು.
4. ಹಗ್ಗ ಒದ್ದೆಯಾಗಿದ್ದರೆ ಚೆನ್ನಾಗಿ ಒಣಗಿಸಿ (ಬಿಸಿಲಿನಲ್ಲಿ ಒಣಗಿಸಬಾರದು) ತೆಗೆದಿರಿಸಬೇಕು. ಅಷ್ಟರತನಕ ಎಲ್ಲಿಯಾದರೂ ತೂಗು ಹಾಕಬೇಕು.
5. ಆದಷ್ಟು ಹಗ್ಗವನ್ನು ನೆಲದಲ್ಲಿ ಎಳೆಯದಂತೆ ಎಚ್ಚರ ವಹಿಸಬೇಕು. ಅದು ಎಳೆಗಳ ಬಲವನ್ನು ಕಡಿಮೆ ಮಾಡುತ್ತದೆ.
6. ತೆಗೆದಿರಿಸುವ ಮೊದಲು ಹಗ್ಗದಲ್ಲಿ ಕಟ್ಟುಗಳಿದ್ದರೆ ಬಿಡಿಸಬೇಕು ಮತ್ತು ಕೆಸರು, ಹೊಯ್ಗೆ ಹಿಡಿದಿದ್ದರೆ ಶುಚಿಗೊಳಿಸಬೇಕು.
7. ಹೊಸ ಹಗ್ಗವನ್ನು ಉಪಯೋಗಿಸುವುದಕ್ಕೆ ಮೊದಲು ಚೆನ್ನಾಗಿ ಎಳೆದಾಡಬೇಕು.

8. ಕಡಿಮೆ ಬಲ ಇರುವ ಅಥವಾ ಎಳೆತುಂಡಿಸಿರುವ ಹಗ್ಗವನ್ನು ಸೇತುವೆ ನಿರ್ಮಾಣಕ್ಕೋ, ಜೀವರಕ್ಷಾ ಕುಣಿಕೆಯಾಗಿಯೋ ಉಪಯೋಗಿಸಬಾರದು.

9. ಸೇತುವೆ ನಿರ್ಮಾಣದ ಮತ್ತು ಜೀವರಕ್ಷಾ ಕುಣಿಕೆಯಾಗಿ ಉಪಯೋಗಿಸಬಹುದಾದ ಹಗ್ಗಕ್ಕೆ (ಉದ್ದ ಮತ್ತು ಗಾತ್ರಗಳನ್ನು ಬರೆದು) ಲೇಬಲ್ ಮಾಡಬೇಕು.

10. ಹಗ್ಗಗಳಲ್ಲಿ ಕಟ್ಟುಗಳು ಬಹಳ ಕಾಲ ಇರಬಾರದು. ಅಗತ್ಯ ಬಂದಾಗ ಮಾತ್ರ ಕಟ್ಟು ಹಾಕಿ ಉಪಯೋಗ ಮುಗಿದ ಕೂಡಲೇ ಅದನ್ನು ಬಿಡಿಸಬೇಕು.

ಹಗ್ಗಗಳನ್ನು ಸುತ್ತಿ ಇಳಿಸುವುದು

ಎಡಕೈಯಲ್ಲಿ ಹೆಬ್ಬೆರಳನ್ನು ಕುಣಿಯ– "ಬೈಟ್‌ನ ಕಡೆಗೆ ಇರುವಂತೆ ಹಿಡಿದುಕೊಳ್ಳುವುದು. ಬಲಕೈಯಲ್ಲಿ ಹೆಬ್ಬೆರಳನ್ನು ತುದಿಯ ಕಡೆಗೆ ತೋರುವಂತೆ ಹಿಡಿದುಕೊಳ್ಳುವುದು.

ಹಾರ ಸುತ್ತುವಿಕ ವಿಧಾನ

ಹಗ್ಗದ ಎದುರು ಬದಿಗೆ ನಿಂತುಕೊಂಡು ಕಾಲುಗಳ ಎಡೆಯಿಂದ ಹಗ್ಗವನ್ನು ಎಳೆಯುತ್ತಾ ಪ್ರದಕ್ಷಿಣಾಕಾರವಾಗಿ (Clockwise) ಅಗತ್ಯವಿರುವ ಗಾತ್ರದಲ್ಲಿ ಸುತ್ತುವುದು.

ಹ್ಯಾಂಕಿಂಗ್ (Hanking)

ಉದ್ದ ಮತ್ತು ಗಾತ್ರ ಕಡಿಮೆಯಿರುವ ಹಗ್ಗಗಳನ್ನು ವೃತ್ತಗಳಾಗಿ ಮಾಡಿ ಮಡಚಿ ಕಟ್ಟಿಡುವುದಕ್ಕೆ ಹ್ಯಾಂಕಿಂಗ್ ಎಂದು ಹೆಸರು.

ಹಗ್ಗವನ್ನು ವೃತ್ತಗಳಾಗಿ ಸುತ್ತಿ ಸಣ್ಣ ನೂಲು ಅಥವಾ ಹಗ್ಗಗಳಿಂದ ವೃತ್ತದ ಒಂದೆರಡು ಕಡೆ ಎಲ್ಲಾ ಸುತ್ತುಗಳನ್ನು ಸೇರಿಸಿ ಕಟ್ಟಿಡಬೇಕು. ಪ್ರತಿಯೊಂದು ಹಗ್ಗಕ್ಕೂ ಅದರ ಉದ್ದ ಮತ್ತು ವ್ಯಾಸವನ್ನು ಬರೆದು ಲೇಬಲ್ ಮಾಡಿ ತೂಗುಹಾಕುವುದು ಉತ್ತಮ.

❍

4. ಸ್ಪ್ಲೈಸಿಂಗ್ (ಹೆಣಿಗೆ)

ಕುಣಿಕ ಹೆಣಿಗೆ (Eye Splicing)

ಒಂದು ಹಗ್ಗದ ತುದಿಯಲ್ಲಿ ಒಂದು ಸ್ಥಿರವಾದ ಕುಣಿಕೆಯನ್ನು ಮಾಡಲು ಈ ಸ್ಪ್ಲೈಸಿಂಗ್‌ನಿಂದ ಸಾಧ್ಯವಾಗುತ್ತದೆ.



Eye Splice

ಹಗ್ಗದ ತುದಿಯಲ್ಲಿ 8ರಿಂದ 9 ಸೆ.ಮೀ. ಉದ್ದಕ್ಕೆ ಎಳೆಗಳನ್ನು ಬಿಡಿಸಿ, ನೂಲಿನಿಂದ ಒಂದು ತಾತ್ಕಾಲಿಕ ಕಟ್ಟನ್ನು ಹಾಕಬೇಕು. ಮಾಡಬೇಕಾದ ಕುಣಿಕೆಯ ಗಾತ್ರವನ್ನು ಹೊಂದಿಕೊಂಡು ಆ ಸ್ಥಳದಲ್ಲಿ ಹಗ್ಗದ ಎಳೆಯನ್ನು ಬಿಡಿಸಿ, ಎಡೆ ಮಾಡಿಕೊಂಡು ಹಗ್ಗದ ಒಂದು ಎಳೆಯ ತುದಿಯನ್ನು ಸಿಲುಕಿಸಿ, ಎಳೆಯಬೇಕು. ಇಲ್ಲಿ ಪ್ರತ್ಯೇಕವಾಗಿ ಗಮನಿಸಬೇಕಾದ ಒಂದು ವಿಚಾರವಿದೆ. ಹಗ್ಗದಲ್ಲಿ 3 ಎಳೆಗಳಿರುವುದಾದರೆ 2 ಎಳೆಗಳನ್ನು ಒಂದು ದಿಕ್ಕಿಗೆ ತೋರಿಸಿ, ಎಳೆದಿದ್ದರೆ ಇನ್ನೊಂದನ್ನು ವಿರುದ್ಧ ದಿಕ್ಕಿಗೆ ತೋರಿಸಿ ಎಳೆಯಬೇಕು. 4 ಎಳೆಗಳಿರುವ ಹಗ್ಗವಾದರೆ 3 ಎಳೆಗಳನ್ನು ಒಂದು ಬದಿಗೂ, ನಾಲ್ಕನೆಯದನ್ನು ವಿರುದ್ಧ ಬದಿಗೆ ಸಿಲುಕಿಸಿ ಎಳೆಯಬೇಕು. ಎಳೆಗಳನ್ನು ಸರಿಯಾಗಿ ನಾಲ್ಕೈದುಬಾರಿ ಸಿಲುಕಿಸಿ, ಎಳೆದು ಗಟ್ಟಿಮಾಡಿದ ನಂತರ ಉಳಿದ ಭಾಗವನ್ನು ತುಂಡರಿಸಿ ತೆಗೆಯಬೇಕು. ಆದರೆ ಒಂದೇ ಬಾರಿಗೆ ತುಂಡರಿಸುವ ಬದಲು ಮೊದಲ ಬಾರಿ ಎಳೆಯ ನಾಲ್ಕನೇ

ಒಂದು ಭಾಗ ಎರಡನೇ ಬಾರಿ ಇನ್ನೊಮ್ಮೆ ನಾಲ್ಕನೇ ಒಂದು ಭಾಗದಂತೆ ತುಂಡರಿಸುತ್ತಾ ಹೋಗಬೇಕು.

ಹಿಮ್ಮುಖ ಹೆಣಿಗೆ (ಬ್ಯಾಕ್ ಸ್ಪ್ಲೈಸ್–Back Splicing)

ಹಗ್ಗದ ತುದಿ ಬಿಟ್ಟು ಹೋಗದಿರಲು ಹಗ್ಗದ ಎಳೆಗಳನ್ನು ಅದೇ ಎಳೆಗಳ ಎಡೆಯಲ್ಲಿ ಸಿಲುಕಿಸಿ ಗಟ್ಟಿ ಮಾಡುವುದೇ ಬ್ಯಾಕ್ ಸ್ಪ್ಲೈಸ್.

ಹಗ್ಗದ ತುದಿಯಿಂದ ಸುಮಾರು 8ರಿಂದ 9 ಸೆ.ಮೀ. ಉದ್ದದಷ್ಟು ದೂರದಲ್ಲಿ ನೂಲಿನಿಂದ ತಾತ್ಕಾಲಿಕ ಕಟ್ಟುಹಾಕಬೇಕು. ಅನಂತರ ಅಷ್ಟು ಉದ್ದಕ್ಕೆ ಹಗ್ಗದ ಎಳೆಗಳನ್ನು ಬಿಡಿಸಿ, ಆ ಎಳೆಗಳಿಂದಲೇ ಒಂದು ಕಟ್ಟನ್ನು ಹಾಕಬೇಕು. ಅದಕ್ಕೆ ಕಿರೀಟಗಂಟು (ಕ್ರೌನ್ ನಾಟ್) ಎಂದು ಹೆಸರು. ತಾತ್ಕಾಲಿಕವಾಗಿ ನೂಲಿನಿಂದ ಹಾಕಿದ ಕಟ್ಟನ್ನು ಬಿಡಿಸಿ ತೆಗೆಯಬೇಕು. ಅನಂತರ ಒಂದೊಂದೇ ಎಳೆಯನ್ನು ಕ್ರೌನ್‌ನಾಟ್‌ನ ಕೆಳಗೆ ಒಂದರ ನಂತರ ಒಂದನ್ನು ಬಿಟ್ಟು ಎಳೆಗಳ ಎಡೆಯಲ್ಲಿ ತೂರಿಸಿ, ಎಳೆಯಬೇಕು. ಸರಿಯಾಗಿ ಎಳೆದು ಗಟ್ಟಿ ಮಾಡಿದ ನ0ತರ



Back Splice

ಹಿಂದಿನ ಸ್ಪ್ಲೈಸ್‌ನಲ್ಲಿ Back Splice ಹೇಳಿದಂತೆ ಹಗ್ಗದ ಗಾತ್ರ (ತೋರ) ದ ನಾಲ್ಕನೇ ಒಂದು ಭಾಗವನ್ನು ತುಂಡರಿಸಿದರೆ ಉತ್ತಮ. ಅನಂತರ ಪುನಃ ಎಳೆಗಳ ಎಡೆಯಿಂದ ತೂರಿಸಿ ತೆಗೆಯಬೇಕು. ಆಗಲೂ ಎಳೆಗಳ ಗಾತ್ರ (ತೋರ)ದ ನಾಲ್ಕನೇ ಒಂದು ಭಾಗವನ್ನು ತುಂಡರಿಸಬೇಕು. ಹೀಗೆ 3–4 ಬಾರಿ ಎಳೆಗಳ ಎಡೆಯಿಂದ ತೂರಿಸಿ ಎಳೆದು ಗಟ್ಟಿ ಮಾಡಬೇಕು. ಕೊನೆಗೆ ಸ್ಪ್ಲೈಸ್ ಮಾಡಿದ ಭಾಗವನ್ನು ಅಂಗೈಯಲ್ಲಿ ಹಿಡಿದು ಅಥವಾ ಶುಚಿಯಾದ ಸ್ಥಳದಲ್ಲಿ ಇರಿಸಿ, ಬಲವಾಗಿ ಅದುಮಿ ಉರುಳಿಸಬೇಕು. ಆಗ ತುದಿಗಳು ಬಿಟ್ಟುಕೊಂಡು ಕಾಣಿಸುವುದಿದ್ದರೆ ಅವುಗಳನ್ನು ತುಂಡರಿಸಿ ತೆಗೆಯಬೇಕು. ಹಗ್ಗದ ಎಳೆಯ ನಾಲ್ಕನೇ ಒಂದರಷ್ಟು ತುಂಡು ಮಾಡುತ್ತಾ ಹೋಗುವುದರಿಂದ ಸ್ಪ್ಲೈಸ್ ಮಾಡಿದ ಭಾಗ ಗುಂಡಗಾಗಿ ನಿಲ್ಲದಂತೆ ಮಾಡಲು ಸುಲಭವಾಗುತ್ತದೆ.

ಜೋಡು ಹೆಣಿಗೆ (ಶಾರ್ಟ್ ಸ್ಪ್ಲೈಸ್–Short Splice)

ಸಾಮಾನ್ಯವಾಗಿ ಸಮಾನ ಗಾತ್ರದ 2 ಹಗ್ಗಗಳನ್ನು ಕಟ್ಟು ಹಾಕದೆ ಜೋಡಿಸಲು ಈ ವಿಧಾನವನ್ನು ಬಳಸಲಾಗುತ್ತದೆ.

ಜೋಡಿಸಬೇಕಾದ 2 ಹಗ್ಗಗಳ ತುದಿಯಿಂದ ಸುಮಾರು 8 ಸೆ.ಮೀ. ದೂರದ ತನಕ ಎಳೆಗಳನ್ನು ಬಿಡಿಸಿ, ಅಲ್ಲಿ ನೂಲಿನಿಂದ ತಾತ್ಕಾಲಿಕವಾಗಿ ಕಟ್ಟಿ ಹಾಕಬೇಕು. 2 ಹಗ್ಗಗಳ ಎಳೆಗಳನ್ನು ಒಂದಕ್ಕೊಂದು ತಾಗಿಸಿ ವಿರುದ್ಧ ದಿಕ್ಕಿಗೆ ಇರಿಸಿ ಒಂದರ ನಂತರ ಒಂದರಂತೆ ಎಡೆ ಬಿಟ್ಟು ಎರಡು ಭಾಗಕ್ಕೆ ಹಿಂದಿನ ಬಾರಿ ಮಾಡಿದಂತೆಯೇ ಎಳೆಗಳ ನಡುವೆ ತೂರಿಸಿ ಎಳೆಯಬೇಕು. ಆದರೆ ಒಂದನೇ ಹಗ್ಗದ ಎಳೆಗಳನ್ನು 2ನೇ ಹಗ್ಗದ ಎಳೆಗಳ ಮಧ್ಯೆ ಸಿಲುಕಿಸಿ ಗಟ್ಟಿ ಮಾಡಿದ ನಂತರವೇ 2ನೇ ಹಗ್ಗದ ಎಳೆಗಳನ್ನು ಒಂದನೇ ಹಗ್ಗದ ಎಳೆಗಳ ಮಧ್ಯೆ ಸಿಲುಕಿಸ ಬೇಕು. ಅಷ್ಟರತನಕ ಎರಡನೇ ಹಗ್ಗದ ಎಳೆಗಳನ್ನು ಸೇರಿಸಿ ಕಟ್ಟಿ ಇಡುವುದು ಉತ್ತಮ. ಎರಡೂ ಹಗ್ಗದ ಎಳೆಗಳನ್ನು ಸರಿಯಾಗಿ ಸಿಲುಕಿಸಿ ಗಟ್ಟಿ ಮಾಡಿದ ನಂತರ ನೂಲಿನಿಂದ ತಾತ್ಕಾಲಿಕವಾಗಿ ಕಟ್ಟಿದ ಕಟ್ಟನ್ನು ಬಿಡಿಸಿ ತೆಗೆಯಬೇಕು ಪ್ರತೀ ಹಗ್ಗದ ಎಳೆಯನ್ನೂ ಒಂದು ಬಾರಿ ಸಿಲುಕಿಸಿ ಆದಾಗ ಅದರ ತೋರದ ನಾಲ್ಕನೇ ಒಂದು ಭಾಗವನ್ನು ತುಂಡುಮಾಡಿ ತೆಗೆದರೆ ಹಿಂದಿನ ಬಾರಿಯಂತೆಯೇ ಹಗ್ಗದಲ್ಲಿ ಹೆಚ್ಚು ತೋರ ಆಗದಂತೆ ನೋಡಿಕೊಳ್ಳಬಹುದು.



Short Splice

5. ಮಾರ್ಗಕಲ್ಪನೆ (ಅಗ್ರಗಾಮಿತ್ವ–ಪಯನೀಯರಿಂಗ್)–1

ಎಂಟರ ಅಕಾರದ ಗಂಟು (ಫಿಗರ್ ಆಫ್ ಎಯಿಟ್ ನಾಟ್–Figure of Eight Knot)



ಹಗ್ಗದ ತುದಿಯಲ್ಲಿ ಒಂದು ಕುಣಿ ಮಾಡಿಕೊಳ್ಳಬೇಕು. ಮಡಚಿ ಹಿಡಿದ ಭಾಗದ ತುದಿಯನ್ನು ಸ್ಥಾನಿಕ ಭಾಗದ ಕುಣಿ ಒಂದು ಸುತ್ತು ಸುತ್ತಿ, ಕುಣಿಕೆಯ ಒಳಗಿನಿಂದ ಸಿಲುಕಿಸಿ ತೆಗೆಯಬೇಕು. ಹಲವಾರು ಹಗ್ಗಗಳಲ್ಲಿ ಅಲ್ಲಲ್ಲಿ ಈ ಕಟ್ಟನ್ನು ಹಾಕಿ, ಬಾಗಿಲಿಗೆ ನೇತು ಹಾಕಿದಾಗ ಅದು ಅಲಂಕಾರದ ಗಂಟಿನಂತೆ (Decoration Knot) ಆಗಿ ಉಪಯೋಗವಾಗುತ್ತದೆ. ನಮ್ಮ ಕಂಠ ವಸ್ತ್ರದ ತುದಿಯಲ್ಲಿ ಈ ಕಟ್ಟನ್ನು ಹಾಕುತ್ತೇವೆ.

A. ಸಮಗಂಟು (ರೀಫ್ ನಾಟ್ – Reef Knot)



ಉಪಯೋಗ: ಒಂದೇ ಗಾತ್ರದ ಹಗ್ಗಗಳ ಎರಡು ತುದಿಗಳನ್ನು ಅಥವಾ ಬ್ಯಾಂಡೇಜಿನ ಎರಡು ತುದಿಗಳನ್ನು ಸೇರಿಸಿ ಕಟ್ಟಲು ಉಪಯೋಗಿಸುತ್ತೇನೆ

ವಿಧಾನ: ಹಗ್ಗದ ಎರಡು ತುದಿಗಳನ್ನು ಎರಡು ಕೈಗಳಲ್ಲಿ ಹಿಡಿದುಕೊಳ್ಳಬೇಕು. ಎಡದ ಕೈಯಲ್ಲಿರುವ ತುದಿಯನ್ನು ಬಲಗೈ ಮೇಲಿಟ್ಟು ಅಡಿಯಿಂದ ತೆಗೆಯಬೇಕು. ಅನಂತರ ಬಲದ ಕೈಯಲ್ಲಿರುವ ತುದಿಯನ್ನು ಎಡಗೈ ಮೇಲಿಟ್ಟು ಒಳಗಿನಿಂದ ತೆಗೆದು ಗಟ್ಟಿ ಮಾಡಬೇಕು.

B. ಮೂಲೆಗಂಟು (ಷೀಟ್ ಬೆಂಡ್–Sheet Bend)



ಉಪಯೋಗ: ಒಂದೇ ಗಾತ್ರದ ಅಥವಾ ವಿವಿಧ ಗಾತ್ರದ ಅಥವಾ ಬಟ್ಟೆ ಮತ್ತು ಹಗ್ಗವನ್ನು ಕಟ್ಟಲು ಉಪಯೋಗಿಸುತ್ತೇವೆ. (ನಾವೆಯ 'ಹಾಯಿ' ಮೂಲೆಗಳನ್ನು ಕಟ್ಟಲು ಉಪರ್ಯೋಗಿಸುವರಾದ ಕಾರಣ ಈ ಹೆಸರು ಬಂದಿದೆ)

ವಿಧಾನ: ಒಂದು ಹಗ್ಗದ ಧಾವಕ ತುದಿಯನ್ನು ಮಡಚಿ ಹಿಡಿದುಕೊಳ್ಳಬೇಕು. ಇನ್ನೊಂದು ಹಗ್ಗದ ತುದಿಯನ್ನು ಹಿಂದೆ ಹಿಡಿದ ಹಗ್ಗದ ಕುಣಿಯ ಹಿಂಬದಿಯಿಂದ ಒಳಕ್ಕೆ ತಂದು, ಪೂರ್ತಿ ಒಂದು ಸುತ್ತು ಸುತ್ತಿ ತರಬೇಕು. ಅದನ್ನು ಎರಡನೇ ಬಾರಿ ತಂದ ಹಗ್ಗದ ಸುತ್ತಿನ ಎಡೆಯಿಂದ ಅಡ್ಡಕ್ಕೆ ಇರಿಸಿ ಗಟ್ಟಿ ಮಾಡಬೇಕು. ಹಾಗಲ್ಲದೆ 2 ಬಾರಿ ಕುಣಿಯ ಸುತ್ತು ತಂದು ಗಟ್ಟಿ ಮಾಡುವುದು "ಇಮೂಲೆಗಂಟು ಆಗುತ್ತದೆ.

C. ಕುಣಿಕೆ ಗಂಟು (ಬೊ ಲೈನ್–Bowline)

ಈ ಗಂಟಿಗೆ ಜೀವ ರಕ್ಷಾ ಕುಣಿಕೆ (Life line) ಎಂದೂ ಹೆಸರಿದೆ.

ಉಪಯೋಗ: ಒಂದು ಹಗ್ಗದಲ್ಲಿ ಸ್ಥಿರವಾದ ಒಂದು ಕುಣಿಕೆಯನ್ನು ಮಾಡಿಕೊಂಡು ಸಂರಕ್ಷಿಸಲು ಬರುತ್ತದೆ.

ವಿಧಾನ: ಕುಣಿಕೆಯು ಸಾಮಾನ್ಯವಾಗಿ ಎಷ್ಟು ದೊಡ್ಡದಿರ ಬೇಕೆಂದು ಮುಂದಾಗಿ ತೀರ್ಮಾನಿಸ ಬೇಕು. ಹಗ್ಗದ ತುದಿಯಿಂದ ಅಷ್ಟು ದೂರದಲ್ಲಿ ಹಿಡಿದು ಕೊಂಡು ಮೇಲ್ಭಾಗದಿಂದ ಕುಣಿಯಾಗಿ ಹಿಡಿದುಕೊಳ್ಳಬೇಕು, ಅನಂತರ ಧಾವಕ ಭಾಗವನ್ನು ಕುಣಿಕೆಯ ಹಿಂಭಾಗದಿಂದ ಮೇಲಕ್ಕೆ ತರಬೇಕು. ಅದನ್ನು ಮತ್ತೂ ಮುಂದೆ ಕೊಂಡುಹೋಗಿ ಸ್ಥಾನಿಕ ತುದಿಗೆ ಸುತ್ತಿ ತರಬೇಕು. ಪುನಃ ಅದೇ ಕುಣಿಯ

ವೃತ್ತದ ಒಳಗೆ ಇರಿಸಬೇಕು. ಈಗ ಕೆಳಗಿರುವ ಮೂರು ಭಾಗಗಳನ್ನು ಅಥವಾ ಎರಡನ್ನು ಹಿಡಿದುಕೊಂಡು ಸ್ಥಾನಿಕ ಭಾಗವನ್ನು ಎಳೆದು ಗಟ್ಟಿಮಾಡಬೇಕು.

D. ಕಣಕಾಲು/ಕವಣೆ ಗಂಟು (ಶೀಪ್ ಶ್ಯಾಂಕ್–Sheep Shank)

ಉಪಯೋಗ: ಒಂದು ಹಗ್ಗವನ್ನು ತುಂಡು ಮಾಡದೆ ಗಿಡ್ಡ ಮಾಡುವುದು.



ಉದಾಹರಣೆಗೆ ಒಂದು ದನವನ್ನು ಗೂಟಕ್ಕೆ ಕಟ್ಟಿ ಹಾಕಲಾಗಿದೆ. ಹಗ್ಗ ಬಹಳ ಉದ್ದವಿದೆ. ಅಷ್ಟು ಉದ್ದ ಬಿಟ್ಟರೆ ದನ ಗದ್ದೆಗೆ ಬರಬಹುದು ಅಥವಾ ರಸ್ತೆಗೆ ದಾಟಬಹುದೆಂದಿದ್ದರೆ ಈ ಗಂಟನ್ನು ಹಾಕಬಹುದು.

ವಿಧಾನ: ಹಗ್ಗವನ್ನು ಇಂಗ್ಲಿಷ್‌ನ "S" ಆಕಾರ ಅಥವಾ "Z" ಆಕಾರದಲ್ಲಿ ಹಿಡಿದುಕೊಳ್ಳಬೇಕು. ಒಂದು ತುದಿಯಲ್ಲಿ ಧಾವಕ ತುದಿಯನ್ನು ಒಂದು ಸುತ್ತು ಒಳಕ್ಕೆ ಸುತ್ತಿ ಮಡಚಿದ ಭಾಗಕ್ಕೆ ಸಿಲುಕಿಸಬೇಕು. ಇದೇರೀತಿ ಇನ್ನೊಂದು ಭಾಗದಲ್ಲೂ ಮಾಡಬೇಕು. ಅನಂತರ ಎರಡೂ ಬದಿಗಳಲ್ಲಿರುವ ಸ್ಥಾನಿಕ ತುದಿಗಳನ್ನು ಕುಣಿ ಮಾಡಿ ಮೊದಲು ರಚಿತವಾದ ಕುಣಿಯ ಒಳಗಿ-ರಿಸಬೇಕು. ಅದು ಬಿಟ್ಟು ಹೋಗದಂತೆ ಗಟ್ಟಿಯಾದ ಕಡ್ಡಿ ತುಂಡುಗಳನ್ನು ಇರಿಸಬೇಕು. ಈ ರೀತಿಯ ಕಡ್ಡಿ ತುಂಡುಗಳಿಗೆ ಟಾಗಲ್ (Toggle) ಎಂದು ಹೆಸರು.

E. ಬೆಸ್ತರ ಗಂಟು (ಫಿಷರ್ ಮ್ಯಾನ್ಸ್ ನಾಟ್–Fisherman's knot)

ಉಪಯೋಗ: ಜಾರುವ ಎರಡು ಹಗ್ಗಗಳನ್ನು ಜೋಡಿಸಿ, ಕಟ್ಟುವುದು, ಕೈಹಿಡಿ ಇಲ್ಲದ ಪಾತ್ರೆಗಳನ್ನು ಕೊಂಡೊಯ್ಯುವುದು.



ವಿಧಾನ: ಎರಡು ಹಗ್ಗಗಳ ಧಾವಕ ಭಾಗವನ್ನು ಸಾಮಾನ್ಯ ಹತ್ತು ಸೆಂಟಿಮೀಟರ್‌ನಷ್ಟು ತಾಗಿರುವಂತೆ ಇರಿಸಬೇಕು. ಒಂದರ ತುದಿಯನ್ನು ಇನ್ನೊಂದಕ್ಕೆ (ಅರೆಗಂಟು ರೀತಿ) ಸುತ್ತಿ ಒಳಗಿನಿಂದ ಎಳೆಯಬೇಕು ಇದೇರೀತಿ ಇನ್ನೊಂದು ಹಗ್ಗದ ಮೇಲೂ ಮಾಡಬೇಕು. (ಇಲ್ಲಿ ಗಮನಿಸಬೇಕಾದ ಅಂಶವಿದೆ. ಎರಡು ಧಾವಕ ಕೊನೆಗಳೂ ಪರಸ್ಪರ ವಿರುದ್ಧ ದಿಕ್ಕಿಗೇ ಇರಬೇಕು). ಅನಂತರ ಅವುಗಳನ್ನು ಹತ್ತಿರಕ್ಕೆ ಎಳೆದು ಗಟ್ಟಿ ಮಾಡಬೇಕು.

F. **ಅಗ್ನಿಶಾಮಕನ ಕುರ್ಚಿಗಂಟು (ಫಯರ್‌ಮ್ಯಾನ್ಸ್ ಚೇರ್ ನಾಟ್ – Fireman's Chair Knot)**



ಉಪಯೋಗ: ಕಟ್ಟಡಗಳಿಗೆ ಬೆಂಕಿ ಹಿಡಿದಾಗ ಮೇಲಿನ ಅಂತಸ್ತಿನಲ್ಲಿರುವವರನ್ನು ಹಗ್ಗದ ಮೂಲಕ ಕೆಳಗೆ ಇಳಿಸಲು, ಬಾವಿಗೆ ಇಳಿದು, ಮೇಲೆ ಬರಲಾಗದಾಗ ಆ ವ್ಯಕ್ತಿಯನ್ನು ತರಲು ಈ ಕಟ್ಟನ್ನು ಬಳಸುತ್ತಾರೆ. ಅಗ್ನಿಶಾಮಕ ದಳದವರು ಈ ಗಂಟಿನ ಉಪಯೋಗ ಮಾಡುವುದನ್ನು ನಾವೆಲ್ಲ ಕಾಣುತ್ತೇವೆ.



ಹಗ್ಗದ ನಡುವಿನಲ್ಲಿ ಎರಡು ಮಲಕುಗಳನ್ನು ಮಾಡಬೇಕು. ಒಂದು ಮೇಲಿನ ಬದಿಗೂ, ಇನ್ನೊಂದು ಕೆಳಗಿನ ಬದಿಗೂ ಇರಬೇಕು. ಕೆಳಗಿನ ಬದಿಗೆ ಇರುವುದನ್ನು ಇನ್ನೊಂದರ ಮೇಲೆ ಅರ್ಧ ಬರುವಂತೆ ಇರಿಸಬೇಕು. ಮೇಲೆ ಇರಿಸಿದ ಸುರುಳಿಯನ್ನು ಅಡಿಯಿಂದಲೂ ಅಡಿಯಲ್ಲಿದ್ದುದನ್ನು ಮೇಲಿನಿಂದಲೂ ಹಿಡಿದು ಎಳೆಯಬೇಕು. ಒಂದು ಭಾಗ ಎರಡು ಪಾಲು, ಇನ್ನೊಂದು ಒಂದು ಪಾಲು ಇರುವಂತೆ ಎಳೆದು ಸರಿಪಡಿಸಿಕೊಳ್ಳಬೇಕು. ಈಗ ಮಧ್ಯದಲ್ಲಿ ಕಟ್ಟು ಬೀಳುತ್ತದೆ. ಅದರ ಎರಡೂ ಬದಿಗಳಲ್ಲಿ ಎರಡು ಮಲಕು ಹಾಕಿ ಎಳೆದು ಗಟ್ಟಿ ಮಾಡಿದರೆ ಗಂಟು ಸಿದ್ಧ.

G ಏಣಿಗಂಟು (ಮ್ಯಾನ್ ಹಾರ್‌ನಸ್ ನಾಟ್ –Man Harness Knot)

ಉಪಯೋಗ: ಒಂದೇ ಹಗ್ಗದಿಂದ ಏಣಿ ತಯಾರಿಸುವುದು.

ವಿಧಾನ: ಹಗ್ಗವನ್ನು ಮಧ್ಯದಲ್ಲಿ ಹಿಡಿದುಕೊಳ್ಳಬೇಕು. ಒಂದು ಸುರುಳಿ ಮಾಡಬೇಕು. ಅದರ ಒಳಗಿನಿಂದ ಸ್ಥಾನಿಕ ಭಾಗವನ್ನು ಸ್ವಲ್ಪ ಎಳೆಯಬೇಕು. ಆಗ ಉಂಟಾಗುವ ವೃತ್ತದ ಮೂಲಕ ಬೆರಳು ಹಾಕಿ, ಮೊದಲ ವೃತ್ತದ ಭಾಗವನ್ನು ಎಳೆದು ಗಂಟನ್ನು ಗಟ್ಟಿಮಾಡಬೇಕು. ಹಗ್ಗದ ಏಣಿ ತಯಾರಿಸುವಾಗ ಒಂದು ಹಗ್ಗದಲ್ಲಿ ಅಂತಹ ಹಲವಾರು ಗಂಟುಗಳನ್ನು ಹಾಕಬೇಕಾಗುತ್ತದೆ.



H. ಕೊಟ್ಟಿಗೆ ಗಂಟು (ಕ್ಲೌ ಹಿಚ್–Clove Hitch)

ಉಪಯೋಗ: ಒಂದು ಗೂಟಕ್ಕೆ ಒಂದು ಹಗ್ಗವನ್ನು ತಾತ್ಕಾಲಿಕವಾಗಿ ಕಟ್ಟುವುದು. ಮುಂದೆ ಕಲಿಯಲಿರುವ ಹೆಚ್ಚಿನ ಲ್ಯಾಷಿಂಗ್‌ಗಳನ್ನು ಆರಂಭಿಸುವುದು ಈ ಗಂಟಿನಿಂದಲೇ ಆಗಿದೆ.



ವಿಧಾನ: ಹಗ್ಗದ ಧಾವಕ ಭಾಗವನ್ನು ದಂಡಕ್ಕೆ ಎರಡುಬಾರಿ ಸುತ್ತಿ ತರಬೇಕು. ಎರಡನೇ ಬಾರಿ ಸುತ್ತುವಾಗ ಮೊದಲಿನ ಸುತ್ತಿನ ಮೇಲೆ **"X"** ಆಕಾರ ರಚಿಸುವಂತಿರಬೇಕು. ಅದೇ ಆಕಾರದ ಒಳಗೆ ಧಾವಕ ಭಾಗವನ್ನು ಹಾಕಿದಾಗ ಈ ಗಂಟು ಸಿದ್ಧವಾಗುತ್ತದೆ.

ಕ್ಲೌ ಹಿಚ್ಚನ್ನು ಇನ್ನೂ ಎರಡು ವಿಧಾನಗಳ ಮೂಲಕವೂ ಹಾಕಬಹುದು. ಒಂದು ಧಾವಕ ಭಾಗವನ್ನು ದಂಡದ ತುದಿಯಲ್ಲಾದರೆ ಹಗ್ಗದ ಎರಡು ಬಾರಿ ಒಳಬದಿಗೆ ಸುರುಳಿಮಾಡಿ ಸಿಕ್ಕಿಸುವುದು. ಎರಡು ಮಲಕುಗಳನ್ನು (ಎಂದರೆ ಒಮ್ಮೆ ಸುತ್ತಿ ಒಳಗಿನಿಂದ ತೆಗೆಯುವುದು) ಹಾಕಿ ರಚಿಸುವುದು ಇನ್ನೊಂದು ವಿಧಾನ. ಮುಂದೆ ಕಲಿಯಲಿರುವ ಲ್ಯಾಷಿಂಗ್‌ಗಳನ್ನೆಲ್ಲಾ ಮೂರನೇ ವಿಧಾನದಲ್ಲೇ ಕೊನೆಗೊಳಿಸುವುದು ಉತ್ತಮ. ಆಗ ಆ ಲ್ಯಾಷಿಂಗ್ ತುಂಬಾ ಗಟ್ಟಿಯಾಗುತ್ತದೆ.

I. ಉರುಳು ಗಂಟು (ರೋಲಿಂಗ್ ಹಿಚ್–Rolling Hitch)

ಉಪಯೋಗ: ಇದು ಒಂದು ಎಳೆದು ಕಟ್ಟಿದ ಹಗ್ಗ ದುರ್ಬಲವಾದಾಗ ಅದಕ್ಕೆ ಬಲವನ್ನು ಕೊಟ್ಟು, ಇನ್ನೊಂದು ಹಗ್ಗವನ್ನು ಎಳೆದು ಕಟ್ಟಲು ಉಪಯೋಗವಾಗುತ್ತದೆ. ಕೆಲವು ಕಡೆ ಈ ಹಿಚ್‌ಗಿಂತ ಹೆಚ್ಚು ಭದ್ರವಾಗಿ ರೋಲಿಂಗ್ ಹಿಚ್ಚನ್ನು ಹಾಕಲಾಗುತ್ತದೆ.

ವಿಧಾನ: ಕ್ಲೌ ಹಿಚ್‌ಗೆ ಆರಂಭಿಸಿದಂತೆಯೇ ದಂಡಕ್ಕೆ ಅಥವಾ ಹಗ್ಗಕ್ಕೆ ಹಗ್ಗದ ಧಾವಕ ಭಾಗವನ್ನು ಸುತ್ತಬೇಕು. ಈಗ ಮೂರು ಬಾರಿ ಸುತ್ತಿ ವಿರುದ್ಧ ದಿಕ್ಕಿಗೆ ಒಯ್ಯಬೇಕು. ಕ್ಲೌ ಹಿಚ್ಚನ್ನು ಕೊನೆಗೊಳಿಸಿದಂತೆಯೇ ಕೊನೆಯ ಸುತ್ತಿನ ಒಳಗಿನಿಂದ ತೆಗೆದು ಗಟ್ಟಿ ಮಾಡಬೇಕು.

J. ದಿಮ್ಮಿಗಂಟು (ಟಿಂಬರ್ ಹಿಚ್–Timber Hitch)



ಉಪಯೋಗ: ಮರದ ದಿಮ್ಮಿಗಳನ್ನು ಎಳೆದುಕೊಂಡು ಹೋಗುವಾಗ ಅಥವಾ ಕಟ್ಟಿಗೆಯ ಕಟ್ಟನ್ನು ಒಯ್ಯಲೂ ಇದನ್ನು ಬಳಸುತ್ತಾರೆ.

ವಿಧಾನ: ಹಗ್ಗದ ಧಾವಕ ಭಾಗವನ್ನು ದಿಮ್ಮಿಗೆ ಅಥವಾ ಕಟ್ಟಿಗೆಯ ಕಟ್ಟಿಗೆ ಸುತ್ತಿ ತೆಗೆಯಬೇಕು. ಪೂರ್ಣ ಸುತ್ತಿದ ಮೇಲೆ ಸ್ಥಾನಿಕ ಭಾಗಕ್ಕೂ ಒಂದು ಸುತ್ತು ಹಾಕಿ ಅದೇ ಕಡೆಗೆ ಕೊಂಡೊಯ್ಯಬೇಕು. ಆಗ ಸುತ್ತಿರುವ ಹಗ್ಗದ ಒಳಗೆ ಮೂರು–ನಾಲ್ಕು ಬಾರಿ ಹಾಕಿ ತೆಗೆಯಬೇಕು.

ಮರ ದ ದಿಮ್ಮಿಗಳನ್ನು ಎಳೆಯುವಾಗ ಎಳೆಯುವ ದಿಕ್ಕಿಗೆ ಇನ್ನೊಂದು ಮಲಕು–ಹಾಪ್ ಹಿಚ್ಚನ್ನು ಹಾಕುತ್ತಾರೆ. ಅದಕ್ಕೆ ಕಿಲ್ಲಿಕ್ ಬೆಂಡ್ (Killik Bend) ಎನ್ನುತ್ತಾರೆ.

K. ಸುತ್ತೊಂದೆರಡರೆ ಮಲಕು ಗಂಟು (ರೌಂಡ್ ಟರ್ನ್ ಅಂಡ್ ಟು ಹಾಫ್ ಹಿಚಸ್–Round turn and two half hitche)

ಉಪಯೋಗ: ಗುಡಾರ ಹಗ್ಗವನ್ನು ಎಳೆದು ಗೂಟಕ್ಕೆ ಕಟ್ಟುವುದು. ನೀರೆಳೆಯುವ ಮೋಟಾರಿನ ಸಕ್ಷನ್ ಪೈಪ್‌ಗೆ ಕಟ್ಟಿದ ಹಗ್ಗದಂತೆ ಒಂದು ತುದಿ ಮಾತ್ರ ಸಿಗುವ ಹಗ್ಗವನ್ನು ಯಾವುದೇ ಗೂಟಕ್ಕೆ ಬಿಗಿಯಾಗಿ ಕಟ್ಟಲು ಇದು ಅತ್ಯುತ್ತಮ.



ವಿಧಾನ: ದಾವ ಭಾಗವನ್ನು ಸಾಧ್ಯವಿರುವಷ್ಟು ಎಳೆದು ಬಿಗಿಮಾಡಿ ಕಟ್ಟಬೇಕಾದ ಕಂಬಕ್ಕೆ ಅಥವಾ ಗೂಟಕ್ಕೆ ಎರಡು ಬಾರಿ ಸುತ್ತಬೇಕು. ಅದೇ ಹಗ್ಗದ ಎಡೆಯಲ್ಲಿ ಎರಡು ಬಾರಿ ಮೇಲಿನಿಂದ ಕೆಳಕ್ಕೆ ಅಥವಾ ಕೆಳಗಿನಿಂದ ಮೇಲಕ್ಕೆ ಸಿಲುಕಿಸಿ, ತೆಗೆದು ಗಟ್ಟಿಮಾಡಬೇಕು. ಮತ್ತೂ ಹಗ್ಗ ಉಳಿದಿದ್ದರೆ ನೆಲಕ್ಕೆ ತಾಗದಂತೆ ಇರಿಸಲು ಹಿಂದೆ ಸಿಲುಕಿಸಿದಂತೆಯೇ ಸಿಲುಕಿಸಿ, ಇರಿಸಬಹುದು.

I ಸನ್ನೆ ಗಂಟು (ಲಿವರ್ ಹಿಚ್ ಅಥವಾ ಮಾರ್‌ಲೈನ್ ಸ್ಪೈಕ್ ಹಿಚ್–Lever hitch or Marline spike hitch)

ಉಪಯೋಗ: ಹಗ್ಗ ಮತ್ತು ದಂಡಗಳನ್ನು ಉಪಯೋಗಿಸಿ ಏಣಿ ರಚಿಸುವುದು. ಗ್ಯಾಡ್ಜೆಟ್ ತಯಾರಿಸಲೂಬಹುದು.



ವಿಧಾನ: ಹಗ್ಗದ ಮಧ್ಯದಲ್ಲಿ ಹಿಡಿದುಕೊಂಡು, ಅದನ್ನು ಸುತ್ತಿ ಒಂದು ಸಣ್ಣ ಸುರುಳಿ ತಯಾರಿಸಬೇಕು. ಅದರ ಮೂಲಕವಾಗಿ ಸ್ಥಾನಿಕ ಭಾಗವನ್ನು ಎಳೆದಾಗ ಅಲ್ಲಿ ಒಂದು ಕುಣಿ ರೂಪುಗೊಳ್ಳುವುದು, ಸಣ್ಣ ಅದಕ್ಕೆ ದಂಡವನ್ನು ಸಿಲುಕಿಸಿದರೆ ಸಾಕು. ದಂಡದ ಇನ್ನೊಂದು ಬದಿಯಲ್ಲೂ ಹಗ್ಗದಿಂದ ಅದೇರೀತಿ ರಚಿಸಬೇಕು. ಬೇಕಾದಷ್ಟು ಸಣ್ಣ ದಂಡಗಳನ್ನು ಇರಿಸಿ, ಲಿವರ್ ಹಿಚ್ ಹಾಕಬಹುದು. ಆದರೆ ಪ್ರತಿಯೊಂದಕ್ಕೂ ಎರಡೂ ಬದಿಗಳಲ್ಲಿ ಸಮಾನ ದೂರವಿರಬೇಕು.

M ಕತ್ತರಿಕಟ್ಟು ರೀತಿ–1 (ಷಿಯ ಲ್ಯಾಪಿಂಗ್–Shear Lashing)

ಉಪಯೋಗ: ಎರಡು ದಂಡಗಳನ್ನು ಸೇರಿಸಿ ಆಧಾರ ಕವೆಕಂಬ (ಷಿಯರ್ ಲೆಗ್) ತಯಾರಿಸುವುದು. ಇದನ್ನು ಬಾಗುತ್ತಿರುವ ಗೊನೆಯಿರುವ ಬಾಳೆ ಗಿಡಕ್ಕೆ ಆಧಾರ ನೀಡಲು, ಗ್ಯಾಡ್ಜೆಟ್, ಗುಡಾರ ಮೊದಲಾದವುಗಳನ್ನು ರಚಿಸಲು ಉಪಯೋಗಿಸುತ್ತಾರೆ.



ವಿಧಾನ: ಎರಡು ದಂಡಗಳನ್ನು ತೆಗೆದುಕೊಂಡು ಅವುಗಳ ಅಡಿ ಭಾಗ ಒಂದೇ ರೀತಿ ಬರುವಂತೆ ಇರಿಸಬೇಕು. ದಂಡಗಳ ಮೂರನೇ ಎರಡು ಅಂಶಕ್ಕಿಂತ ಮೇಲಿನ ಭಾಗವನ್ನು ಆಯ್ದುಕೊಳ್ಳಬೇಕು. ಒಂದು ದಂಡಕ್ಕೆ ಕೊಟ್ಟಿಗೆ ಗಂಟು ಹಾಕಬೇಕು. ಎರಡೂ ದಂಡಗಳನ್ನು ಸೇರಿಸಿ ಮೂರರಿಂದ ಆರು ಬಾರಿ ಗಟ್ಟಿಯಾಗಿ ಸುತ್ತಬೇಕು. ದಂಡವನ್ನು ಅಗತ್ಯವಿರುವಷ್ಟು ಅಗಲಕ್ಕೆ ನೋಡಿಕೊಂಡು ನೀಟಕ್ಕೆ ಇರಿಸಬೇಕು. ಎರಡು ದಂಡಗಳ ಮಧ್ಯೆ ಗಟ್ಟಿಯಾಗಿ ಬಿಗಿತದಸುತ್ತು (ಫ್ರಾಪಿಂಗ್) ಹಾಕಬೇಕು. ಇನ್ನೊಂದು ದಂಡದಲ್ಲಿ ಎರಡು ಮಲಕು ಹಾಕುವುದರ ಮೂಲಕ ಕೊಟ್ಟಿಗೆಗಂಟು ಹಾಕಿ ಕೊನೆಗೊಳಿಸಬೇಕು.

N. ಕತ್ತರಿ ಕಟ್ಟು ರೀತಿ–2 (ಷಿಯರ್ ಲ್ಯಾಷಿಂಗ್–Shear Lashing)

ಉಪಯೋಗ: ಒಂದು ದಂಡಕ್ಕೆ ಇನ್ನೊಂದು ದಂಡವನ್ನು ಸೇರಿಸಿ ಉದ್ದಮಾಡುವುದು. ಉದಾ: ಧ್ವಜಸ್ತಂಭ ನಿರ್ಮಾಣ.

ವಿಧಾನ: ಸೇರಿಸಿ ಕಟ್ಟಬೇಕಾದ ಎರಡೂ ದಂಡಗಳ ಮೂರನೇ ಒಂದು ಭಾಗ ತಾಗಿರುವಂತೆ ಇರಿಸುವುದು. ಒಂದು ಬದಿಯಲ್ಲಿ ಎರಡೂ ದಂಡಗಳನ್ನು ಸೇರಿಸಿ ಕೊಟ್ಟಿಗೆ ಗಂಟು ಹಾಕಬೇಕು, ಎರಡೂ ದಂಡಗಳನ್ನು ಸೇರಿಸಿ ಗಟ್ಟಿಯಾಗಿ ಮೂರರಿಂದ ಆರು ಬಾರಿ ಸುತ್ತಬೇಕು. ಎರಡು ಮಲಕು ಹಾಕುವುದರ ಮೂಲಕ ಕೊಟ್ಟಿಗೆಗಂಟು ಹಾಕಿ ಕೊನೆಗೊಳಿಸ ಬೇಕು. ಇದೇರೀತಿ ಇನ್ನೊಂದು ಬದಿಯಲ್ಲಿಯೂ ಮಾಡಬೇಕು. ಹಗ್ಗವು ಗಟ್ಟಿಯಾಗಲು ಅದರ ಎಡೆಯಲ್ಲಿ ಸಣ್ಣ ಒಂದೊಂದು ಬೆಣೆ (Wedge) ಗಳನ್ನಿಡಬೇಕು.

O. ಚೌಕ ಕಟ್ಟು (ಸ್ಕೈ ಲ್ಯಾಷಿಂಗ್–Square Lashing)



ಉಪಯೋಗ: ಯಾವುದೇ ಒಂದು ನೀಟ ದಂಡಕ್ಕೆ ಒಂದು ಅಡ್ಡ ದಂಡವನ್ನು ಕಟ್ಟುವುದು. ಧ್ವಜ ಸ್ತಂಭದ ಮೇಲೆ ಎದೆಮಟ್ಟದಲ್ಲಿ ಕಟ್ಟುವ ಕಡ್ಡಿ (ಕ್ಲೀಟ್) ಕಟ್ಟುವುದು ಲ್ಯಾಷಿಂಗ್‌ನಿಂದಲೇ ಆಗಿದೆ.



ವಿಧಾನ: ನೀಟ ದಂಡದಲ್ಲಿ ಅಡ್ಡ ದಂಡ ನಿಲ್ಲಬೇಕಾದ ಸ್ಥಾನವನ್ನು ಗುರುತಿಸಬೇಕು. ಅಲ್ಲಿಂದ ಸ್ವಲ್ಪ ಕೆಳಗೆ ಒಂದು ಕೊಟ್ಟಿಗೆಗಂಟು ಹಾಕಬೇಕು. ಅದರ ಮೇಲೆ ಅಡ್ಡ ದಂಡವನ್ನಿರಿಸಬೇಕು. ಹಗ್ಗವನ್ನು ಅಡ್ಡ ಹಾಗೂ ನೀಟ ದಂಡಕ್ಕೆ ಒಟ್ಟಾಗಿ ಸುತ್ತಬೇಕು. ಒಂದು ಬದಿಯಲ್ಲಿ

ಮೇಲಿನಿಂದ ಸುತ್ತಿದರೆ ಇನ್ನೊಂದು ಬದಿಗೂ ಮೇಲಿನಿಂದಲೇ ಆಗಬೇಕು. ಮೂರರಿಂದ ಆರು ಬಾರಿ ಸುತ್ತಿದ ನಂತರ ಸುರುಳಿಯಾಕಾರದಲ್ಲಿ ದಂಡಗಳ ನಡುವೆ ಸುತ್ತಬೇಕು. ಕೊನೆಗೆ ಅಡ್ಡ ದಂಡದಲ್ಲಿ ಕೊಟ್ಟಿಗೆ ಗಂಟು ಹಾಕಿ ಮುಗಿಸಬೇಕು.

P. ಎಂಟರ ಆಕಾರದ ಕಟ್ಟು (ಫಿಗರ್ ಆಫ್ ಎಯಿಟ್ ಲ್ಯಾಷಿಂಗ್–Figure of 8 Lashing)





ಉಪಯೋಗ: ಮೂರು ಕಾಲಿನ ಪೀಠ ನಿರ್ಮಿಸುವ ಮೂಲಕ ಒಯ್ಯಬಹುದಾದ ಧ್ವಜಸ್ತಂಭ ನಿರ್ಮಾಣ, ಸಾಧನ ಸಲಕರಣೆ ನಿರ್ಮಾಣ ಇತ್ಯಾದಿ.

ವಿಧಾನ: ಮೂರು ದಂಡಗಳನ್ನು ತೆಗೆದುಕೊಂಡು ಅವುಗಳ ಅಡಿ ಭಾಗ ಒಂದೇ ರೀತಿ ನಿಲ್ಲುವಂತೆ ಇರಿಸುವುದು. ಒಂದು ಬದಿಯ ದಂಡದ ತುದಿಯಲ್ಲಿ ಕೊಟ್ಟಿಗೆಗಂಟು ಹಾಕುವುದು. ಮೂರು ದಂಡಗಳು ಒಳಗೊಳ್ಳುವಂತೆ “8” ಆಕೃತಿಯಲ್ಲಿ ಸುತ್ತುವುದು. ದಂಡಗಳು ಅಗತ್ಯವಿರುವಷ್ಟು ಅಂತರದಲ್ಲಿ ಇರುವಂತೆ ನೀಟಕ್ಕೆ ಇರಿಸುವುದು. ದಂಡಗಳ ನಡುವೆ (ಎರಡು ಕಡೆಗಳಲ್ಲಿ ಒಂದರ ನಂತರ ಒಂದರಲ್ಲಿ) ಗಟ್ಟಿಯಾಗಿ ಬಿಗಿಸುತ್ತು ಹಾಕುವುದು. ಆರಂಭಿಸಿದ ದಂಡದ ವಿರುದ್ಧ ದಿಕ್ಕಿನ ದಂಡದಲ್ಲಿ ಕೊಟ್ಟಿಗೆಗಂಟು ಹಾಕಿ ಕೊನೆಗೊಳಿಸುವುದು.

Q. ಕರ್ಣ ಕಟ್ಟು (ಡಯಗನಲ್ ಲ್ಯಾಷಿಂಗ್–)



ಉಪಯೋಗ: ಎರಡು ದಂಡಗಳನ್ನು “X” ಆಕೃತಿಯಲ್ಲಿ ಕಟ್ಟುವುದು ಅಥವಾ ಬಾಗಿರುವ ಒಂದು ಗಿಡವನ್ನು ವಿರುದ್ಧ ದಿಕ್ಕಿಗೆ ಎಳೆದು ಇನ್ನೊಂದಕ್ಕೆ ಮೇಲೆ ಹೇಳಿದ ಆಕೃತಿಯಲ್ಲಿ ಕಟ್ಟುವುದು. ದಿಮ್ಮಿಗಂಟಿನಿಂದ ಆರಂಭಿಸುವ ಏಕೈಕ ಕಟ್ಟು ಇದಾಗಿದೆ.

ವಿಧಾನ: ಎರಡು ದಂಡಗಳನ್ನು ಒಟ್ಟಾಗಿ ಇರಿಸಿ ದಿಮ್ಮಿಗಂಟು ಹಾಕುವುದು. ಹಗ್ಗದ ಸ್ಥಾನಿಕ ಭಾಗವನ್ನು ವಿರುದ್ಧ ದಿಕ್ಕಿಗೆ ಎಳೆದು ಎರಡೂ ದಂಡಗಳಿಗೆ ಅಡ್ಡಕ್ಕೆ ಮೂರರಿಂದ ಆರು ಬಾರಿ ಸುತ್ತುವುದು. ದಂಡಗಳನ್ನು "X" ಆಕೃತಿಯಲ್ಲಿ ಇರಿಸಿ, ನೀಟಕ್ಕೆ ಮೂರರಿಂದ ಆರು ಬಾರಿ ಸುತ್ತುವುದು. ಅನಂತರ ದಂಡಗಳ ಎಡೆಯಲ್ಲಿ ಬಿಗಿಸುತ್ತು ಹಾಕುವುದು. ತೂಕ ಬೀಳುವ ದಂಡದ ಕೆಳಭಾಗಕ್ಕೆ ಕೊಟ್ಟಿಗೆಗಂಟು ಹಾಕುವುದರ ಮೂಲಕ ಕೊನೆಗೊಳಿಸುವುದು.

R. ಇಕ್ಕುಳಿಕೆ ಗಂಟು, ಕುಣಿಯೊಳಗಿನ ಕುಣಿಕೆಗಂಟು (ಬೌ ಲೈನ್ ಆನ್ ಬೈಟ್–Bowline on Bight)

ಉಪಯೋಗ: ಏಕಕಾಲಕ್ಕೆ ಎರಡು ಸ್ಥಿರ ಕುಣಿಕೆಗಳ ತಯಾರಿ. ಒಂದು ಹಗ್ಗದ ಮಧ್ಯದಲ್ಲಿ ಕುಣಿಕೆ ತಯಾರಿ. ಉಯ್ಯಾಲೆ ಆಡಲು ಬಳಸ ಬಹುದು. ಕುರ್ಚಿ ಗಂಟಿನಂತೆ ರೋಗಿಯನ್ನು ಇಳಿಸಲೂ ಬರುತ್ತದೆ.



ವಿಧಾನ: ಹಗ್ಗವನ್ನು ಮಡಚಿ ಕುಣಿ ತಯಾರಿಸುವುದು. ಕುಣಿಕೆಯ ಉದ್ದದಷ್ಟು ಮೇಲೆ ಒಂದು ಸಣ್ಣ ಸುರುಳಿ ಮಾಡುವುದು. ಕುಣಿಕೆ ಗಂಟು ಹಾಕಿದಂತೆಯೇ ಆ ಸುರುಳಿಯೊಳಗೆ ಮಲಕವನ್ನು ಹಾಕಿ ತೆಗೆಯುವುದು. ಅದನ್ನು ಕೆಳಕ್ಕೆ ತಂದು ಹಗ್ಗದ ಉಳಿದ ಎಲ್ಲಾ ಭಾಗಗಳನ್ನು ಒಳಗಿನಿಂದ ತೆಗೆದಾಗ ಈ ಗಂಟು ಸಿದ್ಧವಾಗುತ್ತದೆ.

S. ಇಮ್ಮೂಲೆ ಗಂಟು (ಡಬಲ್ ಶೀಟ್ ಬೆಂಡ್–Double Sheet Bend)

ಉಪಯೋಗ: ಮೂಲೆಗಂಟಿಗಿಂತಲೂ ಹೆಚ್ಚು ಭದ್ರವಾಗಿ ಹಾಕಬಹುದಾದ ಗಂಟು, ಧ್ವಜವನ್ನು ಸ್ತಂಭದ ಹಗ್ಗಕ್ಕೆ ಕಟ್ಟುವಾಗ ಈ ಗಂಟನ್ನು ಹಾಕುವುದು ಸುರಕ್ಷಿತ.



ವಿಧಾನ: ಮೂಲೆಗಂಟು ಹಾಕಿದಂತೆಯೇ ಹಗ್ಗವನ್ನು ಮಡಿಚಿ ಕುಣಿಕೆ ಮಾಡಿ ಹಿಡಿದುಕೊಳ್ಳುವುದು. ಇನ್ನೊಂದು ಭಾಗವನ್ನು ತಂದು ಅದರೊಳಗಿನಿಂದ ತೆಗೆದು ಒಂದು ಬಾರಿ ಸುತ್ತಿ ಒಳಗೆ ಸಿಲುಕಿಸಿ, ಪುನಃ ಇನ್ನೊಮ್ಮೆ ಸುತ್ತಿ ಹಗ್ಗದ ಒಳಗಿರಿಸಿ, ಗಟ್ಟಿ ಮಾಡಿದಾಗ ಗಂಟು ಸಿದ್ಧ.

T. ಬೆಸ್ತರ ಬಾಗುಗಂಟು (ಫಿಶರ್‌ಮ್ಯಾನ್ಸ್ ಬೆಂಡ್–Fisherman's Bend)



ಉಪಯೋಗ: ದೋಣಿ ಮೊದಲಾದವುಗಳನ್ನು ಎಳೆದು ತಂದು ನದಿ ಬದಿಯಲ್ಲಿರುವ ಕಬ್ಬಿಣದ ಬಳೆಗೆ ಬಂಧಿಸಲು ಬರುತ್ತದೆ.

ವಿಧಾನ: ಹಗ್ಗದ ಧಾವಕ ಭಾಗವನ್ನು ಬಳೆಗೆ ಎರಡುಬಾರಿ ಸುತ್ತುವುದು. ಬಳಿಕ ಸ್ಥಾನಿಕ ಭಾಗದ ಮೇಲಿನಿಂದ ಹಾಯಿಸಿ ಮೊದಲ ಸುತ್ತಿನ ಒಳಗಿನಿಂದ ತೆಗೆದು ಹೊರಗೆ ಸ್ಥಾನಿಕ ಭಾಗದ ಮೇಲೆ ಎರಡು ಮಲಕುಗಂಟು ಹಾಕಿ ಕೊನೆಗೊಳಿಸುವುದು.



I. ಅಟ್ಟಳಿಕೆಗಂಟು (ಸ್ಕಾಫೊಲ್ಡ್ ಹಿಚ್–Scaffold Hitch)

ಉಪಯೋಗ: ಮರದ ಸಣ್ಣ ಹಲಗೆಯಿಂದ ಉಯ್ಯಾಲೆ ತಯಾರಿಸಲು, ಸಾಹಸಿಕ ಕಾರ್ಯಕ್ರಮಗಳ ಸಂದರ್ಭ ಉಯ್ಯಾಲೆ (ಸ್ವಿಂಗಿಂಗ್) ಹಲಗೆಯನ್ನು ತಯಾರಿಸಲು ಬರುತ್ತದೆ.

ವಿಧಾನ: ಹಗ್ಗದ ಧಾವಕ ಭಾಗವನ್ನು ಉದ್ದ ಎಳೆದು ಹಗ್ಗವು ಮಧ್ಯೆ ಹಲಗೆಯ ಮೇಲೆ ಬರುವಂತೆ, ಮೂರು ಬಾರಿ ಸುತ್ತುವುದು. ಅನಂತರ ಕೊನೆಯ ಸುತ್ತನ್ನು ಒಂದು ಮತ್ತು ಎರಡರ ನಡುವೆ ಇರಿಸುವುದು. ಎರಡನೆಯ ಸುತ್ತಿನ ಭಾಗವನ್ನು ಸ್ವಲ್ಪ ಎಳೆದು ಹಲಗೆಯ ಅಡಿಭಾಗಕ್ಕೆ ಸಿಲುಕಿಸಿ ಗಟ್ಟಿ ಮಾಡುವುದು. ಇನ್ನೊಂದು ಹಗ್ಗದಿಂದ ಹಲಗೆಯ ಇನ್ನೊಂದು ಭಾಗದಲ್ಲೂ ಇದೇ ರೀತಿ ಮಾಡುವುದು.



V. ಬೆಕ್ಕು ಪಂಜು (ಕ್ಯಾಟ್ಸ್ ಪಾ–Cat's Paw)



ಉಪಯೋಗ: ರಾಟೆಯನ್ನು ಭದ್ರವಾಗಿ ಸಿಕ್ಕಿಸಬೇಕಾದ ಸಂದರ್ಭಗಳಲ್ಲಿ ಈ ಗಂಟನ್ನು ಬಳಸಿದರೆ ಹೆಚ್ಚು ಬಲಯುತವಾಗಿ ಹಿಡಿದು ನಿಲ್ಲುತ್ತದೆ.

ವಿಧಾನ: ಹಗ್ಗದ ಮಧ್ಯ ಭಾಗವನ್ನು ಎರಡೂ ಕಡೆಗಳಲ್ಲಿ ತೋರು ಬೆರಳಿನಿಂದ ಹಿಡಿದುಕೊಳ್ಳುವುದು. ಎರಡನ್ನೂ ಒಟ್ಟಾಗಿ ನಾಲ್ಕೈದು ಬಾರಿ ತಿರುಗಿಸಿ ಒಟ್ಟು ಮಾಡಿ ರಾಟೆಯನ್ನು ಕುಣಿಗಳೊಳಗೆ ಸಿಕ್ಕಿಸಿ, (ರಾಟೆಯನ್ನು, ಮೇಲೆ ತೊಲೆ ಇತ್ಯಾದಿ ಭಾಗದಲ್ಲಿ) ಬಂಧಿಸುವುದು.

W. ಕ್ಯಾರಿಕ್ ಬಾಗು ಗಂಟು (ಕ್ಯಾರಿಕ್ಸ್ ಬೆಂಡ್– Carrick's Bend)

ಉಪಯೋಗ: ಇದೊಂದು ಭದ್ರವಾದ ಪ್ರತಿಬಂಧಕ ಗಂಟು. ಇದರ ಚಿತ್ರವನ್ನು ಹಿರಿಯರು ಧರಿಸುವ ಪದಕದಲ್ಲಿ ಕಾಣಬಹುದು.



ವಿಧಾನ: ಹಗ್ಗದ ಎರಡೂ ತುದಿಗಳು ಧಾವಕ ಭಾಗಗಳಾಗುತ್ತವೆ. ಒಂದು ಭಾಗವನ್ನು ಮಡಚಿ ಹಿಡಿದುಕೊಳ್ಳಬೇಕು. ತುದಿ ವಿರುದ್ಧ ದಿಕ್ಕಿಗೆ ಇದ್ದು "X" ಆಕಾರ ರಚನೆಯಾಗಬೇಕು. ಇನ್ನೊಂದು ಭಾಗವನ್ನು ಅಲ್ಲಿರುವ ವೃತ್ತಕ್ಕೆ ಓರೆಯಾಗಿ ಅಡಿಭಾಗದಲ್ಲಿ ಇರಿಸಿ ತುದಿಯನ್ನು ಮೇಲ್ಭಾಗದಿಂದಾಗಿ ಸುತ್ತಿ ತರಬೇಕು, ಅದನ್ನು ಕೆಳಕ್ಕೆ ತಂದು ಅಡಿಯಲ್ಲಿರುವ ಭಾಗದ ಅಡಿಯಿಂದ ಸಿಲುಕಿಸಿ ತೆಗೆಯಬೇಕು. ಆಗ ವಿರುದ್ಧ ದಿಕ್ಕಿಗೆ ನಿಂತಿರುವ ತುದಿಗಳನ್ನು ಒಟ್ಟಾಗಿ ಮಧ್ಯ ಭಾಗದಲ್ಲಿ ಸಿಲುಕಿಸಿ ತೆಗೆದರೆ ಬಂಧಕಗಂಟು (Stopper Knot) ರಚನೆಯಾಗುತ್ತದೆ. ದಾರದ (ವಿಸಿಲ್ ಲೆನ್ಯಾರ್ಡ್) ತುದಿಯಲ್ಲಿ, ವೃಕ್ಷಮಣಿಗಳ ದಾರದ ಮೇಲೆ ಈ ಗಂಟನ್ನು ಹಾಕುವುದಿದೆ.

6. ಹುರಿ ಸುತ್ತುವುದು (ವಿಪ್ಪಿಂಗ್–Whipping)

ವಿಪ್ಪಿಂಗ್ ಎಂದರೆ ಸುತ್ತುವುದು ಎಂದರ್ಥ. ಇದರಲ್ಲಿ ಹಲವಾರು ವಿಧಗಳಿವೆ. ಹಗ್ಗದ ತುದಿಗಳನ್ನು ಬಂಧಿಸದಿದ್ದರೆ ಅದರ ಎಳೆಗಳು ಬಿಚ್ಚಿ ಹೋಗಿ ಹಗ್ಗವು ನಿಷ್ಪ್ರಯೋಜಕವಾಗಿ ಹೋಗಬಹುದು. ಹಾಗೆಂದು ಕಟ್ಟು ಹಾಕಿದರೆ ಹಲವಾರು ಸಂದರ್ಭಗಳಲ್ಲಿ ಅದು ಉಪದ್ರವಕ್ಕೆ ಎಡೆ ಮಾಡಬಹುದು. ಆದುದರಿಂದ ವಿಪ್ಪಿಂಗ್ ಮಾಡುವುದೇ ಉತ್ತಮ. ವಿಪ್ಪಿಂಗ್ ಮಾಡಲು ವಿಪ್ಪಿಂಗ್ ಮಾಡಬೇಕಾದ ಹಗ್ಗದ ಆರನೇ ಒಂದಂಶದಷ್ಟು ಗಾತ್ರದ ನೂಲನ್ನು ಅಥವಾ ದಾರವನ್ನು ತೆಗೆದುಕೊಳ್ಳಬೇಕು.

A. ಸಾಮಾನ್ಯ ವಿಪ್ಪಿಂಗ್

ಇದು ವಿಪ್ಪಿಂಗ್‌ಗಳಲ್ಲಿ ಬಹಳ ಸರಳವಾದುದು.

ವಿಧಾನ: ಹಗ್ಗದ ತುದಿಯಲ್ಲಿ ನೂಲನ್ನು ಮೇಲಿನಿಂದ ಕೆಳಕ್ಕೆ ಬಾಗಿಸಿ ಇರಿಸಬೇಕು. ಒಂದು ತುದಿ ಸ್ವಲ್ಪ ಉದ್ದವಿರಬೇಕು. ಉದ್ದದ ತುದಿಯನ್ನು ಹಿಡಿದು ಹಗ್ಗದ ಇನ್ನೊಂದು ತುದಿಯನ್ನು ಮೇಲಿನಿಂದ ಗಟ್ಟಿಯಾಗಿ ಆರ-ರಿಂದ ಎಂಟು ಬಾರಿ ಸುತ್ತಬೇಕು. ಆ ತುದಿಯನ್ನು ಮೇಲೆ ಇರುವ ಕುಣಿಯ ಒಳಗೆ ಸಿಲುಕಿಸಿ ಇಡಬೇಕು. ಕೆಳಗಿನ ತುದಿಯನ್ನು ಎಳೆಯಬೇಕು. ಆಗ ಕುಣಿಯು ಸುತ್ತಿದ ನೂಲಿನ ಒಳಕ್ಕೆ ಸರಿಯುತ್ತದೆ. ಉಳಿದ ನೂಲಿನ ಭಾಗಗಳನ್ನು ತುಂಡರಿಸಿ ತೆಗೆಯಬೇಕು.



B. ಪಡುನಾಡು ವಿಧಾನ (ವೆಸ್ಟ್ ಕಂಟ್ರಿ ಬಿಟ್ಟಿಂಗ್–West Country Whipping)



ಹಗ್ಗದ ತುದಿಗಿಂತ ಎರಡು ಸೆಂಟಿಮೀಟರ್ ಕೆಳಗೆ ಒಂದು ಅರೆಗಂಟು ಹಾಕಬೇಕು. ಅದನ್ನು ಗಟ್ಟಿ ಮಾಡಿ ಅದರಮೇಲೆ ವಿರುದ್ಧ ದಿಕ್ಕಿನಲ್ಲಿ ಇನ್ನೊಂದು ಅರೆಗಂಟು ಹಾಕಬೇಕು. ಇದೇ ರೀತಿ ಆರರಿಂದ ಎಂಟು ಬಾರಿ ಹಗ್ಗದ ತುದಿಯ ಈ ಕಡೆ ಆ ಕಡೆಗೆ ಮಾಡುತ್ತಾ ಹೋಗಬೇಕು. ಕೊನೆಗೆ ಒಂದು ಸಮಗಂಟು ಹಾಕಿ ಮುಗಿಸಬೇಕು.

C. ನಾವೆಗಳ ಹಾಯಿ ಮಾಡುವವರ ವಿಧಾನ (ಸೈಲ್ ಮೇಕರ್ ವಿಪ್ಪಿಂಗ್–Sail Maker's Whipping)

ಹಗ್ಗದ ತುದಿಯಲ್ಲಿ ಎಳೆಗಳನ್ನು ಒಂದು ಸೆಂಟಿಮೀಟರ್‌ನಷ್ಟು ಬಿಡಿಸಬೇಕು. ನೂಲನ್ನು ಮಡಚಿ ಕುಣಿ ಮಾಡಿ ಎಳೆಗಳ ಎಡೆಯಿಂದ ವಿರುದ್ಧ ದಿಕ್ಕಿಗೆ ಇಳಿಬಿಡಬೇಕು. ನೂಲಿನ ಒಂದು ತುದಿಯಿಂದ ಉಳಿದ ನೂಲಿನ ಭಾಗವನ್ನೂ ಒಳಗೊಳ್ಳುವಂತೆ ಹಗ್ಗಕ್ಕೆ ಗಟ್ಟಿಯಾಗಿ ಆರರಿಂದ ಎಂಟುಬಾರಿ ತುದಿಯ ಕಡೆಗೆ ಸುತ್ತಬೇಕು. ಈಗ ಕೆಳಗಿರುವ ಕುಣಿಯನ್ನು ಮೇಲಕ್ಕೆ ತಂದು ಹಿಂದೆ ಹಾಕಿದ ಎಳೆಗಳ ಎಡೆಯಲ್ಲಿ ವಿರುದ್ಧ ದಿಕ್ಕಿಗೆ ಹಾಕಬೇಕು. ಕೆಳಗಿರುವ ನೂಲಿನ ತುದಿಯನ್ನು ಎಳೆದಾಗ ನೂಲು ಎಳೆಗಳ ಮಧ್ಯದಲ್ಲಿ ಗಟ್ಟಿಯಾಗುತ್ತದೆ. ಅಲ್ಲಿ ಸಮಗಂಟು ಹಾಕಿ ಮುಗಿಸಬೇಕು.



7. ಶಿಬಿರ ಸಲಕರಣೆಗಳು





PARTS OF AN AXE

Sharpening of an axe



ಚೂರಿ, ಕತ್ತಿ, ಕಬ್ಬಿಣದ ಸುತ್ತಿಗೆ, ಹಾರೆ, ಸಣ್ಣ ಗುದ್ದಲಿ ಮತ್ತು ಕೈ ಕೊಡಲಿ ಇವು ಮುಖ್ಯವಾದ ಶಿಬಿರ ಉಪಕರಣಗಳು.

ಈ ಶಿಬಿರ ಉಪಕರಣಗಳನ್ನು ಉಪಯೋಗಿಸಲು ಮತ್ತೆ ಮತ್ತೆ ಉಪಯೋಗಿಸಿ ಅಭ್ಯಾಸ ಮಾಡಿಕೊಳ್ಳಬೇಕು. ಅವುಗಳನ್ನು ಜಾಗ್ರತೆಯಿಂದ ಉಪಯೋಗಿಸಿ ಅಭ್ಯಾಸ ಮಾಡಿಕೊಳ್ಳಬೇಕು. ಅವುಗಳ ಅಲಗು ಸದಾಕಾಲ ಹರಿತವಾಗಿರುವಂತೆ ನೋಡಿಕೊಳ್ಳಬೇಕು. ಉಪಯೋಗವಿಲ್ಲದಿರುವಾಗ ಗ್ರೀಸ್ ಅಥವಾ ಎಣ್ಣೆ ಹಚ್ಚಿ ಇರಿಸಬೇಕು. ಇಲ್ಲದಿದ್ದರೆ ತುಕ್ಕು ಹಿಡಿದೀತು. ಚೂರಿ, ಕೈ ಕೊಡಲಿ ಇತ್ಯಾದಿಗಳನ್ನು ಚೀಲಗಳಲ್ಲಿ ಹಾಕಿ ಮುಚ್ಚಿ ಇರಿಸಿದರೆ ಉತ್ತಮ. ಹರಿತವಾದ ಅಲಗು ತಗುಲಿ ಗಾಯವಾಗುವುದು ತಪ್ಪುತ್ತದೆ.

ಒಬ್ಬ ಕೆಲಸಗಾರನ ಸಾಮರ್ಥ್ಯವನ್ನು ಆತನ ಸಲಕರಣೆಗಳನ್ನು ನೋಡಿ ತಿಳಿದುಕೊಳ್ಳಬಹುದೆಂಬ ಆಡುಮಾತುಂಟು. ಕೈಕೊಡಲಿಯು ಸ್ಕೌಟ್‌ಗಳ ಅತ್ಯಗತ್ಯ ವಸ್ತುಗಳಲ್ಲೊಂದು. ಜಾಗ್ರತೆ ವಹಿಸಿ ಜೋಪಾನ ಮಾಡಿಕೊಂಡರೆ ಅಗತ್ಯ ಬಂದಾಗಲೆಲ್ಲಾ ಉತ್ತಮ ರೀತಿಯಲ್ಲಿ ಉಪಯೋಗಿಸಲು ಸಾಧ್ಯವಾಗುತ್ತದೆ.

ಕೊಡಲಿಗಳಲ್ಲಿ ಹಲವು ತರಹವುಗಳಿವೆ. ಅವುಗಳಲ್ಲಿ ಮುಖ್ಯವಾದುವು. ಒಂದು ಕೈ ಕೊಡಲಿ (Hand Axe). ಮತ್ತೊಂದು ಮರ ಕಡಿಯುವ ದೊಡ್ಡ ಕೊಡಲಿ (Felling Axe).

ಕೈಕೊಡಲಿಯ ತಲೆಯ ಭಾರ 250ರಿಂದ 500 ಗ್ರಾಂ. ತನಕ ಆಗಬಹುದು. 250 ಗ್ರಾಂ. ಭಾರವಿದ್ದರೆ ಅದು ಸೂಕ್ತ. ಕೊಡಲಿಯ ಉದ್ದ 12ರಿಂದ 16 ಇಂಚು ಇರಬಹುದು. ದೊಡ್ಡ ಕೊಡಲಿಯ ತಲೆಯ ಭಾರ 1.5 ಕಿಲೋಗ್ರಾಂನಿಂದ ಹಿಡಿದು 3–6 ಕಿಲೋಗ್ರಾಂ ಇರಬಹುದು. ಕೊಡಲಿಯ ಹಿಡಿಯ ಉದ್ದ 2 ಅಡಿಯಿಂದ 3 ಅಡಿಯವರೆಗೆ ಇರಬಹುದು. ಕೊಡಲಿಯ ತಲೆ ಒಳ್ಳೆಯ ಉಕ್ಕಿನಿಂದ (Steel) ಮಾಡಿರಬೇಕು. ದೋಷಗಳಿರಬಾರದು (Flawless), ಬೆಣೆಯ ಆಕೃತಿಯಲ್ಲಿ (Wedge Shape) ಇರಬೇಕು. ಅಲಗು (Blade) ಅಗಲವಾಗಿಯೂ, ಅರ್ಧ ಚಂದ್ರಾಕಾರವಾಗಿಯೂ ಇರಬೇಕು. ಕೆನಡಾದಲ್ಲಿರುವ ನಾಯಿಯ ಕಾಲಿನಂತೆ ಹಿಡಿಯ ಆಕಾರವಿದ್ದರೆ ಉತ್ತಮ. ಮರದ ದಿಮ್ಮಿಯ ಸೀಳುಗಳಿಗೆ ನೇರವಾಗಿ ಇರುವುದಾದರೆ (Straight Grain) ಹಿಡಿಯು ಬೇಗನೆ ಮುರಿಯಲಾರದು. ಸೀಳುವ ಮರದ ದಿಮ್ಮಿಯಲ್ಲಿ ಗಂಟುಗಳು ಇರಬಾರದು. ಕೊಡಲಿಯ ಹಿಡಿಯ ಹಿಮ್ಮಡಿ (Heel) ಮತ್ತು ಅಲಗಿನ (Blade) ತುದಿ ನೇರ ರೇಖೆಯಲ್ಲಿ ಬರುವಂತಿರಬೇಕು.

ಕೊಡಲಿಯನ್ನು ಕೊಂಡೊಯ್ಯುವಾಗ

ಹೊರ ಸಂಚಾರಕ್ಕೆ ಹೋಗುವಾಗ ಕೊಡಲಿಯನ್ನು ಒರೆಯೊಳಗೆ ಇರಿಸಿ, ಸೊಂಟದಲ್ಲಿ ಅಥವಾ ಬೆಲ್ಟಿನಲ್ಲಿ ಇರಿಸಿಕೊಳ್ಳಬಹುದು. ಕೊಡಲಿಯನ್ನು ಮಾತ್ರ ಕೈಯ್ಯಲ್ಲಿ ಹಿಡಿದುಕೊಂಡು ಹೋಗುವಾಗ ಅದರ ತಲೆ (ಅಲಗು) ಕೆಳಗಡೆಯಿರುವಂತೆ ನೋಡಿಕೊಳ್ಳಬೇಕು. ಆಗ ಹಿಡಿ ಹಿಂಭಾಗಕ್ಕೆ ಇರಬೇಕು. ಕೊಡಲಿಯ ತಲೆ ಹೆಗಲಿನಲ್ಲಿ ಇರಿಸಿಕೊಂಡು ಕೂಡಾ (ಅಲಗು ಹಿಂಭಾಗಕ್ಕಿರಬೇಕು) ಕೊಂಡೊಯ್ಯಬಹುದು.

ಕೊಡಲಿಯನ್ನು ಇನ್ನೊಬ್ಬರಿಗೆ ಕೊಡುವಾಗ ಅದರ ಅಲಗು ಮೇಲಕ್ಕೆ ಇರುವಂತೆ ಹಿಡಿಯನ್ನು ಹಿಡಿದುಕೊಂಡು ಇನ್ನೊಬ್ಬ ವ್ಯಕ್ತಿಗೆ ನೀಡಬೇಕು.

ಕೊಡಲಿಯನ್ನು ಉಪಯೋಗಿಸುವಾಗ ಗಮನಿಸಬೇಕಾದ ಅಂಶಗಳು

1. ಕಡಿದುರುಳಿಸಿದ ಮರದ ರೆಂಬೆ ಕೊಂಬೆಗಳನ್ನು ತುಂಡರಿಸುವಾಗ ನೇರ ಕಡಿಯಬಾರದು. ಬದಲಾಗಿ ಸಪೂರವಾದ ಭಾಗದ ಕಡೆ ದಿಮ್ಮಿಗೆ ತಾಗುವಂತೆ ಕಡಿಯಬೇಕು. ಸಣ್ಣ ದಿಮ್ಮಿಗಳನ್ನು ತುಂಡರಿಸುವಾಗ ಅಥವಾ ಕೊಂಬೆಗಳನ್ನು ಕೀಳುವಾಗ ಕೊಡಲಿಯಿಂದ ತುಂಡರಿಸಬೇಕಾದ ಸ್ಥಳಕ್ಕೆ ಕಡಿದು ಸೀಳಬೇಕು. ಅದಕ್ಕೆ ಸಂಪರ್ಕ ವಿಧಾನ (Contact Method) ಎನ್ನುತ್ತಾರೆ. ಗಾತ್ರವಿರುವ ತೋರದ ದಿಮ್ಮಿಗಳನ್ನು ಕತ್ತರಿಸುವಾಗ (Logging) ಕೆಳಗಿನ ಬದಿಯಲ್ಲಿ "V" ಆಕಾರದಲ್ಲಿ ಅರ್ಧದಷ್ಟು ಕಚ್ಚು ಮಾಡಿದ ನಂತರ ಮೇಲ್ಬದಿಯಲ್ಲಿ ವಿರುದ್ಧ ದಿಕ್ಕಿನಲ್ಲೂ ಅದೇ ರೀತಿ ಕಡಿಯಬೇಕು.

2. ಸಣ್ಣ ತುಂಡುಗಳನ್ನು ಸೀಳಲು ಸಂಪರ್ಕ ವಿಧಾನವೇ ಸೂಕ್ತ. ಆಗ ಕೊಡಲಿ ದಿಮ್ಮಿಯ ಸೀಳಿನ ಭಾಗಕ್ಕೆ (Grain) ಸಮಾನಾಂತರವಾಗಿ ಇರಿಸಿ, ತುಂಡರಿಸಬೇಕು.

3. ದಿಮ್ಮಿಯನ್ನು ತುಂಡು ಮಾಡುವಾಗ ನಾವು ಉಪಯೋಗಿ ಸುವ ಬಲಕ್ಕಿಂತ ಹೆಚ್ಚಾಗಿ ಕೊಡಲಿಯ ಭಾರ ಮತ್ತು ಅದನ್ನು ಬೀಸುವಾಗ ಬೀರುವ ಪರಿಣಾಮ ಇರುವಂತೆ ನೋಡಿಕೊಳ್ಳಬೇಕು.

4. ಮರಗಳನ್ನು ಕಡಿಯುವಾಗ ನೇರ ಕೆಳಕ್ಕೆ ತುಂಡು ಮಾಡುವುದರ ಬದಲಾಗಿ ಸುಮಾರು 45° ಓರೆಯಾಗಿ ಕಡಿಯಬೇಕು.
5. ಕಡಿಯುವ ಸ್ಥಳದ ಕಡೆಗೆ ಪೂರ್ಣ ಗಮನವಿರಬೇಕು.
6. ತುಂಡರಿಸಬೇಕಾದ ದಿಮ್ಮಿಯನ್ನು ಬೇರೊಂದು ದಿಮ್ಮಿಯ ಮೇಲೆ (Chopping Block) ಇಟ್ಟು ಕಡಿಯಬೇಕು.
7. ಸಣ್ಣ ಸಣ್ಣ ರೆಂಬೆಗಳನ್ನು ಒಮ್ಮೆ ಬೀಸಿದಾಗಲೇ ತುಂಡಾಗುವಂತೆ ಕಡಿಯಬೇಕು.
8. ದೊಡ್ಡ ಕೊಡಲಿಯನ್ನು ಉಪಯೋಗಿಸುವಾಗ ಒಂದು ಕೈಯಲ್ಲಿ ಹಿಡಿಯನ್ನೂ (Grip) ಇನ್ನೊಂದು ಕೈಯಿಂದ ತುದಿಯನ್ನೂ ಅನುಕೂಲಕರವಾಗಿ ಗಟ್ಟಿಯಾಗಿ ಹಿಡಿದುಕೊಂಡು ಬೀಸಬೇಕು. ಬಲ ಮಗ್ಗಲು ಅಥವಾ ಎಡ ಮಗ್ಗಲು ಬಲ ಹೆಚ್ಚಿರುವುದಕ್ಕೆ ಅನುಸಾರ ಬದಲಾಯಿಸಿ ಹಿಡಿಯಬಹುದು.
9. ಸಣ್ಣ ತುಂಡುಗಳನ್ನು ನೆಲದಲ್ಲಿರಿಸಿ ಸೀಳಬಾರದು. ಬೇರೊಂದು ದಿಮ್ಮಿಯ ಮೇಲೆ ವಾಲಿಕೊಂಡಿರುವಾಗಲೂ ತುಂಡರಿಸಬಾರದು. ಆಗ ಇದರಿಂದ ಅನಾಹುತ ಆಗಬಹುದು. ಆ ತುಂಡು ಎಗರುವ ಮತ್ತು ಕೊಡಲಿಯ ಅಲಗು ಮೊಂಡಾಗುವ ಸಾಧ್ಯತೆ ಇದೆ.

ಕೊಡಲಿಯ ಸುರಕ್ಷತೆ ಮತ್ತು ಸಂರಕ್ಷಣೆ

1. ಕೊಡಲಿಯನ್ನು ಸದಾ ಹರಿತವಿರುವಂತೆ ನೋಡಿಕೊಳ್ಳಬೇಕು. ಎಣ್ಣೆ ಹಚ್ಚಿದ ನಂತರ ಒಂದು ಸಾಣೆಕಲ್ಲನ್ನುಪಯೋಗಿಸಿ, ವೃತ್ತಾಕಾರದಲ್ಲಿ ಮುಂದಕ್ಕೆ ಒತ್ತಿ ಚಲಿಸಬೇಕು, ಹಿಂದಕ್ಕೆ ತೇಲಿ ಚಲಿಸಬೇಕು, ತಿಕ್ಕಿ ಹರಿತಗೊಳಿಸಬೇಕು. ಕೊನೆಗೆ ಮೃದುವಾಗಿ ತಾಗಿಸಿ ಅಲಗನ್ನು ಸರಿಪಡಿಸಿಕೊಳ್ಳಬೇಕು.
2. ಕೊಡಲಿ ಅಲುಗಾಡುವಂತಿರಬಾರದು. ಕೊಡಲಿಯ ಕೈ ತಲೆಯೊಂದಿಗೆ ಭದ್ರವಾಗಿ ಸಿಲುಕಿಸಿರಬೇಕು. ಅದಕ್ಕಾಗಿ ಒಂದು ಬೆಣೆಯನ್ನು ತೆಗೆದುಕೊಂಡು ಕೊಡಲಿಯ ಕಣ್ಣಿನೊಳಗಿನ ಹಿಡಿಯ ತಲೆಯಲ್ಲಿ ಮಧ್ಯ ಭಾಗಕ್ಕೆ ಸಿಕ್ಕಿಸಿ, ಬಡಿದು ಗಟ್ಟಿ ಮಾಡಬೇಕು. ಉಪಯೋಗಿಸುವುದಕ್ಕೆ ಮೊದಲು ನೀರಿನಲ್ಲಿ ಮುಳುಗಿಸಿ ತೆಗೆಯುವುದು ಕ್ಷೇಮಕರ.
3. ಉಪಯೋಗದ ನಂತರ ಕೊಡಲಿಯ ಅಲಗನ್ನು ಚೆನ್ನಾಗಿ ತೊಳೆದು ಒಣಗಿಸಿ, ಎಣ್ಣೆ ಅಥವಾ ಗ್ರೀಸ್ ಹಚ್ಚಿ ತೆಗೆದಿರಿಸಬೇಕು.
4. ಕೊಡಲಿಯ ಹಿಡಿಗೆ ಲಿನ್ಸಿಡ್ ಎಣ್ಣೆ (Linseed Oil) ಅಥವಾ ಹರಳೆಣ್ಣೆ ಹಚ್ಚಿ ತೆಗೆದಿರಿಸಬಹುದು.

5. ಉಪಯೋಗವಿಲ್ಲದಿರುವಾಗ ಕೊಡಲಿಯನ್ನು ಒರೆಯಲ್ಲಿ ಇರಿಸುವುದು ಉತ್ತಮ.
6. ಕೊಡಲಿಯನ್ನು ನೆಲದಲ್ಲಿ ಇರಿಸಬಾರದು. ಒಂದು ದಿಮ್ಮಿಗೆ ಕಚ್ಚು ಹಾಕಿದಂತೆ ಇರಿಸಬೇಕು. ಹಾಗಂತ ಮರವನ್ನು ಕಡಿದು ಇರಿಸಬಾರದು.
7. ಕೊಡಲಿಯನ್ನು ಬೇರೆ ಉಪಯೋಗಗಳಿಗೆ ಬಳಸಬಾರದು.
8. ಕೊಡಲಿಯ ಅಲಗನ್ನು ಬೆಂಕಿಗೆ ಹಿಡಿಯುವುದು ಬಿಸಿ ಮಾಡುವುದು ಇತ್ಯಾದಿ ಮಾಡಬಾರದು. ಬಿಸಿ ಮಾಡಿದರೆ ಅದರ ಕಠಿಣತೆ ಕಡಿಮೆಯಾಗುವುದು.
9. ಒಂದು ತುಂಡನ್ನು ಸೀಳುವಾಗ ಅದನ್ನು ಇನ್ನೊಂದು ತುಂಡಿನ ಮೇಲೆ ಇರಿಸಿ ಕಡಿಯದಿದ್ದರೆ ಕೊಡಲಿಯ ಅಲಗಿಗೆ ಪೆಟ್ಟಾಗುವ, ಅದು ಮೊಂಡಾಗುವ ಸಾಧ್ಯತೆಯಿದೆ.
10. ಅನಗತ್ಯವಾಗಿ, ಜೀವವಿರುವ ಮರಗಳನ್ನಾಗಲೀ ಅವುಗಳ ಗೆಲ್ಲುಗಳನ್ನಾಗಲೀ ಕಡಿಯಬಾರದು.
11. ತುಂಡುಗಳನ್ನು ಸೀಳುವಾಗ ಅದರಲ್ಲಿ ಮೊಳೆ ಅಥವಾ ಇತರ ವಸ್ತುಗಳಿದ್ದರೆ ಅವುಗಳಿಗೆ ಕೊಡಲಿ ತಾಗದಂತೆ ನೋಡಿಕೊಳ್ಳಬೇಕು.
12. ಕಡಿಯುವಾಗ ಕೊಡಲಿಯ ಬೀಸು ಚಲನೆ (Swing) ಆದಷ್ಟೂ ಶರೀರದಿಂದ ದೂರವಿರುವಂತೆ ನೋಡಿಕೊಳ್ಳಬೇಕು.
13. ಕೊಡಲಿಯನ್ನು ಉಪಯೋಗಿಸುವಾಗ ಒಂದೂವರೆ ಅಥವಾ ಎರಡು ಕೊಡಲಿಯಷ್ಟು ಆಸುಪಾಸಿನಲ್ಲಿ ಜನರಾಗಲೀ ವಸ್ತುಗಳಾಗಲೀ ಇಲ್ಲದಂತೆ ನೋಡಿಕೊಳ್ಳಬೇಕು. ಕೊಡಲಿಯನ್ನು ಅದರ ಹಿಡಿಯಲ್ಲಿ ಹಿಡಿದುಕೊಳ್ಳುವಾಗ ಇರುವ ಕೈಯ ಮತ್ತು ಕೊಡಲಿಯ ಹಿಡಿಯ ಒಟ್ಟು ಉದ್ದವನ್ನು "ಕೊಡಲಿ ದೂರ" (Axe Length) ಎನ್ನುತ್ತೇವೆ. ಈ ರೀತಿ ಬೀಸು ದೂರವನ್ನು ಪಾಲಿಸಿದರೆ, ಕಡಿಯುವವರಿಗೂ ಇತರರಿಗೂ, ತೊಂದರೆ ಆಗದಂತೆ ಎಚ್ಚರ ವಹಿಸಿದಂತಾಯಿತು.
14. ಆಯಾಸವಾಗಿರುವಾಗ, ಬಲಹೀನತೆಯಿರುವಾಗ ಕೊಡಲಿಯನ್ನು ಹಿಡಿದು ಕೆಲಸ ಮಾಡಬಾರದು. ನಿಯಂತ್ರಣ ತಪ್ಪಿದರೆ ಅಪಘಾತ ಸಂಭವಿಸುತ್ತದೆ.
15. ಮರವನ್ನು ಕಡಿಯುವಾಗ ಕುತ್ತಿಗೆಯಲ್ಲಿ ಸ್ಕಾರ್ಫ್ ಆಗಲಿ ಲೇನ್ಯಾರ್ಡ್ ಆಗಲಿ ಇರಬಾರದು.
16. ಸ್ಕೌಟ್ ಗೈಡ್‌ಗಳು ಆದಷ್ಟೂ ದೊಡ್ಡ ಕೊಡಲಿಗಳನ್ನು ಉಪಯೋಗಿಸದಿರುವುದು ಒಳ್ಳೆಯದು.

17. ಮರವನ್ನು ಕಡಿದು ಅಭ್ಯಾಸವಿಲ್ಲದವರು ಕೈಚೀಲವನ್ನು ಬಳಸುವುದು ಉತ್ತಮ. ಅದರಿಂದ ಕೈಯಲ್ಲಿ ಗುಳ್ಳೆ (Blister) ಏಳುವುದನ್ನು, ನೋವಾಗುವುದನ್ನು ತಡೆಯಬಹುದು.

ಚೂರಿ

ಇದು ಸ್ಕೌಟ್/ಗೈಡ್‌ಗಳ ಒಂದು ಅವಶ್ಯಕ ಉಪಕರಣವಾಗಿದೆ. ಅದನ್ನು ಜಾಗ್ರತೆಯಾಗಿ ತೆಗೆದಿರಿಸಬೇಕು. ಚೂರಿಯನ್ನು ಹರಿತ ಮಾಡುವ ಸಾಣೆಕಲ್ಲು, ಕ್ಲಬ್ ರೂಮಿನಲ್ಲೂ, ಶಿಬಿರದಲ್ಲೂ ಇರಬೇಕು. ನೀಳ ಒರೆಚೂರಿ (Sheath Knife) ಗಿಂತಲೂ ಮಡಚು ಚೂರಿ ಹೆಚ್ಚು ಪ್ರಯೋಜನಕರ. ಅಗತ್ಯವಿರುವಾಗ ಮಾತ್ರ ಒರೆ ಚೂರಿಯನ್ನು ಬೆಲ್ಟ್‌ನಲ್ಲಿ ಸಿಲುಕಿಸಿಕೊಳ್ಳಬೇಕು. ಆಡುವಾಗ ಚೂರಿಯು ಸಮವಸ್ತ್ರದಲ್ಲಿರಬಾರದು.

ಗೂಟವನ್ನು ಹೆರೆದು ತಯಾರಿಸಲು (Whitling) ತರಬೇತಿ ಪಡೆಯಬೇಕು. ಗೂಟವನ್ನು ಹೆರೆದು ಚೂಪು ಮಾಡುವುದು ಸ್ವಯಂ ನಿಯಂತ್ರಣಕ್ಕೆ ತರಬೇತಿ ನೀಡುತ್ತದೆ. ಗೂಟವನ್ನು ಹೆರೆಯುವುದರಲ್ಲಿ ಸ್ಪರ್ಧೆಯನ್ನೂ ನಡೆಸಬಹುದು.

1. ಚೂರಿಯನ್ನು ಶುಚಿಮಾಡಿ, ಹರಿತಗೊಳಿಸಿ, ಎಣ್ಣೆ ಹಚ್ಚಿ ಕಾಪಾಡಬೇಕು.
2. ಸುರಕ್ಷಾ ನಿಯಮಗಳ ಕುರಿತಾದ ಜ್ಞಾನ ಪಡೆದುಕೊಳ್ಳಬೇಕು.

ಚೂಲಿಯ ಸುರಕ್ಷಾ ನಿಯಮಗಳು ಮತ್ತು ಕೂಲಿಯನ್ನು ಹಲತಗೊಳಿಸುವ ವಿಧಾನ

1. ಚೂರಿಯನ್ನು ಹರಿತಗೊಳಿಸಿ, ತೆಗೆದಿರಿಸುವುದು. ಹರಿತಗೊಳಿಸಲು ಸಾಣೆಕಲ್ಲು ಉಪಯೋಗಿಸಬೇಕು ಕೊಡಲಿಯ ಅಲಗನ್ನು, ಸಾಣೆಕಲ್ಲಿನ ಮೇಲೆ ವೃತ್ತಾಕಾರದಲ್ಲಿ ಚಲಿಸಬೇಕು, ಈ ಚಲನೆಗೆ ಮುಂದಕ್ಕೆ ಚಲಿಸುವಾಗ ಒತ್ತಡ ಇರಬೇಕು. ಹಿಂದಕ್ಕೆ ಚಲಿಸುವಾಗ ತೇಲಬೇಕು.
2. ಉಪಯೋಗಿಸದಿರುವಾಗ ಎಣ್ಣೆ ಅಥವಾ ಗ್ರೀಸ್ ಹಚ್ಚಿ ತೆಗೆದಿರಿಸಬೇಕು.
3. ಚೂರಿಯನ್ನು ಬಿಸಿ ಮಾಡಬಾರದು. ಬಿಸಿ ಮಾಡಿದರೆ ಅದರ ಕಠಿಣತೆ ಕಡಿಮೆಯಾಗುತ್ತದೆ.
4. ಕತ್ತರಿಸುವಾಗ ಚೂರಿಯ ಬೆನ್ನಿಗೆ (ಹಿಂಬದಿಗೆ) ಬಡಿಯಬಾರದು.
5. ಚೂರಿಯನ್ನು ಒಂದು ಸ್ಕ್ರೂ ಡ್ರೈವರ್ ಆಗಿ ಬಳಸಬಾರದು.

6. ಕತ್ತರಿಸುವಾಗ, ಹೆರೆಯುವಾಗ ಚೂರಿಯ ಚಲನೆ ಶರೀರದಿಂದ ದೂರವಿರುವಂತೆ ಎಚ್ಚರ ವಹಿಸಬೇಕು. ಇತರರ ಶರೀರಕ್ಕೆ ತಾಗದಂತೆಯೂ ನೋಡಿಕೊಳ್ಳಬೇಕು.

7. ಚೂರಿಯನ್ನು ಒರೆಯಲ್ಲಿ ಹಾಕಿ ಇರಿಸಬೇಕು ಅಥವಾ ಮಡಚಲು ಆಗುವುದಾದರೆ ಮಡಚಿ ಇರಿಸಬೇಕು. ಹಾಗೆ ಮಾಡುವ ಮುನ್ನ ತೇವಾಂಶವಿಲ್ಲದಂತೆ ಎಚ್ಚರವಿರಬೇಕು.

8. ಚೂರಿಯನ್ನು ಕಂಡಕಂಡಲ್ಲಿ ಎಸೆಯಬಾರದು. ಯಾವಾಗಲೂ ನಿರ್ದಿಷ್ಟ ಸ್ಥಳದಲ್ಲಿಯೇ ಇರಿಸಬೇಕು.

ಸೌದೆ ಸೀಳುತ್ತಿರುವುದು

8. ರಾಟೆಗೆ ಸಂಬಂಧಿಸಿದ ಕಟ್ಟುಗಳು

A. ಮೌಸಿಂಗ್ ಹುಕ್ (Mousing Hook)

ಒಂದು ರಾಟೆಯ ಕೊಕ್ಕೆಯ ಮೂಲಕ ಹಗ್ಗವನ್ನು ಹಾಯಿಸುವಾಗ ಆ ಹಗ್ಗವು ಕೊಕ್ಕೆಯ ಹೊರಕ್ಕೆ ಹೋಗದಂತೆ ನೋಡಿಕೊಳ್ಳುವುದಕ್ಕಾಗಿ ಹಗ್ಗದಿಂದ ಅದರ ಮೇಲ್ಭಾಗದಲ್ಲಿ ಸುತ್ತುವುದನ್ನು ಕೊಕ್ಕೆಬಂಧನ (ಮೌಸಿಂಗ್) ಎನ್ನುತ್ತೇವೆ. ಇದನ್ನು ಎರಡು ವಿಧದಲ್ಲಿ ಮಾಡಬಹುದು.

i. ಕೊಕ್ಕೆಯ ಕುತ್ತಿಗೆಯ ಕೆಳಗಿನ ಭಾಗದಲ್ಲಿ ಹಗ್ಗದ ಮಧ್ಯ ಭಾಗದಿಂದ ಹಿಚ್ ಹಾಕಿ ಕೊಕ್ಕೆಯಲ್ಲಿ ಐದೋ ಆರೋ ಬಾರಿ ಎರಡು ಬದಿಗಳಿಗೆ ಬರುವಂತೆ ಸುತ್ತಿ, ಆ ಒಟ್ಟು ಸುತ್ತುಗಳ ಮೇಲಿನಿಂದ ಪುನಃ ಬಿಗಿತದಸುತ್ತು ಸುತ್ತಿ, ಕೊನೆಗೆ ಸಮ ಗಂಟು ಹಾಕುವುದು.

ii. ಕೊಕ್ಕೆಯ ಕುತ್ತಿಗೆಯ ಕೆಳಗೆ ಹಗ್ಗದ ಒಂದು ತುದಿಯಿಂದ ಕೊಟ್ಟಿಗೆ ಗಂಟು ಹಾಕಿ ಸಣ್ಣಭಾಗವನ್ನು ದೊಡ್ಡದರ ಕಡೆಗೆ ಸುತ್ತಿದ ನಂತರ ಕುಣಿಕೆಯ ಮೂಲಕ ಐದಾರು ಬಾರಿ ಸುತ್ತಿ ಆ ಸುತ್ತುಗಳ ಹೊರಗಿನಿಂದ ಸುತ್ತಿ ಅದರಲ್ಲಿ ಸಮ ಗಂಟು ಹಾಕಿ ಕೊನೆಗೊಳಿಸುವುದು.



B. ದಿಮ್ಮಿಗೆ ರಾಟೆಯನ್ನು ಕಟ್ಟುವುದು

ಸಾಮಾನ್ಯವಾಗಿ ಬಾವಿಯಿಂದ ನೀರು ಸೇದಲು ಉಪಯೋಗಿಸುವ ರಾಟೆ ಅಥವಾ ಒಂದು ರೀತಿಯ ಬಂಧಿತ ಚಕ್ರ ರಾಟೆಯನ್ನು ಇಂಗ್ಲಿಷ್‌ನಲ್ಲಿ "Pulley" ಎಂದೂ, ಬಂಧಿತ ಚಕ್ರರಾಟೆಗಳು ಸ್ಥಾಯಿ ಇದ್ದರೆ, ಇಂಗ್ಲಿಷ್‌ನಲ್ಲಿ ಬ್ಲಾಕ್ "Block" ಎಂದೂ ಹೇಳುವರು.

ರಾಟೆಯನ್ನು ಕಟ್ಟಬೇಕಾದ ದಿಮ್ಮಿಯ ಭಾಗದಲ್ಲಿ ಗಟ್ಟಿಯಿರುವ ಬಟ್ಟೆ ಅಥವಾ ಗೋಣಿ ಚೀಲವನ್ನು ಸುತ್ತಿದ ಅಡಿವತ್ತಳೆ (Pad) ನಂತರ ಒಂದು ಕೊಟ್ಟಿಗೆಗಂಟು ಹಾಕಿ ತುದಿಯನ್ನು ಹಗ್ಗದೊಂದಿಗೆ ಸೇರಿಸಿ ಸುತ್ತಿ ರಾಟೆಯ ಕೊಂಡಿಯನ್ನು ಪ್ಯಾಡ್‌ಗೆ ತಾಗಿಸಿ ಇರಿಸಿ, ಆರರಿಂದ್ದ ಎಂಟು ಬಾರಿ ಸುತ್ತುವುದು. ಅನಂತರ ಅದನ್ನು ಎಳೆದು ಗಟ್ಟಿ ಮಾಡಿ ಎರಡು ಮಲಕು ಹಾಕಿ (ಒಂದು ಕೊಟ್ಟಿಗೆಗಂಟು ಆಗುತ್ತದೆ) ಕೊನೆಗೊಳಿಸುವುದು. ಪ್ಯಾಡ್ ತಪ್ಪಿಹೋಗದಿರಲು ಮೊದಲು ಅದನ್ನು ಸಣ್ಣ ನೂಲಿನಿಂದ ಕಟ್ಟುವುದು ಉತ್ತಮ. ಈ ರೀತಿ ಅಡಿವತ್ತಳೆ ಕೊಡುವುದರಿಂದ, ಸ್ಥಾಯಿ ಚಕ್ರ ರಾಟೆಯು ಜಾರದಂತೆ ಬಲವಾಗಿರುತ್ತದೆ.

9. ಸುಧಾರಿತ ಗುಡಾರಗಳು

ತೆರವಾದ ಸ್ಥಳಗಳಲ್ಲಿ ತಾತ್ಕಾಲಿಕವಾಗಿ ವಾಸಿಸಲು ಸುಧಾರಿತ ಗುಡಾರಗಳನ್ನು ನಿರ್ಮಿಸಲು ಮತ್ತು ಗುಡಿಸಲು ನಿರ್ಮಿಸಲು "ಬಾಲಕರಿಗಾಗಿ ಸ್ಕೌಟಿಂಗ್'ನ ಶಿಬಿರಾಗ್ನಿ ಉದಂತ 8ರಲ್ಲಿ ಮಾಹಿತಿ ಇದೆ. ಕೆಳಗಿನ ಆಶ್ರಯಗಳನ್ನು ನಿರ್ಮಿಸಲು ಪ್ರಯತ್ನಿಸಿರಿ.

1. ಒಂದೋ, ಎರಡೋ, ಮೂರೋ ಹಗ್ಗಗಳನ್ನು ಒಂದು ಮರದಲ್ಲಿ ಐದರಿಂದ ಏಳು ಅಡಿ ಎತ್ತರದಲ್ಲಿ ಕಟ್ಟಿ ವಿವಿಧ ಕೋನಗಳಲ್ಲಿ ಅಗತ್ಯವಿರುವಷ್ಟು ದೂರದಲ್ಲಿ ಕೆಳಕ್ಕೆ ಎಳೆದು ಕಟ್ಟುವುದು. ಮಾಡಿಗೆ ಬೈ ಹುಲ್ಲು, ಹುಲ್ಲು, ಎಲೆ, ಕ್ಯಾನ್ವಾಸ್, ಬಟ್ಟೆ ಇತ್ಯಾದಿಗಳನ್ನು ಉಪಯೋಗಿಸಬಹುದು.
2. ಒಂದು ಗೋಡೆಯಿಂದ ಎರಡೋ ಮೂರೋ ದಂಡಗಳನ್ನು ಕೆಳಕ್ಕೆ ಇಳಿಜಾರಾಗಿ ಇರಿಸಿ, ಅದರ ಮೇಲೆ ಮಾಡುವುದು.





3. ಎರಡು ಷಿಯರ್ ಲೆಗ್ (Shear Leg)ಗಳನ್ನು ಮಾಡಿ ಮೇಲಿನಿಂದ ಹಗ್ಗವನ್ನು ಎಳೆದು ಕಟ್ಟಿ ಅದರ ಮೇಲೆ ಹೊದಿಕೆಯನ್ನು ಹಾಕಿ ಮಾಡು ಮಾಡುವುದು. ಚಿತ್ರವನ್ನು ಗಮನಿಸಿರಿ.

ಡೇರೆಗಳನ್ನು ಕಟ್ಟುವಾಗ, ಮರೆ ಮಾಡುವಾಗ, ಗುಡಿಸಲು ನಿರ್ಮಿಸುವಾಗ ಗಾಳಿಯ ದಿಕ್ಕನ್ನು ನೋಡಿಕೊಳ್ಳಬೇಕು. ಅಂದರೆ ಮೇಲಿನ ಛಾವಣಿಯು ಗಾಳಿಗೆ ಎಗರಿ ಹೋಗುವುದು ಅಥವಾ ಮಳೆ ಬಂದರೆ ನೀರು ಒಳಗೆ ಬೀಳುವುದು ಆಗಬಾರದು. (ಶಿಬಿರಾಗ್ನಿ ಉದಂತ 9ರಲ್ಲಿರುವ ಚಿತ್ರ ನೋಡಿರಿ) ನೆಲ ಮತ್ತು ಪರಿಸರವನ್ನು ಶುಚಿಗೊಳಿಸಬೇಕು. ಮರದ ಗೆಲ್ಲು ಮುರಿದು ಬೀಳದಂತೆ ಎಚ್ಚರವಹಿಸಬೇಕು. ಗುಡಿಸಲು ಅಥವಾ ಗುಡಾರಕ್ಕೆ ತಾಗಿಕೊಂಡು ಸುತ್ತಲೂ 6″x 6″ ಇಂಚು ಅಗಲದ ಕಾಲುವೆ ರಚಿಸಬೇಕು. ಗುಡಿಸಲಿನ ಬಾಗಿಲನ್ನು ಮುಚ್ಚುವ ವ್ಯವಸ್ಥೆ ಇರಬೇಕು. ಒಬ್ಬರಿಗೆ 2 x 6 ಅಡಿ ಸ್ಥಳಾವಕಾಶ ಇರುವಂತಿ-ರಬೇಕು.

10. ಶಿಬಿರ ಒಲೆಗಳು ಮತ್ತು ಅಡುಗೆ ಕೋಣೆ ಉಪಕರಣಗಳು

ಒಲೆಗಳು ಶಿಬಿರದ ಹೃದಯ ಭಾಗವೆಂದು ಹೇಳುವುದಿದೆ. ಆರೋಗ್ಯಕರ ಆಹಾರ ಮತ್ತು ಶಕ್ತಿ, ಕ್ರಮಬದ್ಧ ಚಟುವಟಿಕೆಗೆ ಅತ್ಯಗತ್ಯ ತಾನೇ. ಅದೇ ರೀತಿ ಶುಚಿತ್ವವೂ ಬಹಳ ಮುಖ್ಯ. ಶಿಬಿರದ ಗುಣಮಟ್ಟವನ್ನು ಆ ಶಿಬಿರದ ಒಲೆಯ ಪರಿಸರವನ್ನು ನೋಡಿ ಹೇಳಬಹುದು.

ಶಿಬಿರದಲ್ಲಿ ತೆರವಾದ ಸ್ಥಳದಲ್ಲಿ ತಾತ್ಕಾಲಿಕ ಒಲೆಗಳನ್ನು ನಿರ್ಮಿಸುವಾಗ ಈ ಕೆಳಗಿನ ವಿಚಾರಗಳನ್ನು ಗಮನಿಸಬೇಕು.

1. ಒಲೆಗಳು ಮತ್ತು ಅವುಗಳ ಪರಿಸರವನ್ನು ಶುಚಿಯಾಗಿಯೂ ಅಚ್ಚುಕಟ್ಟಾಗಿಯೂ ಇರಿಸಿಕೊಳ್ಳಬೇಕು.







2. ನೆರಳಿರುವ ಪ್ರದೇಶ ಒಳ್ಳೆಯದು. ಆದರೆ ಒಲೆಗಳು ಮರದ ನೇರ ಕೆಳಗಿರಬಾರದು. ಹಾಗಿದ್ದರೆ ಮರಗಳ ಬೇರಿಗೂ, ಮೇಲಿನ ಎಲೆಗಳಿಗೂ ಬೆಂಕಿಯ ಶಾಖದಿಂದ ಅಪಾಯವುಂಟು.

3. ಒಣಗಿದ ಎಲೆ, ಹುಲ್ಲು ಇತ್ಯಾದಿಗಳಿಂದ ದೂರವಿರಬೇಕು.

4. ಶಿಬಿರದ ವಿವಿಧ ಅಗತ್ಯಗಳಿಗಾಗಿ ಕನಿಷ್ಠ 2′ x 2′ ಅಳತೆಯ ನಾಲ್ಕು ಹೊಂಡ ಅಥವಾ ಗುಂಡಿ (PII)ಗಳನ್ನು ಮಾಡಿಕೊಳ್ಳಬೇಕು.

   ಎ) ಒಣಗಿದ ವಸ್ತುಗಳನ್ನು ಹಾಕಲು (Dry Pit)

   ಬಿ) ಒದ್ದೆ ವಸ್ತು ಮತ್ತು ಕೊಳಕು ನೀರು ಎರೆಯಲು (Wet Pit)

   ಸಿ) ಕೊಬ್ಬು ಪದಾರ್ಥಗಳನ್ನು ಹಾಕಲು (Grease Pit)

   ಡಿ) ಮಸಿ, ಬೂದಿ ಇತ್ಯಾದಿ ಹಾಕಲು (Charcoal Pit)

ಹೊಂಡಗಳನ್ನು ಸಮಾನ ಎತ್ತರದಲ್ಲಿ, ಹತ್ತಿರ ಹತ್ತಿರ ಮಾಡಬೇಕು. ಸಣ್ಣ ಗೆಲ್ಲುಗಳನ್ನು ಮತ್ತು ಎಲೆಗಳನ್ನು ಉಪಯೋಗಿಸಿ, ಹೊಂಡಗಳನ್ನು ಮುಚ್ಚಿ ಇರಿಸುವುದು ಉತ್ತಮ. ಅದರಿಂದ ನೊಣಗಳ ಹಾವಳಿಯನ್ನು ತಡೆಗಟ್ಟಬಹುದು.

5. "ಗ್ರೀಸ್ ಪಿಟ್"ನ ಮುಚ್ಚಳವನ್ನು ಗೆಲ್ಲು ಮತ್ತು ಎಲೆಗಳಿಂದ ತಯಾರಿಸಬೇಕು. ಗಂಜಿ ನೀರು ಮತ್ತಿತರ ಕೊಬ್ಬು ಇರುವವುಗಳನ್ನು ಅದರ ಮೇಲೆರೆಯಬೇಕು. ಆಗ ನೀರು ಸೋಸಿ, ಕೆಳಗೆ ಬಿದ್ದು ಕೊಬ್ಬು ಪದಾರ್ಥಗಳು ಮತ್ತು ಘನ ವಸ್ತುಗಳು ಮುಚ್ಚಳದಲ್ಲಿ ನಿಲ್ಲುವುವು. ಅದನ್ನು ಸುಟ್ಟುಹಾಕಬೇಕು.

6. ಗಾಳಿ ಬೀಸುವ ದಿಕ್ಕಿನ ಕಡೆ (Leeward Side) ಒಲೆ ಮತ್ತು ಹೊಂಡಗಳನ್ನು ಮಾಡಬೇಕು. ಆಗ ಒಲೆಯಿಂದ ದುರ್ಗಂಧವಾಗಲೀ, ಹೊಗೆಯಾಗಲೀ ಡೇರೆಯ ಒಳಗೆ ಬರುವುದಿಲ್ಲ.

7. ಒಲೆಗಳ ಸಮೀಪ ಆಹಾರವನ್ನು ಸೇವಿಸಲು ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು. ಅದಕ್ಕೆ ಅಗತ್ಯವಾದ ಸಾಧನ ಸಲಕರಣೆ (Gadget)ಗಳನ್ನೂ ರಚಿಸಿಕೊಳ್ಳಬೇಕು. (ಬೆಂಚು, ಮೇಜು ಇತ್ಯಾದಿ).

8. ಪಾತ್ರೆಗಳನ್ನು ಮತ್ತು ಅಗತ್ಯವಿರುವ ಇತರ ವಸ್ತುಗಳನ್ನು ಇರಿಸಲು ಅಗತ್ಯವಾದ ಇತರ ಸಾಧನ ಸಲಕರಣೆಗಳನ್ನೂ ನಿರ್ಮಿಸಿಕೊಳ್ಳಬೇಕು.

9. ಕಸಕಡ್ಡಿ ಮತ್ತಿತರ ವಸ್ತುಗಳನ್ನು ಆಯಾ ಹೊಂಡಗಳಲ್ಲಿಯೇ ಹಾಕಬೇಕು.

10. ಒಲೆಯಲ್ಲಿ ಬೆಂಕಿಯ ಅಗತ್ಯವಿಲ್ಲದಿರುವಾಗ (ನೀರು ಎರೆಯದೆ) ಆರಿಸಿ ಇರಿಸಬೇಕು.

11. ಒಲೆಯ ಮಸಿ ಮತ್ತು ಬೂದಿಯನ್ನು ಆಗಾಗ ತೆಗೆದು ನಿಗದಿತ ಹೊಂಡಕ್ಕೇ ಹಾಕಬೇಕು.

12. ಪಾತ್ರೆಗಳನ್ನು ಮತ್ತು ಇತರ ಉಪಕರಣಗಳನ್ನು ತೊಳೆದು ಶುಚಿಮಾಡಿ, ಸಾಧನ ಸಲಕರಣೆಗಳಲ್ಲಿ ಇರಿಸಬೇಕು.

13. ಡೇರೆಯ ಒಳಗಡೆ ಕುಳಿತು ಆಹಾರ ಸೇವನೆ ಮಾಡಬಾರದು. ಆಹಾರ ವಸ್ತುಗಳೇನಾದರೂ ಗುಡಾರದ ಒಳಗೆ ಚೆಲ್ಲಿದರೆ ನೊಣ, ಇರುವೆ, ಇಲಿ ಮೊದಲಾದವುಗಳ ಹಾವಳಿ ಉಂಟಾಗುತ್ತದೆ. ಡೇರೆಯ ಒಳಗೆ, ಹೊರಗೆ ಶುಚಿತ್ವವನ್ನು ಕಾಪಾಡಿಕೊಳ್ಳುವುದು ಬಹಳ ಮುಖ್ಯ.

14. ಕಟ್ಟಿಗೆ ಸೀಳಲು ಅಗತ್ಯವಾದ ಸಲಕರಣೆಗಳನ್ನೂ, ಕಟ್ಟಿಗೆಯನ್ನೂ ಒಲೆಯಿಂದ ಬಹಳ ದೂರದಲ್ಲಿ ಇರದಂತೆ ಸ್ಥಳವನ್ನು ಆಯ್ಕೆಮಾಡಿಕೊಳ್ಳಬೇಕು.

15. ನೀರು, ಬಟ್ಟೆ, ದೀಪಗಳನ್ನು ಬೇರೆಬೇರೆ ಸಾಧನಗಳಲ್ಲಿರಿಸಬೇಕು.

16. ಒಲೆಗಳ ವ್ಯವಸ್ಥೆ (Layout) ಸೂಕ್ತವಾಗಿರಬೇಕು. "ಬಾಲಕರಿಗಾಗಿ ಸ್ಕೌಟಿಂಗ್" ಪುಸ್ತಕದ 10ನೇ ಶಿಬಿರಾಗ್ನಿ ಉದಂತದಲ್ಲಿರುವ ಚಿತ್ರಗಳನ್ನೂ, ವಿವರಣೆಯನ್ನೂ ನೋಡಿರಿ, 9ನೇ ಉದಂತದಲ್ಲೂ ಶಿಬಿರ ಒಲೆಯ ಕುರಿತಾಗಿ ಹೇಳಿದೆ.

17. ಸ್ಥಿರವಾಗಿ ಶಿಬಿರ ಹೂಡುವಲ್ಲಿ ಆಗಾಗ ಹೊಂಡ ತೋಡುವುದು ಮಣ್ಣಿನ ಕೊರೆತಕ್ಕೆ ಕಾರಣವಾಗಬಹುದು. ಅಂತಹ ಸ್ಥಳಗಳಲ್ಲಿ ಕಸಕಡ್ಡಿಗಳನ್ನು ಹಾಕಲು ಬೇರೆಬೇರೆ ಪಟಾಲಂಗಳಿಗೆ ಬೇರೆಬೇರೆ ಡಬ್ಬಗಳನ್ನು ಬಳಸುವುದು ಉತ್ತಮ. ಬೆಳಗಿನ ತಪಾಸಣೆಗೆ ಮೊದಲು ಅವುಗಳನ್ನು ನಿರ್ದಿಷ್ಟ ಸ್ಥಳದಲ್ಲಿ ಹಾಕಿ ಉರಿಸಬಹುದಾದವುಗಳನ್ನು ಸುಟ್ಟು ಬಿಡುವುದು ಒಳ್ಳೆಯದು.

ಬೆಂಕಿ ಮತ್ತು ಒಲೆ

ಬೆಂಕಿಯು ಮಾನವನಿಗೆ ಅತ್ಯಗತ್ಯ. ಆದರೆ ಅದನ್ನು ಅತ್ಯಂತ ಜಾಗ್ರತೆಯಾಗಿ ಬಳಸದಿದ್ದರೆ ಅಪಘಾತ ಸಂಭವಿಸಬಹುದು. ಸ್ಕೌಟ್-ಗೈಡ್‌ಗಳ ಶಿಬಿರದಲ್ಲೂ ಬೆಂಕಿ ಬೇಕೇಬೇಕು. ಕಾರಣ ಆಹಾರ ಸೇವಿಸದೇ ದಿನ ದೂಡುವುದು ಬಹಳ ಕಷ್ಟ ಆಹಾರ ತಯಾರಿಸಲು ಬೆಂಕಿ ಬೇಕು. ಅಲ್ಲದೆ ಅನಗತ್ಯ ವಸ್ತುಗಳನ್ನು ಸುಡುವುದಕ್ಕೂ ಬೆಂಕಿಯು ಅವಶ್ಯಕವಾಗಿದೆ. ಚಳಿಗಾಲದಲ್ಲಿ ಮೈ ಕಾಯಿಸುವುದಕ್ಕೂ ಬೆಂಕಿ ಬೇಕಾಗುತ್ತದೆ. ಶಿಬಿರಾಗ್ನಿಗಂತೂ ಬೇಕೇ ಬೇಕು. ಸಂಕೇತಗಳ ಮೂಲಕ ಸಂದೇಶ ರವಾನೆಗೂ ಬೆಂಕಿಯನ್ನು (Fire Signals) ಬಳಸುವುದುಂಟು.

ಒಲೆ ಮಾಡುವುದಕ್ಕೆ, ಶಿರಾಗೆ ಹಾಗೂ ನೀರು, ಆಹಾರ ಇತ್ಯಾದಿ ಅಸಿ ಮಾಡಿಕೊಳ್ಳುವುದಕ್ಕೆ ಹಲವಾರು ರೀತಿಯಲ್ಲಿ ಬೆಂಕಿ ಮಾಡುವುದಿದೆ. ಅವುಗಳು ಹೀಗಿವೆ:

1. ಪಿರಿಮಿಡ್ ಫಯರ್ (Pyramid Fire)
2. ಸ್ಟಾರ್ ಫಯರ್ (Star Fire)
3. ಸ್ಪೂನ್ ಫಯರ್ (Spoon Fire)
4. ಇಂಡಿಯನ್ ಫಯರ್ (Indian Fire)
5. "ಎ" ಫಯರ್ ('A' Fire)
6. ಬ್ರಿಕ್ ಫಯರ್ (Brick Fire)
7. ಟ್ರೆಂಚ್ ಫಯರ್ (Trench Fire)
8. ಹಂಟರ್ ಫಯರ್ (Hunter's Fire)
9. ಲಂಬರ್ ಮ್ಯಾನ್ಸ್ ಫಯರ್ (Lumberman's Fire)
10. ಆಲ್ಟರ್ ಫಯರ್ (Altar Fire)
11. ಪಗೋಡಾ ಫಯರ್ (Pagoda Fire)

12. ರಿಫ್ಲೆಕ್ಟರ್ ಫಯರ್ (Reflector Fire)

13. ಜಿಪ್ಸಿ ಫಯರ್ (Gipsy Fire)

14. ಮಘನ್ ಚೂಲ (Maghan Choola)

ಒಲೆ ಮಾಡುವಲ್ಲಿ ಜಾಗ್ರತೆ ವಹಿಸುವ ಬಗ್ಗೆ ಈ ಮೊದಲೇ ಹೇಳಿದೆ. ಆ ಸ್ಥಳದಲ್ಲಿ ಹುಲ್ಲು ಇದ್ದರೆ ಅದನ್ನು ಕೆತ್ತಿ ತೆಗೆದು ದೂರಕ್ಕೆ ಹಾಕಬೇಕು. ಶಿಬಿರ ಮುಗಿದ ಬಳಿಕ ಹೆಚ್ಚು ತೆಗೆದಿದ್ದರೆ ಅದನ್ನು ಪುನಃ ಅಲ್ಲೇ ಇರಿಸಬೇಕು. ಅಥವಾ ಹುಲ್ಲು ಹಾಕಬೇಕು. ಅದಕ್ಕೆ ನೀರೆರೆಯಬೇಕು.



ಬೆಂಕಿಯನ್ನು ಉರಿಸಲು ಮೊದಲು ಸಣ್ಣಸಣ್ಣ ಕಡ್ಡಿಗಳನ್ನು, ಸಿಪ್ಪೆ ತುಂಡುಗಳನ್ನು ಶಂಕು (Pyramid)ವಿನ ಆಕಾರದಲ್ಲಿ ಇರಿಸಬೇಕು. ಗಾಳಿ ಬೀಸುವ ಕಡೆ ಶಂಕುವಿನ ಒಳಗೆ ಬೆಂಕಿ ಪಸರಿಸಲು ಸ್ವಲ್ಪ ಎಡೆ ಬಿಟ್ಟಿರಬೇಕು. ಶಂಕು ನಿರ್ಮಿಸಲು ತರಗೆಲೆಯನ್ನೋ, ಇನ್ನಿತರ ವಸ್ತುಗಳನ್ನೂ ಬಳಸಬಹುದು. ಸಣ್ಣ ಶಂಕುವಿನ ಸುತ್ತಲೂ ದೊಡ್ಡ ಶಂಕು ನಿರ್ಮಿಸಿ, ಬೆಂಕಿಯನ್ನು ಉರಿಸಬೇಕು.

1. ಪಿರಮಿಡ್ ಫಯರ್

ಶಂಕು (ಪಿರಮಿಡ್) ಆಕಾರದಲ್ಲಿ ಕಟ್ಟಿಗೆಯನ್ನು ಇರಿಸಿ, ಉರಿಸುವ ಬೆಂಕಿಗೆ ಪಿರಮಿಡ್ ಫಯರ್ ಎನ್ನುತ್ತೇವೆ. ಇದಕ್ಕೆ ಕೋನ್ ಫಯರ್ (Cone Fire) ಎಂದೂ ಹೆಸರಿದೆ. ಸಾಮಾನ್ಯವಾಗಿ ಶಿಬಿರಾಗ್ನಿಯಲ್ಲಿ ಈ ರೀತಿಯಲ್ಲಿ ಬೆಂಕಿ ಮಾಡಲಾಗುತ್ತದೆ.

2. ಸ್ಟಾರ್ ಫಯರ್

ಸಣ್ಣ ಪಿರಮಿಡ್ ಫಯರ್ ತಯಾರಿಸಿದ ನಂತರ ನಕ್ಷತ್ರದ ಆಕಾರದಲ್ಲಿ ಮೂರು ದೊಡ್ಡ ದಿಮ್ಮಿಗಳನ್ನು ಇರಿಸುವುದು. ಇದಕ್ಕೆ ಸ್ಟಾರ್ ಫಯರ್ ಎಂದು ಹೆಸರು. ಬೆಂಕಿ ಹೆಚ್ಚು ಮಾಡುವುದಕ್ಕಾಗಿ ಇದರಲ್ಲಿ ಒಂದು ದೊಡ್ಡ ದಿಮ್ಮಿಯನ್ನೂ ಇರಿಸುವುದಿದೆ.

ದೂರದಲ್ಲಿ ರಾತ್ರಿ ಹೊತ್ತು ಮಲಗಿರುವಾಗ ಬೆಂಕಿ ಉರಿಯುವಂತೆ ಮಾಡಲು ಇದು ಬಹಳ ಪ್ರಯೋಜನಕಾರಿ. ಆ ದಿಮ್ಮಿಗಳನ್ನು ಕಾಲಿನಿಂದ

ದೂಡುತ್ತಾ ಇದ್ದರೆ ಸಾಕಾಗುತ್ತದೆ. ಆದುದರಿಂದ ಇದಕ್ಕೆ ಲೇಝೀ ಮ್ಯಾನ್ಸ್ ಫಯರ್ (Lazy Man's Fire) ಎಂದೂ ಕರೆಯುತ್ತಾರೆ.

3. ಸ್ಪೂನ್ ಫಯರ್

ಚಮಚದ ಆಕಾರದಲ್ಲಿ ರಚಿಸುವ ಒಲೆ.

4. ಇಂಡಿಯನ್ ಫಯರ್

ಇದು ಸಾಮಾನ್ಯವಾಗಿ ನಮ್ಮ ಮನೆಗಳಲ್ಲಿ ರಚಿಸುವ ಒಲೆಯೇ ಆಗಿದೆ. ಸೌಕರ್ಯಕ್ಕಾಗಿ ಮೂರು ಕಲ್ಲುಗಳನ್ನು ಮೂರು ಬದಿಗಳಿಗೆ ಇಟ್ಟು ಇದನ್ನು ತಯಾರಿಸುತ್ತಾರೆ. ಇದಕ್ಕೆ ನೋಮಾದ್ ಫಯರ್–ಅಲೆಮಾರಿ ವಿಧಾನ (No-mad Fire) ಎಂದೂ ಹೆಸರಿದೆ. ಗಾಳಿಯ ದಿಕ್ಕಿಗೆ ಹೊಂದಿಸಿ ಈ ಒಲೆಗಳನ್ನು ರಚಿಸಬೇಕು. ಸ್ಪೂನ್ ಫಯರ್ ಸಹ ಹೆಚ್ಚು ಕಡಿಮೆ ಇದನ್ನು ಹೋಲುತ್ತದೆ.

5. "ಎ" ಫಯರ್

ಇಂಗ್ಲಿಷ್‌ನ 'A' ಆಕೃತಿಯಲ್ಲಿ ಹೊಂಡ ಮಾಡುವುದು. ಅದಕ್ಕೆ ಮೊದಲು "V ಎಂಬ ಅಕ್ಷರವನ್ನು ತಲೆಕೆಳಗೆ ಮಾಡಿ ಇರಿಸಿದಂತೆ ಹೊಂಡ ಮಾಡುವುದು. ಅನಂತರ ಅದರ ಮಧ್ಯದಲ್ಲಿ ಒಂದು ಲೋಹದ ಸಲಾಕೆ ಅಥವಾ ಹಸಿ ಕೋಲನ್ನಿರಿಸಿ ಪಾತ್ರೆಯನ್ನಿಡುವುದು. ಅಗಲವಿರುವ ಬದಿಯಲ್ಲಿ ಕಟ್ಟಿಗೆಯನ್ನಿರಿಸಿ ಬೆಂಕಿ ಉರಿಸುವುದು.

6. ಬ್ರಿಕ್ ಫಯರ್

ಕಾಲುವೆಯ ರೀತಿ ಇಟ್ಟಿಗೆಗಳನ್ನು ಎರಡು ಸಾಲುಗಳಲ್ಲಿರಿಸಿ ಒಲೆ ರಚಿಸುವುದು. ಇಟ್ಟಿಗೆಯ ಬದಲು ಕಲ್ಲುಗಳನ್ನೂ ಉಪಯೋಗಿಸಬಹುದು. ಇದನ್ನು ನಮ್ಮಲ್ಲಿ 'ಹರಿಯೊಲೆ' ಎನ್ನುತ್ತೇವೆ.

7. ಟ್ರೆಂಚ್ ಫಯರ್

ಪಾತ್ರೆಯನ್ನು ಇಡಲು ಸಾಧ್ಯವಾಗುವಷ್ಟು ಅಗಲಕ್ಕೆ ನೆಲದಲ್ಲಿ ಕಾಲುವೆ (ಟ್ರೆಂಚ್) ತೋಡುವುದು. ಕಾಲುವೆಯ ಎರಡೂ ಕಡೆಗಳಲ್ಲಿ ಕಟ್ಟಿಗೆಯನ್ನಿರಿಸಿ ಬೆಂಕಿ ಮಾಡುವುದು. ಕಾಲುವೆಯನ್ನು ತೋಡುವಾಗ ಒಂದು ಬದಿ ಅಗಲ ಕಡಿಮೆ ಮತ್ತು ಇನ್ನೊಂದು ಬದಿ ಅಗಲ ಹೆಚ್ಚು (4 ಇಂಚಿನಿಂದ 8 ಇಂಚಿನವರೆಗೆ) ಇರಿಸಿದರೆ (Tapering) ಬೇರೆ ಬೇರೆ ಗಾತ್ರದ ಪಾತ್ರೆಗಳನ್ನು ಇಡಲು ಅನುಕೂಲ ಆಗುತ್ತದೆ.

8. ಹಂಟರ್ ಫಯರ್

ಎರಡು ಹಸಿ ದಿಮ್ಮಿಗಳನ್ನು ಸಾಮಾನ್ಯ, ಸಮಾನಾಂತರವಾಗಿ ಅಥವಾ 4ರಿಂದ 8 ಇಂಚು ಅಗಲ ಹೆಚ್ಚು ಕಡಿಮೆಯಿರುವಂತೆ ಇರಿಸಿ ಅದರ ಮೇಲೆ ಪಾತ್ರೆಯನ್ನಿರಿಸುವುದು. ಇದಕ್ಕೆ ಟ್ರಾಪರ್ ಫಯರ್ (Trapper's Fire) ಎಂದೂ ಹೆಸರಿದೆ.

9. ಲಂಬರ್‌ಮ್ಯಾನ್ಸ್ ಫಯರ್

ಮರ ಕಡಿಯುವವರಿಗೆ ಲಂಬರ್‌ಮ್ಯಾನ್ ಎಂದು ಹೆಸರು. ಈ ಫಯರ್‌ಗೆ ಬ್ರಿಜ್ ಫಯರ್ (Bridge Fire) ಎಂದೂ ಹೆಸರಿದೆ. ಇಲ್ಲಿ ಹಂಟರ್ ಫಯರ್ ಸಿದ್ಧಗೊಳಿಸಿ ದಿಮ್ಮಿಯ ಮೇಲೆ ಪಾತ್ರೆಯನ್ನು ಇರಿಸುವ ಬದಲು ತೂಗಾಡಿಸುವ ವ್ಯವಸ್ಥೆಯಿರುತ್ತದೆ. ಎತ್ತರದ ಎರಡು ಕಂಬಗಳ ಮೇಲೆ ಒಂದು ಅಡ್ಡ ದಂಡವನ್ನಿರಿಸಿ ಅದರಲ್ಲಿ ಪಾತ್ರೆಯನ್ನು ತೂಗಾಡಿಸುವುದು, ಅಲ್ಲದಿದ್ದರೆ ಒಂದು ಉದ್ದವಾದ ಹಾಗೂ ಗಟ್ಟಿಯಾದ ಕವಲು ಇರುವ ದಂಡವನ್ನು ಎರಡು ಗೂಟಗಳ ಸಹಾಯದಿಂದ ಸುಮಾರು ಮೂವತ್ತು ಡಿಗ್ರಿ ಕೋನದಲ್ಲಿ ನಿಲ್ಲಿಸಿ ಅದರಲ್ಲಿ ಪಾತ್ರೆಯನ್ನು ತೂಗಾಡಿಸಿ ಆಹಾರ ತಯಾರಿಸುವುದು. ಇದಕ್ಕೆ ಕ್ರೇನ್ ಫಯರ್ (Crane Fire) ಎಂದೂ ಹೇಳುತ್ತಾರೆ.

10. ಅಲ್ಟರ್ ಫಯರ್

ಮೆದುವಾದ ನೆಲ ಅಥವಾ ಒದ್ದೆಯಿರುವ ಸ್ಥಳವಾದರೆ ಈ ವಿಧಾನವನ್ನು ಬಳಸಲಾಗುತ್ತದೆ. ನೆಲದ ಮೇಲೆ ನಾಲ್ಕು ಕಾಲಿನ ಮೇಜಿನಂತಹ ಸಾಧನವನ್ನು ತಯಾರಿಸಿ, ಅದರ ಮೇಲೆ ಹಸಿರು ಎಲೆ ಮತ್ತು ಮಣ್ಣನ್ನು ವರಿಸೆಯಾಗಿ ಗಟ್ಟಿ ಮಾಡಿದ ನಂತರ ಬೆಂಕಿ ಮಾಡುವುದು. ಮೇಜಿನ ಕಾಲುಗಳನ್ನು ನೆಲದಲ್ಲಿ ಹೂತಿಡುವುದರಿಂದ ನಮಗೆ ಅನುಕೂಲವಾದ ಎತ್ತರದಲ್ಲಿ ಬೆಂಕಿ ಹಾಕಬಹುದು. ದಿಮ್ಮಿಗಳನ್ನು ಅಡ್ಡಕ್ಕೂ, ನೀಟಕ್ಕೂ ಇರಿಸಿಯೂ ಇದನ್ನು ತಯಾರಿಸಬಹುದು. ಮೇಲ್ಬಾಗದಲ್ಲಿ ಒಂದು ಲೋಹದ ತಗಡನ್ನು ಇರಿಸುವುದರಿಂದ ಬೆಂಕಿಯ ಶಾಖವು ಮೇಜಿನ ಹಲಗೆಗೆ ತಗುಲದಂತೆ ನಿರ್ಬಂಧಿಸಬಹುದು.

11. ಪಗೋಡಾ ಫಯರ್

ಶಿಬಿರಾಗ್ನಿಯ ಸಂದರ್ಭದಲ್ಲಿ ಪಿರಮಿಡ್ ಫಯರ್ ರಚಿಸಿದ ನಂತರ ಅದರ ಸುತ್ತಲೂ ಆಯತಾಕಾರದಲ್ಲಿ ಒಂದರ ಮೇಲೆ ಒಂದರಂತೆ ಅಡ್ಡಕ್ಕೂ, ನೀಟಕ್ಕೂ ಕಟ್ಟಿಗೆಯನ್ನು ಇರಿಸುತ್ತಾ ಹೋಗುವುದು. ಮೇಲಕ್ಕೆ ಹೋದಂತೆ

ಅಗಲ ಕಡಿಮೆ ಮಾಡುವುದು. ಅದನ್ನು ಕ್ರಿಸ್ ಕ್ರಾಸ್ ಫಯರ್ (Cris Cross Fire) ಎಂದೂ, ಕೌನ್ಸಿಲ್ ಫಯರ್ ಎಂದೂ ಕರೆಯುತ್ತಾರೆ.

12. ರಿಫ್ಲೆಕ್ಟರ್ ಫಯರ್

ಬಿಸಿ ಸಿಗುವುದಕ್ಕಾಗಿ ಇದನ್ನು ಉಪಯೋಗಿಸುತ್ತಾರೆ. ನಾಲ್ಕು ದಿಮ್ಮಿಗಳನ್ನು ಆಯತಾಕಾರದಲ್ಲಿರಿಸಿ, ಮಧ್ಯದಲ್ಲಿ ಪಿರಮಿಡ್ ಫಯರ್ ಸಿದ್ಧಗೊಳಿಸುವುದು. ಆ ಬೆಂಕಿಯ ಬಿಸಿ ಪ್ರತಿಫಲಿಸುವುದಕ್ಕಾಗಿ (Reflect) ಅದರ ಒಂದು ಬದಿಯಲ್ಲಿ ಎರಡು ಗೂಟಗಳನ್ನು ಓರೆಯಾಗಿ ಬಡಿದು ಗಟ್ಟಿ ಮಾಡಿ ಅದರ ಮೇಲೆ ಅಡ್ಡಕ್ಕೆ ಕಟ್ಟಿಗೆಯನ್ನು ಇರಿಸುವುದು.

13. ಜಿಪ್ಸಿ ಫಯರ್

ಮೂರು ದಂಡಗಳನ್ನುಪಯೋಗಿಸಿ ಟ್ರೈಪೋಲ್ (Tripole) ತಯಾರಿಸಿದ ನಂತರ ಅದರಲ್ಲಿ ಪಾತ್ರೆಯನ್ನು ತೂಗಾಡಿಸುತ್ತಾ ಅದರಡಿಯಲ್ಲಿ ಕಟ್ಟಿಗೆ ಉರಿಸುವುದಕ್ಕೆ ಜಿಪ್ಸಿ ಫಯರ್ ಎನ್ನುತ್ತಾರೆ.

14, ಮಫನ್ ಚೂಲ

ಮೇಲೆ ಪಾತ್ರೆಯನ್ನು ಇಡಲು ಸಾಧ್ಯವಾಗುವಂತೆ ವೃತ್ತಾಕಾರದ ಒಂದು ಹೊಂಡ ಮಾಡಿ, ಹೊಂಡದ ಕಡೆಗೆ ಒಂದು ಸಣ್ಣ ಕಿಂಡಿಯನ್ನಿರಿಸಿ, ಕಟ್ಟಿಗೆ ಇರಿಸಿ ಬೆಂಕಿ ಮಾಡುವುದು. ಹೊಂಡದ ಹತ್ತಿರ ಮೂರು ದಿಕ್ಕುಗಳಲ್ಲಿ ಅಂದರೆ ಕಟ್ಟಿಗೆಯನ್ನಿರಿಸುವ ದಿಕ್ಕನ್ನು ಬಿಟ್ಟು ಉಳಿದೆಡೆಯಲ್ಲಿ ಪಾತ್ರೆಯನ್ನು ಇಡಲಾಗುವಂತೆ ಹೊಂಡ ಮಾಡುವುದು. ಮೊದಲ ಹೊಂಡದಿಂದ ಇತರ ಮೂರು ಹೊಂಡಗಳಿಗೂ ಬೆಂಕಿ ಸಾಗಲು ಆಗುವಂತೆ ಕಿಂಡಿಗಳನ್ನು ಕೊರೆದಿರಬೇಕು. ಮೊದಲ ಹೊಂಡದಲ್ಲಿ ಬೆಂಕಿ ಹಚ್ಚಿದರೆ ಇತರ ಮೂರೂ ಹೊಂಡಗಳಿಗೂ ಬೆಂಕಿ ಹೋಗುವಂತಾಗಬೇಕು. ಎಲ್ಲಾ ಹೊಂಡಗಳನ್ನೂ ವೃತ್ತಾಕಾರದಲ್ಲಿ ಮಾಡಿರಬೇಕು. ಇದರಿಂದ ಏಕಕಾಲದಲ್ಲಿ ಮುರೋ ನಾಲ್ಕೂ ಪಾತ್ರೆಗಳನ್ನಿರಿಸಿ ಅಡುಗೆ ಮಾಡಬಹುದು. ಮಣ್ಣನ್ನು ಚೆನ್ನಾಗಿ ಕಲಸಿ ಈ ಒಲೆಗಳನ್ನು ರಚಿಸಬಹುದು. ಇದರಲ್ಲಿ ಬೆಂಕಿಯ ಶಾಖವನ್ನೂ ಹೊಗೆಯನ್ನೂ ನಿಯಂತ್ರಣ ಮಾಡುವುದಲ್ಲದೆ, ಉಳಿತಾಯ ಮಾಡಿದಂತೆಯೂ ಆಗುತ್ತದೆ.

ಕಟ್ಟಿಗೆಗಳನ್ನು ಸಂಗ್ರಹಿಸುವ ಕ್ರಮ

ಕಟ್ಟಿಗೆಯನ್ನು ಸಂಗ್ರಹಿಸಿಡುವುದಿದ್ದರೆ ಅನುಮತಿ ಪಡೆದುಕೊಳ್ಳ ಬೇಕಾಗುತ್ತದೆ. ಒಣಗಿದ ರೆಂಬೆಗಳನ್ನು ತುಂಡರಿಸಬೇಕು ಅಥವಾ ಹೆಕ್ಕಿ

ಶೇಖರಿಸಬೇಕು. ಹಸಿ ಗೆಲ್ಲುಗಳನ್ನು ಅನಗತ್ಯವಾಗಿ ತುಂಡರಿಸಿ ತೆಗೆಯಬಾರದು. ಸುಲಭದಲ್ಲಿ ಬೆಂಕಿ ಉರಿಯಲು ಸಹಾಯಕವಾದ ಕಟ್ಟಿಗೆ ಸೀಳು, ಮಡಲು ಗರಿ, ವಿವಿಧ ರೀತಿಯ ಕಟ್ಟಿಗೆ ತುಂಡು (Punk, Kindling, Firewood) ಇವುಗಳನ್ನು ಬೇರ್ಪಡಿಸಿ ತೆಗೆದಿರಿಸಬೇಕು. ಮಳೆಯಿಂದ ಕಟ್ಟಿಗೆ ಒದ್ದೆಯಾಗದಂತೆ ನೋಡಿಕೊಳ್ಳಬೇಕು.

ಮರೆ ಮಾಡುವುದು (Screening)

ತೆರವಾದ ಪ್ರದೇಶಗಳಲ್ಲಿ ಒಲೆ ಉರಿಸುವಾಗ ಗಾಳಿ ಹೆಚ್ಚಾದರೆ ಬೆಂಕಿ ಬೇಗನೆ ನಂದಿಹೋಗುವುದಿದೆ. ಅಲ್ಲದೆ ಪಾತ್ರೆಗೆ ಬಿಸಿ ತಾಗುವುದೇ ಇಲ್ಲ. ಅಂತಹ ಸಂದರ್ಭಗಳಲ್ಲಿ ಬೆಂಕಿಯನ್ನು ನಿಯಂತ್ರಿಸುವುದಕ್ಕಾಗಿ ಒಲೆಯ ಹತ್ತಿರ ಗಾಳಿ ಬೀಸದಂತೆ ಒಂದು ಮರೆ (Screen) ಮಾಡಬೇಕಾಗುತ್ತದೆ. ಅದನ್ನು ಹಲವು ರೀತಿಯಲ್ಲಿ ಮಾಡಬಹುದು.

1. ಒಂದು ದೊಡ್ಡ ಟಿನ್‌ನ ಮೇಲ್ಭಾಗ ಮತ್ತು ಅಡಿಭಾಗವನ್ನು ತುಂಡರಿಸಿ ತೆಗೆದು ಒಂದು ಬದಿಯನ್ನು ಕತ್ತರಿಸಿ ತೆಗೆದು ಇಡುವುದು.
2. ಲೋಹದ ತಗಡು ಅಥವಾ ಆಸ್ಟೆಸ್ಟಾಸ್ ಷೀಟನ್ನು ಗಟ್ಟಿಯಾಗಿ ಇರಿಸುವುದು.
3. ಪ್ಲಾಸ್ಟಿಕ್ ಷೀಟ್, ಕ್ಯಾನ್‌ವಾಸ್ ಶೀಟ್, ಗೋಣಿಚೀಲ, ದಪ್ಪದ ಬಟ್ಟೆ, ಹೊದಿಕೆ ಇತ್ಯಾದಿಗಳನ್ನು ಸಹ ಜಾಗ್ರತೆಯಾಗಿ ಸ್ವಲ್ಪ ದೂರದಲ್ಲಿ ಕಟ್ಟಿ, ಮರೆ ಮಾಡಬಹುದು.
4. ಸುಮಾರು ಎರಡು ಅಡಿ ಉದ್ದ ಮತ್ತು ಒಂದು ಅಡಿ ಅಗಲದ ಆಯತಾಕಾರದ ಮೂರು ಸಾಧನಗಳನ್ನು ತಯಾರಿಸಿ, ದಪ್ಪದ ಬಟ್ಟೆ, ಕ್ಯಾನ್ವಾಸ್ ಅಥವಾ ಇನ್ನಿತರ ವಸ್ತುಗಳಿಂದ ಆವರಣ ರಚಿಸಿ, ಬದಿಗಳನ್ನು ಹೊಂದಿಸಬಹುದಾದ (Adjust) ರೀತಿಯಲ್ಲಿ ಕಟ್ಟಿ ಮೂರೂ ಬದಿಗಳಿಂದ ಸಾಧನವನ್ನು ತಯಾರಿಸುವುದು. ಆಯತಾಕಾರದ ಉದ್ದದ ದಂಡವನ್ನು ಸುಮಾರು 6 ಇಂಚಿನಷ್ಟು ಕೆಳಕ್ಕೆ ಇಳಿಸಿ ಕಟ್ಟಿದರೆ ಅದು ಗಾಳಿಯನ್ನು ತಡೆಯುವ ಒಂದು ಉತ್ತಮ ಸಾಧನ ಆಗುವುದು.

11. ತೆಪ್ಪ

ನೀರಿನಲ್ಲಿ ತೇಲಾಡುತ್ತಾ ಸಾಗುವುದಕ್ಕಾಗಿ ತಾತ್ಕಾಲಿಕವಾಗಿ ಕಟ್ಟಿ ಮರವನ್ನು ತಯಾರಿಸುವ ಉಪಕರಣಕ್ಕೆ ತೆಪ್ಪ ಅಥವಾ ರ್‍ಯಾಫ್ಟ್ (Raft) ಎಂದು ಹೆಸರು. ಬೇರೆಬೇರೆ ವಸ್ತುಗಳನ್ನು ಉಪಯೋಗಿಸಿ, ವಿವಿಧ ರೀತಿಯ ತೆಪ್ಪಗಳನ್ನು ತಯಾರಿಸುತ್ತಾರೆ. ಬಾಳೆ ದಿಂಡು, ಬೈ ಹುಲ್ಲು, ಬಿದಿರು, ಭಾರ ಕಡಿಮೆಯಿರುವ. ದಿಮ್ಮಿ, ರಬ್ಬರ್ ಟ್ಯೂಬ್, ಟಯರ್, ಕ್ಯಾನ್‌ವಾಸ್ ಬ್ಯಾಗ್, ಗಾಳಿ ಪ್ರವೇಶಿಸದ ಡಬ್ಬ ಕೆಲವು ಮರದ ಸಿಪ್ಪೆ, ಸಪೂರವಾಗಿರುವ, ಹಗುರವಿರುವ ಗೆಲ್ಲುಗಳು, ಹಲಗೆ ಇತ್ಯಾದಿಗಳನ್ನೂ ಅದಕ್ಕಾಗಿ ಬಳಸಬಹುದು. ಸುಲಭದಲ್ಲಿ ತಯಾರಿಸಬಹುದಾದ ವುಗಳನ್ನು ಈ ಕೆಳಗೆ ಕೊಡಲಾಗಿದೆ. ಹೆಚ್ಚಿನ ಮಾಹಿತಿಗೆ "ಬಾಲಕರಿಗಾಗಿ ಸ್ಕೌಟಿಂಗ್‌ನ" 8ನೇ ಶಿಬಿರಾಗ್ನಿ ಉದಂತವನ್ನು ಪರಿಶೀಲಿಸಿರಿ.

1. ಗಾಳಿ ಪ್ರವೇಶಿಸದ ಡಬ್ಬ ಮತ್ತು ಹಗುರದ ಗೆಲ್ಲುಗಳನ್ನು ಕಟ್ಟುವುದು.
2. ಗಾಳಿ ತುಂಬಿಸಿದ ಟ್ಯೂಬ್ ಮತ್ತು ಹಗುರದ ದಿಮ್ಮಿಗಳನ್ನು ಸೇರಿಸಿ ಕಟ್ಟುವುದು.
3. ಬಾಳೆ ದಿಂಡನ್ನು ದಿಮ್ಮಿಗೆ ಸೇರಿಸಿ ಕಟ್ಟುವುದು.
4. ಒಂದು ಕಾಲಟ್ಟ (Trestle) ತಯಾರಿಸಿ ಅದರ ಎಡೆಯಲ್ಲಿ ಬೈ ಹುಲ್ಲನ್ನು ಗಟ್ಟಿಯಾಗಿ ಕಟ್ಟುವುದು.
5. ಹಗುರವಿರುವ ದಿಮ್ಮಿ ಅಥವಾ ಹಲಗೆಗಳನ್ನು ಸೇರಿಸಿ ಕಟ್ಟುವುದು.
6. ಕ್ಯಾನ್ವಾಸ್ ಬ್ಯಾಗ್‌ನ ಒಳಗೆ ಬೈ ಹುಲ್ಲನ್ನು ತುಂಬಿಸಿ ದಿಮ್ಮಿಗೆ ಕಟ್ಟುವುದು.

ಸುಲಭ ಪ್ರಯಾಣಕ್ಕಾಗಿ ಹಾಯಿಯನ್ನೂ ಉಪಯೋಗಿಸಬಹುದು.

12. ಮಾರ್ಗಕಲ್ಪನೆ (ಅಗ್ರಗಾಮಿತ್ವ)–II
(ಪಯನಿಯರಿಂಗ್–II)

A. ಕಾಲಟ್ಟ (ಟ್ರೈಸಲ್–Trestle)

ಕಾಲಟ್ಟ ನಿರ್ಮಾಣವು ಒಂದು ಉತ್ತಮ ಪಟ್ರೋಲ್ ಚಟುವಟಿಕೆಯಾಗಿದೆ.





ಉಪಯೋಗ: ಸಣ್ಣ ಸೇತುವೆ ನಿರ್ಮಾಣ, ಗೋಪುರ ನಿರ್ಮಾಣ, ಗೇಟಾಗಿ ಉಪಯೋಗಿಸುವುದು. ವಸ್ತುಗಳನ್ನು ಇರಿಸಿ ಒಯ್ಯುವ ಉಪಕರಣವಾಗಿ ಬಳಕೆ ಇತ್ಯಾದಿ.

ವಿಧಾನ: ಇದಕ್ಕೆ ಒಟ್ಟು ಆರು ದಂಡಗಳು ಬೇಕು. ಗಟ್ಟಿಯಾದ ಎರಡು ದಂಡಗಳನ್ನು ಕೆಳಗೆ ಸ್ವಲ್ಪ ದೂರ, ಮೇಲೆ ಸ್ವಲ್ಪ ಹತ್ತಿರವಿರುವಂತೆ ಇಡುವುದು. ಅವುಗಳಿಗೆ ಕಾಲುಮರ (Legs) ಎಂದು ಹೆಸರು. ಅವುಗಳ ಮೇಲೆ ಮೇಲ್ಭಾಗದಲ್ಲಿ ಒಂದು, ಕೆಳ ಭಾಗದಲ್ಲಿ ಒಂದು ಅಡ್ಡ ದಂಡವನ್ನಿಡುವುದು. ಮೇಲಿನದು ಮೇಲ್‌ಬೆನ್ನುಮರ (ಟ್ರಾನ್ಸಮ್–Transom) ಕೆಳಗಿನದ್ದು ಕೆಳಬೆನ್ನುಮರ (ಲೆಜ್ಜರ್– Ledger) ಅವು ಸಂಧಿಸುವ ನಾಲ್ಕು ಕಡೆಗಳಲ್ಲಿ ಚೌಕಕಟ್ಟು (ಸ್ಟೇರ್ ಲ್ಯಾಷಿಂಗ್) ಹಾಕುವುದು. ಲೆಗ್‌ಗಳ ಮೇಲೆ 'X ಆಕಾರದಲ್ಲಿ ಎರಡು ದಂಡುಗಳನ್ನು ಇಡುವುದು. ಅವುಗಳಲ್ಲಿ ಒಂದು ಪೂರ್ಣ ಅಡಿ ಭಾಗದಲ್ಲೂ, ಇನ್ನೊಂದು ಕೆಳಗೆ ಮೇಲ್ಭಾಗದಲ್ಲೂ ಬರುವಂತೆ ಇಡುವುದು. ನಾಲ್ಕೂ ಕಡೆಗಳಲ್ಲಿ ಚೌಕಕಟ್ಟು ಹಾಕುವುದು. ಕೊನೆಗೆ ಮಧ್ಯದಲ್ಲಿ ಕರ್ಣಕಟ್ಟು (ಡಯಗನಲ್ ಲ್ಯಾಷಿಂಗ್) ಹಾಕಿ ಮುಗಿಸುವುದು.

13. (ಬಿಗಿಹಿಡಿತ) –ಸುಭದ್ರ ಆಧಾರ (ಹೋಲ್ಡ್ ಫಾಸ್ಟ್– Hold Fast)

ಯಾವುದಾದರೊಂದು ವಸ್ತುವನ್ನು ಭದ್ರವಾಗಿ ಹಿಡಿದು ನಿಲ್ಲಿಸುವ ವ್ಯವಸ್ಥೆಗೆ ಹೋಲ್ಡ್ ಫಾಸ್ಟ್ ಎನ್ನುತ್ತಾರೆ. ಸೇತುವೆ, ಗೋಪುರ ಇತ್ಯಾದಿಗಳನ್ನು ನಿರ್ಮಿಸುವಾಗ ಹಗ್ಗವನ್ನು ಎಳದು ಕಟ್ಟುವುದಕ್ಕೆ, ಉದ್ದದ ಮತ್ತು ಬಲವಾದ ಗೂಟಗಳು ಮತ್ತು ದಿಮ್ಮಿಗಳನ್ನು ಉಪಯೋಗಿಸಿ, ನೆಲದ ಸ್ವಭಾವಕ್ಕನುಸಾರ (ಗಟ್ಟಿಯಾದ ನೆಲ ಹೊಯ್ದೆ ಪ್ರದೇಶ, ಮಣ್ಣಿರುವ ಪ್ರದೇಶ ಇತ್ಯಾದಿ) ಬೇರೆಬೇರೆ ರೀತಿಯ ಹೋಲ್ಡ್ ಫಾಸ್ಟಳನ್ನು ಸಿದ್ಧಗೊಳಿಸುತ್ತಾರೆ. ಗಟ್ಟಿಯಾದ ನೆಲವಾದರೆ 3–2–1 ಹೋಲ್ಡ್ ಫಾಸ್ಟ್ (3–2–1–Hold Fast) ಗಟ್ಟಿಯಿಲ್ಲದ ನೆಲವಾದರೆ ಡೆಡ್‌ಮ್ಯಾನ್ ಆಂಕರೇಜ್ (Deadman Anchorage) ಉಸುಕು ನೆಲವಾದರೆ ಲಾಗ್ ಆ್ಯಂಡ್ ಪಿಕೆಟ್ ಹೋಲ್ಡ್‌ಫಾಸ್ಟ್ (Log & Picket Hold Fast) ಉಪಯೋಗಿಸುವುದು ಉತ್ತಮ.

3–2–1 ಹೋಲ್ಡ್‌ಫಾಸ್ಟ್‌ನಲ್ಲಿ ಗೂಟಗಳನ್ನು ನೆಲದಿಂದ ಸುಮಾರು 60ಲಿಯಲ್ಲಿ ಬಡಿಯಬೇಕು. ಗೂಟಗಳೊಳಗೆ ಬಂಧಿಸುವ ಹಗ್ಗವನ್ನು ಸುಮಾರು 45ರಿಯಲ್ಲಿ ಕಟ್ಟಬೇಕು. ಗೂಟಕ್ಕೆ ಎಳೆದು [ಕಟ್ಟುವ ಸೇತುವೆ (2)] ಹಗ್ಗ ಗೂಟಕ್ಕೆ 45ಲಿಗಿಂತ ಕಡಿಮೆ ಸೆಳೆತ (Strain) ದಲ್ಲಿರಬೇಕು. ಅದಕ್ಕನುಸಾರವಾಗಿ ಗೂಟವನ್ನು ಹೊಡೆಯಬೇಕು. ಗೂಟಗಳು ಮೂರು ಅಡಿ ಉದ್ದವಿದ್ದರೆ ಒಳ್ಳೆಯದು. ಅದರಲ್ಲಿ ಎರಡಡಿಯಷ್ಟು ನೆಲದಡಿಗೆ ಬಡಿದು ತಗ್ಗಿಸಿರಬೇಕು.



(ಗೂಟಗಳನ್ನು (3–2–1) ಚಿತ್ರದಲ್ಲಿರುವಂತೆ ಸಪೂರವಾದ ಹಗ್ಗಗಳಿಂದ ಎಳೆದು ಕಟ್ಟಬೇಕು. ಬಡಿದಿರುವ ಮೂರೂ ಗೂಟಗಳನ್ನು ಹಗ್ಗಗಳಿಂದ ಬಂಧಿಸಿ ಮೊದಲ ಗೂಟಕ್ಕೆ ರಾಟೆಯ ಕೊಂಡಿಯನ್ನು ಬಂಧಿಸಬೇಕು.



ಸುಭದ್ರ ಆಧಾರಗಳು

14. ಅಂದಾಜು ಮಾಡುವುದು (Estimation)

ಮಾರ್ಗಕಲ್ಪನೆ (ಪಯನಿರಿಂಗ್)ಯಲ್ಲಿ ಸ್ಕೌಟ್ ಗೈಡ್‌ಗಳು ಎತ್ತರ, ಅಗಲ, ಆಳ ಮತ್ತು ತೂಕವನ್ನು ಅಂದಾಜು ಮಾಡುವ ಕಲೆಯನ್ನು ಕರಗತ ಮಾಡಿಕೊಳ್ಳಬೇಕು. ಅಂದಾಜು ಮಾಡಲು ಹಲವಾರು ವಿಧಾನಗಳಿವೆ. ಕನಿಷ್ಠ ಎರಡು ವಿಧಾನಗಳನ್ನು ಕಲಿತಿರಬೇಕು. ಅಂದಾಜು ಮಾಡುವ ಮೊದಲ ಹೆಜ್ಜೆಯಾಗಿ ಪ್ರತಿಯೋರ್ವರೂ ಅವರವರ ಎತ್ತರ, ತೂಕ ತಿಳಿದಿರಬೇಕು. ಅಲ್ಲದೆ ತೋರು ಬೆರಳಿನ ಉದ್ದ, ಅಂಗೈಯ ಉದ್ದ, ಮೊಣಕೈಯಿಂದ ನಡು ಬೆರಳಿನ ತುದಿಯವರೆಗಿನ ಉದ್ದ, ಎರಡೂ ಕೈಗಳನ್ನು ವಿರುದ್ಧ ದಿಕ್ಕಿಗೆ ಚಾಚಿದರೆ ಆಗುವ ಉದ್ದ, ಬೆರಳಿನ ಅಗಲ, ಇತ್ಯಾದಿ ತಿಳಿದಿರಬೇಕು. ಪಾದದ ಉದ್ದ, ನಡೆಯುವಾಗ ಸಾಮಾನ್ಯವಾಗಿ ಹಿಂಗಾಲಿನಿಂದ ಮುಂಗಾಲಿನ ತುದಿಯವರೆಗಿನ ಸರಾಸರಿ ಉದ್ದ, ತಲೆಯ ಸುತ್ತಳತೆ ತಿಳಿದಿರಬೇಕು. ತಮ್ಮ ಬಳಿಯಿರುವ ದಂಡ, ಹಗ್ಗಗಳ ಸರಿಯಾದ ಉದ್ದವು ತಿಳಿದಿರುವುದು ಅವಶ್ಯಕ. ಈ ಎಲ್ಲಾ ವಿವರಗಳಿಗೆ ಬಾಲಕರಿಗಾಗಿ ಸೌಟಿಂಗ್ ಪುಸ್ತಕದ ಶಿಬಿರಾಗ್ನಿ ಉದಂತ 8 ಪುಟ 110–111 ಪರಾಮರ್ಶಿಸಿ.

ಎತ್ತರವನ್ನು ಕಂಡು ಹಿಡಿಯುವುದು

ಕೆಲವು ಸೆ.ಮೀ.ನಿಂದ ಹಿಡಿದು ಮೇಲ್ಪಟ್ಟ 100 ಮೀಟರ್‌ಗಳಿಗೂ ವಸ್ತುಗಳ ಎತ್ತರವನ್ನು ಅಂದಾಜು ಮಾಡಲು ಬರಬೇಕು. ಬೇಲಿಯ ಎತ್ತರ, ಹಳ್ಳ ಅಥವಾ ಮೋರಿಯ ಆಳ, ಒಡ್ಡು ಅಥವಾ ಕಟ್ಟೆಯ ಎತ್ತರ, ಮನೆ, ಮರ, ಗೋಪುರ, ಬೆಟ್ಟ ಅಥವಾ ಪರ್ವತ ಇವುಗಳ ಎತ್ತರವನ್ನು ಮಾಡಲು ಬರಬೇಕು. ಪುಸ್ತಕಗಳ ಮೂಲಕ ತಿಳಿಯುವುದಕ್ಕಿಂತ ಹಲವು ಬಾರಿ ಅಭ್ಯಾಸ

ಮಾಡಿದರೆ ಸುಲಭವಾಗಿ ಕಲಿತು ಬಿಡುತ್ತೀರಿ. ಒಂದು ವಸ್ತುವಿನ (ಮನೆ, ಮರ ಇತ್ಯಾದಿ) ಎತ್ತರವನ್ನು ಅಂದಾಜು ಮಾಡಲು, ಅದರಿಂದ 9 ಏಕಮಾನ ಹೆಜ್ಜೆ (ಅಥವಾ ಸ್ಕೌಟ್ ದಂಡ ಅಥವಾ ನೀವೇ ನಿಗದಿಪಡಿಸಿಕೊಂಡ ಏಕಮಾನ) ದೂರ ಹೋಗಿ ಅಲ್ಲಿ ಸ್ಕೌಟ್ ದಂಡವನ್ನು ನಿಲ್ಲಿಸಿ ಅಲ್ಲಿಂದ ಒಂದು ಏಕಮಾನದ ಬಿಂದುವನ್ನು ಗುರುತಿಸಿ, ಈ ಬಿಂದುವಿನಿಂದ ಸ್ಕೌಟ್ ದಂಡದ ಮೇಲೆ ಹಾದು ವಸ್ತುವಿನ ತುದಿಯವರೆಗಿನ ಒಂದು ರೇಖೆಯನ್ನು ಊಹಿಸಿಕೊಳ್ಳಿ, ಈ ಊಹಾ ರೇಖೆಯು ದಂಡದ ಮೇಲೆ ಎಲ್ಲಿ ಹಾಯುತ್ತದೆ ಎಂಬುದನ್ನು ಇನ್ನೊಬ್ಬ ಸ್ಕೌಟ್ ತನ್ನ ಬೆರಳಿನಿಂದ ತೋರಿಸುತ್ತಾ ಹೋಗಿ ನೀವು ಹೇಳಿದ ಕಡೆ ನಿಲ್ಲಿಸುತ್ತಾನೆ. ನೆಲಮಟ್ಟದಿಂದ ಆ ಸ್ಕೌಟ್ ತೋರಿದ ಬಿಂದುವಿನವರೆಗೆ ಎಷ್ಟು ಸೆಂ.ಮೀ. ಇದೆಯೋ ಅದರ ಹತ್ತರಲ್ಲಿ ಒಂದು ಭಾಗದಷ್ಟು ಮೀಟರ್‌ಗಳು, ಮನೆಯ ಅಥವಾ ಮರದ ಬೇರಾವುದೇ ಆರಿಸಿದ ವಸ್ತುವಿನ ಎತ್ತರವಾಗಿರುತ್ತದೆ. ಉದಾ: 55 ಸೆ.ಮೀ.ಗಳಿದ್ದರೆ ವಸ್ತುವಿನ ಎತ್ತರ 55/10=5.5 ಮೀ. ಗಳು ಸೆ.ಮೀ. ಗುರುತಿಸಿದ ದಂಡದ ಸಹಾಯದಿಂದ ಮರದ ಎತ್ತರವನ್ನು ಕಂಡುಕೊಳ್ಳಬಹುದು (ಯಾವುದೇ ಏಕಮಾನವನ್ನು ಉಪಯೋಗಿಸಿದರೂ ಅದು 9:1 ಪ್ರಮಾಣದಲ್ಲಿರಬೇಕು. ದಂಡದ ಮೇಲಿನ ಸೆ.ಮೀ.ಗಳ 1/10 ಭಾಗಲಬ್ಧವು ಮೀ.ಗಳಲ್ಲಿ ವಸ್ತುವಿನ ಎತ್ತರವಾಗಿರುತ್ತದೆ). (ಮೆಟ್ರಿಕ್ ಪದ್ಧತಿಯ ಈ ಅಂದಾಜು ಮಾಡುವುದನ್ನು ನಮ್ಮ ಎಲ್.ಟಿ.ಗಳಲ್ಲೊಬ್ಬರಾದ ಶ್ರೀ ರಾ. ಚಂದ್ರಶೇಖರನ್ ಅವರು 2000 ಇಸವಿಯಲ್ಲಿ ಕಲ್ಪನೆ ಮಾಡಿ ಧಾರವಾಡದಲ್ಲಿ ನಡೆದ ಮೂಲರೋವರ್ ಲೀಡರ್ ತರಬೇತಿ ಶಿಬಿರದಿಂದ ರೂಢಿಗೆ ತಂದರು).

ಅಗಲವನ್ನು ಅಂದಾಜು ಮಾಡುವುದು

ನದಿಯ ಅಗಲವನ್ನು ಅಂದಾಜು ಮಾಡುವುದು ಹೀಗೆ. ನದಿಯ ಒಂದು ದಡದಿಂದ ಇನ್ನೊಂದು ದಡದ ಮಧ್ಯದ ಅಗಲವನ್ನು ಅಂದಾಜು ಮಾಡಲು ನೀವು ನದಿಯ ಒಂದು ದಡದಲ್ಲಿ 'A' ಗುರುತು ಮಾಡಿಕೊಂಡಲ್ಲಿ ನಿಮ್ಮ ಎದುರಿನ ದಡದಲ್ಲಿರುವ ಯಾವುದಾ ದರೂ ಮರ ಅಥವಾ ಬಂಡೆಗೆ 'ಃ ಗುರುತು ಮಾಡಿಕೊಂಡು ವಿರುದ್ಧ ವಾಗಿ ನಿಲ್ಲಿರಿ. ಬಳಿಕ ನಿಮ್ಮ ಬಲಕ್ಕೆ ಅಥವಾ ಎಡಕ್ಕೆ ತಿರುಗಿ, ನದಿಗೆ



ಸಮಾನಾಂತರವಾಗಿ 5 ಅಥವಾ 10 ಹೆಜ್ಜೆ ಚಲಿಸಿ ಇಲ್ಲಿ 'C' ಗುರುತು ಮಾಡಿರಿ. ಅದೇ ದಿಕ್ಕಿನಲ್ಲಿ ಪುನಃ 5 ಅಥವಾ 10 ಹೆಜ್ಜೆ ಮುಂದೆ ಸಾಗಿ ಅಲ್ಲಿ 'D' ಗುರುತು ಮಾಡಿರಿ. ಈಗ ಚಿತ್ರದಲ್ಲಿ ತೋರಿಸಿರುವಂತೆ ತಿರುಗಿ ನದಿಯ ವಿರುದ್ಧ ದಿಕ್ಕಿನಲ್ಲಿ 'E'ವರೆಗೆ ಎಂದರೆ ಇಅಃಯು ಸರಳ ನೇರ ರೇಖೆಯಾಗಿ ಪಡೆಯುವವರೆಗೆ ನಡೆಯಿರಿ, DE ಅಂತರವು AB ನದಿಯ ಅಗಲವಾಗಿರುತ್ತದೆ.

❍

15. ಮಾದರಿ ಸೇತುವೆ, ಭಾರವನ್ನು ಎತ್ತುವ ಯಂತ್ರ (ಡೆರಿಕ್) ಹಗ್ಗದ ಏಣಿ





ಶಿಬಿರಾಗ್ನಿ ಉದಂತ 8ರಲ್ಲಿ ಹೇಳಿರುವ ಚಟುವಟಿಕೆಗಳನ್ನು ಮಾಡಲು ಪ್ರಯತ್ನಿಸಿರಿ, ಇಲ್ಲಿ ಹೇಳುವ ಸೇತುವೆಗಳ ಮತ್ತು ಡೆರಿಕ್‌ಗಳ ಚಿತ್ರಗಳನ್ನು ನೋಡಿ ಉತ್ತಮ ರೀತಿಯಲ್ಲಿ ಅವುಗಳ ಮಾದರಿಗಳನ್ನು ರಚಿಸಲು ಪ್ರಯತ್ನಿಸಿರಿ. ಮೊದಲು ಅದಕ್ಕೆ ಅಗತ್ಯವಾದ ದಂಡಗಳು, ಹಗ್ಗ, ಗೂಟಕ್ಕೆ ಬದಲು ಮೊಳೆ, ಮಾದರಿ ಸೇತುವೆಯನ್ನು ನಿಲ್ಲಿಸಲು ಅಗತ್ಯವಾದ ಹಲಗೆ ಇತ್ಯಾದಿಗಳನ್ನು ಸಂಗ್ರಹಿಸಿದ ನಂತರ ಸ್ವತಃ ಮಾದರಿ ಸೇತುವೆ ಮತ್ತು ಡೆರಿಕ್‌ನ್ನು ತಯಾರಿಸಿರಿ. ಲ್ಯಾಷಿಂಗ್‌ಗಳನ್ನು ಅಚ್ಚುಕಟ್ಟಾಗಿಯೂ ಸರಿಯಾಗಿಯೂ, ಬಲವಾಗಿಯೂ ಕಟ್ಟಲು ನೆನಪಿರಲಿ, ಮಾದರಿ ಚೆನ್ನಾಗಿ ಮೂಡಿ ಬಂತೆಂದು ತೋರಿದರೆ ಕ್ಲಬ್ ರೂಮಿನಲ್ಲಿ ಅಥವಾ ಇತರೆಡೆಗಳಲ್ಲಿ ಇರಿಸಿ ಪ್ರದರ್ಶಿಸಬಹುದು.

ಭಾರವನ್ನು ಎತ್ತುವ ಯಂತ್ರ (ಡೆರಿಕ್–Derrick)

ದೋಣಿಯಿಂದ ತೀರಕ್ಕೆ ಅಥವಾ ತೀರದಿಂದ ದೋಣಿಗೆ ಸಾಗಲು ಅಥವಾ ವಸ್ತುಗಳನ್ನು ಸಾಗಿಸಲು ಒಂದು ಯಾಂತ್ರೀಕೃತ ಚಾಲಕ ವಾಹಕವನ್ನು (ಡೆರಿಕ್)ನ್ನು ಉಪಯೋಗಿಸುತ್ತಾರೆ. ನದಿ ತೀರದಲ್ಲಿ ಅವಶ್ಯಕವಾದ ದಿಮ್ಮಿಗಳು (Logs) ದೊರಕುವುದಾದರೆ ಅದರಲ್ಲಿ ಡೆರಿಕ್ ತಯಾರಿಸಬಹುದು. ಈ ವಾಹಕವನ್ನು ನದೀತೀರದ ಮರಕ್ಕೆ ಕಟ್ಟಬಹುದು. ಇಲ್ಲದಿದ್ದರೆ ಸುಭದ್ರವಾದ ತ್ರಿಪಾದಿ ಯನ್ನು ನಿರ್ಮಿಸಬೇಕಾಗುತ್ತದೆ. ಡೆರಿಕ್ ಸುಲಭವಾಗಿ ಚಲಿಸುವಂತೆ ಮರ ಕ್ಕಾಗಲೀ ತ್ರಿಪಾದಕ್ಕಾಗಲೀ ಕಟ್ಟುವಾಗ ಗಮನಿಸಬೇಕಾದ ಅಂಶಗಳು: ತುದಿಯಲ್ಲಿ ಸಾಮಗ್ರಿಗಳನ್ನು ಇರಿಸಲು ಅಥವಾ ಕುಳಿತುಕೊಳ್ಳಲು ಸೌಕಯ್ಯಕ್ಕಾಗಿ ಅಟ್ಟಳಿಕೆಗಂಟು (ಸ್ಕಾಫೆಲ್ಡ್ ಹಿಚ್) ಹಲಗೆಯನ್ನು ಕಟ್ಟಬೇಕು. ಉದ್ದದ, ಬಲವಾದ ಎಡ ಅಥವಾ ಬಲ ಬದಿಗಳಿಗೆ ಎಳೆಯುವುದಕ್ಕಾಗಿ ಎರಡು, ಡೆರಿಕ್‌ನ ತುದಿಯನ್ನು ಎತ್ತುವುದಕ್ಕೆ ಒಂದು, ಅವುಗಳನ್ನು ಅನುಸರಿಸಿ ಕಟ್ಟಬೇಕು. ಇದು ಎರಡೂ ಬದಿಗಳಿಗೆ ಚಲಿಸುವುದರಿಂದ ತೂಗು ಡೆರಿಕ್ (Swinging Derrick) ಎಂದೂ ಕರೆಯಲ್ಪಡುತ್ತದೆ.

ಹಗ್ಗದ ಏಣಿ (Rope Ladder)



ದಂಡಗಳನ್ನುಪಯೋಗಿಸಿ ಸನ್ನೆಗಂಟು (ಮಾರ್‌ಲೈನ್ ಸ್ಪೈಕ್ ಹಿಚ್) ಹಾಕಿ ಹಗ್ಗದ ಏಣಿ ತಯಾರಿಸುತ್ತೇವೆ. ದಂಡಗಳು ಒಂದು ಅಥವಾ ಒಂದೂಕಾಲು ಅಡಿ ಅಂತರದಲ್ಲಿರುವಂತೆ ಏಣಿಯನ್ನು ರಚಿಸಬೇಕು.

a) ಒಂದು ಅಥವಾ ಒಂದೂವರೆ ಉದ್ದವಿರುವ ದಂಡಗಳನ್ನು ಎರಡೂ ಬದಿಗಳಲ್ಲಿ ಸಮರೇಖೆ, ಸಮಾನಾಂತರ ಹಾಕಿರುವ ಸನ್ನೆಗಂಟಿನೊಳಗೆ ಎರಡೂ ಕಡೆ ಸೇರಿಸಬೇಕು.

b) ಸುಮಾರು 6 ಇಂಚು ಉದ್ದದ ಕಡ್ಡಿಗಳನ್ನು ಉಪಯೋಗಿಸಿ ಹಗ್ಗದ ಮೂಲಕ ಏಣಿಯ ಮಾದರಿಯನ್ನು ರಚಿಸುವುದು.

c) ಒಂದೇ ಹಗ್ಗದಲ್ಲಿ ಏಣಿಗಂಟುಗಳನ್ನು (Man Harness Knot) ಹಾಕಿ ಹಗ್ಗದ ಏಣಿ ರಚಿಸುವುದು. ಕುಣಿಕೆಗಳ ಗಾತ್ರ ಒಂದೇ ಅಳತೆಯದಾಗಿರಬೇಕು. ಗಂಟುಗಳು ಸಮಾನ ಅಂತರದಲ್ಲಿರಬೇಕು.

16. ಶಿಬಿರೋಪಕರಣಗಳು



ಶಿಬಿರದಲ್ಲಿ ಸ್ಥಳೀಯ ದೊರಕುವ ವಸ್ತುಗಳಿಂದ ತಯಾರಿಸಬಹುದಾದ ಉಪಕರಣಗಳು

17. ಬಂಧಕ ಮತ್ತು ನಿಭಾವಣೆ ವಿಧಾನ (ಬ್ಲಾಕ್ ಅಂಡ್ ಟ್ಯಾಕಲ್–Block & Tackle)



ಚಕ್ರ ರಾಟೆಯನ್ನು ಇಂಗ್ಲಿಷ್‌ನಲ್ಲಿ ಬ್ಲಾಕ್ ಎಂದೂ, ಪುಲ್ಲಿ (Pulley) ಎಂದೂ ಕರೆಯುತ್ತಾರೆ. ಸೇತುವೆ ನಿರ್ಮಾಣವೇ ಮೊದಲಾದ ಸಂದರ್ಭಗಳಲ್ಲಿ ಹಗ್ಗವನ್ನು ಚಕ್ರಗಳ ರಾಟೆ ಮೂಲಕ ಹಾಯಿಸಿ, ಭಾರವಾದ ವಸ್ತುಗಳನ್ನು ಮೇಲೆತ್ತುವ ವಿಧಾನವನ್ನು ಬ್ಲಾಕ್ ಆ್ಯಂಡ್ ಟ್ಯಾಕಲ್ ಎಂದು ಕರೆಯಲಾಗುತ್ತದೆ. ಚಕ್ರ ರಾಟೆಯ ಮೂಲಕ ಹಗ್ಗವನ್ನು ಹಾಯಿಸುವುದಕ್ಕೆ ರೀವಿಂಗ್ ಎ ಟ್ಯಾಕಲ್ (Reeving a tackle) ಎನ್ನುತ್ತಾರೆ. ಚಕ್ರ ರಾಟೆಗಳ ಮೂಲಕ ಹಗ್ಗವನ್ನು ಹಾಯಿಸಿದ ನಂತರ ಉಪಯೋಗಿಸುವಾಗ ಹಗ್ಗಗಳು ಒಂದಕ್ಕೊಂದು ಸಿಲುಕಿಕೊಳ್ಳುವ ಸಾಧ್ಯತೆ ಇದೆ. ಅದನ್ನು ತಡೆಯಲು ಚಿತ್ರದಲ್ಲಿ ತೋರಿಸಿರುವಂತೆ ಒಂದು ಕೋಲನ್ನು –ಹೊಸತದ ತಡೆಯನ್ನು (Anti Twister) ಕಟ್ಟಿ ಇರಿಸಬೇಕು. ಚಕ್ರ ರಾಟೆಯ ವಿವಿಧ ಭಾಗಗಳನ್ನು ಚಿತ್ರದಲ್ಲಿ ವಿವರಿಸಲಾಗಿದೆ.

18. ಗೋಪುರಗಳು (Towers) ಹಾಗೂ ಗೇಟು, ಸೇತುವೆ, ಸಾಹಸಮಯ ಚಟುವಟಿಕೆಯ ಉಪಕರಣ



ಮುಕ್ತ ದ್ವಾರ



ಎತ್ತುವ ತಡೆ ಇರುವ ದ್ವಾರ



ಮೇಲು ಸೂರಿರುವ ದ್ವಾರ



Sheer Lashing
18 inches
Pack 451
Square Lashing
Sheer Lashing
Square Lashings
36 inches

ಸರಳ ದ್ವಾರ 1



Simple in ground gateway

ಭೂಗತ ಸರಳ ದ್ವಾರ-2



ಎತ್ತು ತಡೆ ದ್ವಾರದ ವಿವರ

ಸೂರು ಇರುವ ಉಸ್ತುವಾಲ ಅಟ್ಟಣಿಗಳು



ಸರಳವಾದ ನೋಟೀಸ್ ಬೋರ್ಡ್



ಮೇಲೆತ್ತಬಹುದಾದ ಸೇತುವೆ



Chart XXIV - The Draw Bridge

ಮತ್ತೊಂದು ರೀತಿಯ ಮೇಲೆತ್ತು ಸೇತುವೆ

Chart XXVII- The Abington Spring Bridge

ತೂಗು ಸೇತುವೆ

Chart XXX - The Banana Bridge

ಮತ್ತೊಂದು ತೂಗು ಸೇತುವೆ

Chart XXXII - The Brynbach Tower



ವೀಕ್ಷಣಾ ಗೋಪುರ (ಮೂರು ಕಾಲು) ಉಸ್ತುವಾರರ ಅಟ್ಟಣಿ–1
(ಬ್ರಿನ್ ಬಾಚ್ ಗೋಪುರ)

Chart XXXII — The Crow's Nest



(ಒಂದುಕಾಲು)

ವೀಕ್ಷಣಾ ಗೋಪುರ–ಉಸ್ತುವಾಲ ಅಟ್ಟಣಿ–2

(ಕಾಗ ಗೂಡು)



(ಎರಡುಕಾಲು)

ವೀಕ್ಷಣಾ ಗೋಪುರ–ಉಸ್ತುವಾಲಿ ಅಟ್ಟಣೆ–3



(ಮೂರುಕಾಲು)

ವೀಕ್ಷಣಾ ಗೋಪುರ–ಉಸ್ತುವಾಲಿ ಅಟ್ಟಣಿ–4

Chart XLV—Teacher's Folly
A Nursery Slope for Trainee Rock - Climbers



ಶಿಲಾರೋಹಿಗಳ ಕಲಕೆಯ ಇಳುಕಲು ಅಟ್ಟ



ಹಗ್ಗದ ಏಣಿ ಮತ್ತು ಇಳುಕಲು ಅಟ್ಟವಿರುವ ಗೋಪುರ



ಮತ್ತೊಂದು ಅತಿ ಮೇಲೆತ್ತು ಸೇತುವೆ



ದಿಮ್ಮಿಗಳಿಂದ ನಿರ್ಮಿಸಿದ ಸರಳ ಸೇತುವೆ

ಮತ್ತೊಂದು ರೀತಿಯ ವೀಕ್ಷಣಾ ಗೋಪುರ



ಏತದ ಮಾದರಿ ಸೇತುವೆ

THE SEESAW BRIDGE

ELEVATED TENT

ಮರದ ಮೇಲಿನ ತೂಗು ಅಸರ

ಟ್ರೀ ಟೋಪ್ ಶೆಲ್ಟರ್



ಏರಿಯಲ್ ರನ್ ವೇ



ನೆಟ್ ಕ್ಲೈಮಿಂಗ್



ಮಂಕಿ ಕ್ರೋಲಿಂಗ್

ಜಿಗ್ ಜಾಕ್ ವಾಕ್



ಏಣಿಯಾಟ



ಟಯರ್ ಚಿಮುಣಿ



ಟಯರ್ ವಾಲ್



ಕೇಂಬ್ರಿಡ್ಜ್ ಮೇರಿ ಗೋ-ರೌಂಡ್

ಮಂಕಿ ಬ್ರಿಡ್ಜ್

ಜೋಕಾಲಿ

ಬ್ಯಾಲೆನ್ಸ್ ವಾಕ್

ಜಾರು ಬಂಡಿ

ಸೀ ಸೋ

ಜೋಕಾಲಿ



ಟಾರ್ಜನ್ ಜಂಪ್

ಟಾನೆಲ್ ಕ್ರೋಲಿಂಗ್

ಈ ಪುಸ್ತಕದಲ್ಲಿ ಕಾಣಬರುವ ಸಮಾನಾಂತರ ಪದಗಳು (ಶಬ್ದಕೋಶ)

English		ಕನ್ನಡ
Pioneer	-	ಅಗ್ರಗಾಮಿ, ಮಾರ್ಗಕಲ್ಪಕ
Pioneering	-	ಅಗ್ರಗಾಮಿತ್ವ, ಮಾರ್ಗಕಲ್ಪನೆ
(ನಾಟ್) Knot	-	ಗಂಟು
(ಸ್ಟ್ರ್ಯಾಂಡ್) Strand	-	ಹಗ್ಗದ ಎಳೆ
(ಬೆಂಡ್) Bend	-	ಬಾಗು
(ಹಿಚ್) Hitch	-	ಮಲುಕು, ಮಲಕು
(ಸ್ಪೇಸ್) Splice	-	ಹೆಣಿಗೆ
(ಐ ಸ್ಪ್ಲೈಸ್) Eye Splice	-	ಕುಣಿಕೆ ಹೆಣಿಗೆ
(ಬ್ಯಾಕ್ ಸ್ಪೇಸ್) Back Splice	-	ಹಿಮ್ಮುಖ ಹೆಣಿಗೆ
Short Splice	-	ಜೋಡು ಹೆಣಿಗೆ, ಮೋಟು ಹೆಣಿಗೆ
Over hand loop	-	ಮೇಲುಕೈ. ಮಲಕು
Under hand loop	-	ಕೆಳಗೆ ಮಲಕು
Half Hitch	-	ಅರೆ ಮಲಕು
Brake	-	ಬಂಧಕ, ತಡೆ
Fathom	-	ಆಳ, ಮಟ್ಟು
Whipping	-	ಹುರಿ ಸುತ್ತುವುದು
Simple method	-	ಸರಳ ವಿಧಾನ
West country method	-	ಪಡುನಾಡು ವಿಧಾನ

Sail maker's method	-	ನಾವೆಗಳ ಹಾಯಿಮಾಡುವವನ ವಿಧಾನ
Pulley	-	ರಾಟೆ, ಚಕ್ರರಾಟೆ
Block	-	ಎರಡು ಚಕ್ರರಾಟೆಗಳು ಒಂದಾಗಿರುವುದು (ರಾಟೆ ಬಂಧಕ)
Hold fast	-	ಬಿಗಿಹಿಡಿತ, ಸುಭದ್ರ ಆಧಾರ
Derrick	-	ಎತ್ತು ಯಂತ್ರ, ಯಾಂತ್ರೀಕೃತ ಚಾಲನಾ ವಾಹಕ
Block and Tackle	-	ಬಂಧಕ ಮತ್ತು ನಿಭಾವಣೆ ವಿಧಾನ
Lashings	-	ಕಟ್ಟುಗಳು
Bight	-	ಕುಣಿ, ಒಳಕುಳಿ
Frapping	-	ಬಿಗಿತದಸುತ್ತು
Haul	-	ಎಳೆದಿಡುವುದು
Anchorage	-	ಲಂಗರು ಹಾಕುವುದು
Tower	-	ಗೋಪುರ
Picket	-	ಗೂಟ, ಕಂಬ
Reeve	-	ಚಕ್ರ ರಾಟೆಯೊಳಗೆ ಹಗ್ಗ ಸೇ-ರಿಸುವುದು
Tackle	-	ನಿಭಾವಣೆ
Lay of Rope	-	ಹಗ್ಗದ ಎಳೆಗಳ ಹೊಸೆತ (ಬಲಹುರಿ, ಎಡಹುರಿ)
Standing part	-	ಸ್ಥಾನಿಕ ಭಾಗ
Running part	-	ಧಾವಕ ಭಾಗ
Thickness of Rope	-	ಹಗ್ಗದ ಗಾತ್ರ/ ತೋರ
Reef knot	-	ಸಮಗಂಟು
Sheet bend	-	ಮೂಲೆಗಂಟು
Clove hitch	-	ಕೊಟ್ಟಿಗೆಗಂಟು
Bow line	-	ಕುಣಿಕೆಗಂಟು
Fisherman's knot	-	ಬೆಸ್ತರಗಂಟು

Round turn and two half hitches	-	ಸುತ್ತೊಂದೆರಡುಮಲುಕುಗಂಟು
Rolling hitch	-	ಉರುಳು ಗಂಟು
Fisherman's chair knot	-	ಅಗ್ನಿಶಾಮಕನ ಕುರ್ಚಿಗಂಟು
Sheep shank	-	ಕಣಕಾಲು ಗಂಟು, ಕವಣೆಗಂಟು
Man harness knot	-	ಏಣಿಗಂಟು
Timber hitch	-	ದಿಮ್ಮಿಗಂಟು
Square lashing	-	ಚೌಕಕಟ್ಟು
Diagonal lashing	-	ಕರ್ಣಕಟ್ಟು, ಮೂಲೆಕಟ್ಟು
Hook	-	ಕೊಕ್ಕೆ, ಕೊಂಡಿ
Fisherman's bend	-	ಬೆಸ್ತರಬಾಗು ಗಂಟು
Draw hitch	-	ಜಾರು ಮಲಕು
Cat's paw	-	ಬೆಕ್ಕು ಪಂಜು, ಮಾರ್ಜಾಲ ಪಾದ
Wrapping	-	ಕಟ್ಟುಗಳ ಮೊದಲ ಸುತ್ತುಗಳು
Safe working load	-	ಸುರಕ್ಷಿತ ಕ್ರಿಯಾಭಾರ
Hanking	-	ಹಗ್ಗವನ್ನು ಸುತ್ತಿಡುವುದು (ತಗುಲಿ ಹಾಕುವ ರೀತಿ)
Crown knot	-	ಕಿರೀಟ ಗಂಟು
Toggle	-	ಕುಣಿಕೆಯೊಳಗೆ ಜಾರಿಹೋಗದಂತೆ ತೂರಿಸುವ ತುಂಡುಕಡ್ಡಿ
Lever hitch	-	ಸನ್ನೆಗಂಟು
Marline spike		
Wedge	-	ಬೆಣೆ
Bowline on bight	-	ಕುಣಿಯೊಳಗಿನ ಕುಣಿಕೆ ಗಂಟು, ಇಕ್ಕುಳಿಕೆಗಂಟು
Scaffold hitch	-	ಅಟ್ಟಳಿಕೆ ಗಂಟು
Carrick's bend	-	ಕ್ಯಾರಿಕ್ ಬಾಗು ಗಂಟು
Stopper knot	-	ಬಂಧಕ ಗಂಟು

Blade	-	ಅಲಗು
Notch/Kert	-	ಕಚ್ಚು
Logging	-	ದಿಮ್ಮಿಗಳನ್ನು ಕತ್ತರಿಸಿ ಜೋಡಿಸುವುದು
Grain	-	ದಿಮ್ಮಿಯ ಸೀಳು ರಚನೆ
Swing of the Axe	-	ಕೊಡಲಿಯ ಬೀಸು ಚಲನೆ
Whitling	-	ಗೂಟಗಳನ್ನು ಮಾಡಲು ಕೊಂಬೆ/ ಕಡ್ಡಿಗಳನ್ನು ಹೆರೆಯುವುದು
Mousing Hook	-	ಕೊಕ್ಕೆ ಬಂಧನ
Pad	-	ಮತ್ತೆ –ಪ್ಯಾಡ್ ಎಂಬ ಪದವೇ ಉಪಯೋಗದಲ್ಲಿದೆ
Gadgets	-	ಸಾಧನಗಳು, ಸಲಕರಣೆಗಳು
Leeward side	-	ಗಾಳಿ ಬೀಸುವ ದಿಕ್ಕು

ವಿವಿಧ ರೀತಿಯ ಬೆಂಕಿ ಮಾಡುವ ವಿಧಾನಗಳು ಅಲ್ಲಲ್ಲೇ ಹೆಸರಿಸಿರುವುದರಿಂದ ಈ ಪಟ್ಟಿಯಲ್ಲಿ ಸೇರಿಲ್ಲ.

ಆಧಾರ ಗ್ರಂಥಗಳು: ಗ್ರಂಥ ಋಣ

ಸ್ಕೌಟಿಂಗ್ ಫಾರ್ ಬಾಯ್ಸ್ – ದಿ॥ **ಲಾರ್ಡ್ ಬೇಡನ್ ಪೋವೆಲ್**

ಬಾಲಕರಿಗಾಗಿ ಸ್ಕೌಟಿಂಗ್ **ರಾ, ಚಂದ್ರಶೇಖರನ್,** ರೋವರ್ ಸ್ಕೌಟ್ ಲೀಡರ್

ಪಯೋನಿಯರ್–**ಕೆ.ಬಿ.ಸಿ.ನಾಯರ್,** ಎಲ್.ಟಿ.(ಸ್ಕೌಟ್),ಎ.ಎಲ್.ಟಿ (ಕಬ್ & ರೋವರ್)

ಸ್ಕೌಟಿಂಗ್ ರಾಷ್ಟ್ರಪತಿ ಪುರಸ್ಕಾರ–**ಗುರುಮೂರ್ತಿ ನಾಯ್ಕಾಪು,** ಎ.ಎಲ್.ಟಿ. (ಸ್ಕೌಟ್)

ಟ್ರೂಪ್ ಸ್ಕೌಟರ್ಸ್ ಹ್ಯಾಂಡ್‌ಬುಕ್ – **ಟಿ.ವಿ. ನೀಲಕಂಠಂ**

ಎ ಕಂಪೇನಿಯನ್ ಫಾರ್ ಎ ಕೇಂಪರ್ – **ಡಾ॥ ಎಸ್.ಎಂ. ಭಕ್ತವಾಸನ್**

ಸ್ಕೌಟ್ಸ್ ಬುಕ್ ಆಫ್ ಗ್ಯಾಡ್ಜೆಟ್ಸ್ **ಎಫ್. ಹೈಡನ್ ಮೋರ್**

ನಾಟ್ಸ್ ಬುಕ್

ಮೋರ್ ನಾಟ್ಸ್ – ನಾಗ್

ಎ.ಪಿ.ಆರ್.ಒ. II

ನಾಟ್ಸ್ – **ಕ್ಲಿಫರ್ ಡಬ್ಲ್ಯೂ, ಆಸ್ಲೇ**

ಪ್ರೋಗ್ರೆಸ್ಸಿವ್ ಪಯೊನೀರಿಂಗ್ – **ಜಾನ್ ಥರ್ಮನ್**

ಸ್ಕೌಟ್ – **ಜಾನ್ ಸ್ವೀಟ್**

ಇಂಗ್ಲಿಷ್ – ಕನ್ನಡ ಶಬ್ದಕೋಶ – ಮೈಸೂರು ವಿಶ್ವವಿದ್ಯಾಲಯ

vivo V29 Pro
By Suhas



ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ
#39, ಶಾಂತಿ ಗೃಹ, ಅರಮನೆ ರಸ್ತೆ, ಬೆಂಗಳೂರು-560 001
ದೂರವಾಣಿ: 080-22260017, 22267490
ಇ-ಮೇಲ್: info@bsgkarnataka.org